ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 18
ಏಪ್ರಿಲ್ 29, 2012

ಪುಟ 16 ರೂ. 5/-





ಮಹಾಧಿವೇಶನ ಮಾತ್ರವಲ್ಲ ಇದು ಮಹಾ ಜನೋತ್ಸವ



ಬರ:

ಸರ್ವಪಕ್ಷಗಳ ಸಭೆ ಬರೀ ರಾಜಕೀಯ ವರಸೆಯೇ?

ಬರುತಲಿದೆ ಮೇ ದಿನ

ಶೋಷಣಾ ಮುಕ್ತ ಸಮಾಜದ ರಚನೆಯತ್ತ ಸಾಗಿದೆ ಸಂಘರ್ಷ

ಅಸಂಘಟಿತ ಕಾರ್ಮಿಕರ ಹೋರಾಟ:

ಮಾನವಂತರಾಗಿ ಬದುಕಲು ಅಗತ್ಯ ಕೂಲಿಗಾಗಿ



ಬಗರ್‌ಹುಕುಂ ಸಾಗುವಳಿ ಸಕ್ರಮ ಆಗಲೇಬೇಕಾದ ಪ್ರಶ್ನೆ



ವಿಳಂಬ ಸಹಿಲಾರೆವು........ಇನ್ನಾದರೂ ಇತ್ಯರ್ಥವಾಗಲಿ ......

ಬಗರ್ ಹುಕುಂ ಸಾಗುವಳಿ ಸಕ್ರಮದ ಪ್ರಶ್ನೆ

ಬಗರ್ ಹುಕುಂ ಸಾಗುವಳಿದಾರರಿಗೆ ಆ ಭೂಮಿಯ ಮೇಲೆ ಹಕ್ಕು ಕೊಡುವುದಕ್ಕೆ ಸರ್ಕಾರಕ್ಕೆ ಹಣಕಾಸಿನ ಹೊರೆಯೇನೂ ಬೀಳುವುದಿಲ್ಲ. ಸರ್ಕಾರಕ್ಕೆ ಮನಸ್ಸು ಬೇಕು ಅಷ್ಟೆ. ಭೂಗಳ್ಳರು, ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಭೂಮಿ ಕೊಡುವ ವಿಚಾರದಲ್ಲಿ ಇರುವ ಉತ್ಸಾಹ ಬಡ ರೈತರಿಗೆ ಕೊಡಲು ಇಲ್ಲ. ಮನೆ ಇಲ್ಲದ ಬಡವರಿಗೆ ಮನೆ ನಿವೇಶನ ಕೊಡುವ ಬಗೆಗೆಯೂ ಅಷ್ಟೆ.

ಜಿ.ಸಿ. ಬಯ್ಯಾರೆಡ್ಡಿ

ಗೋಮಾಳ, ಅರಣ್ಯ ಭೂಮಿ, ಇತ್ಯಾದಿ ಇತ್ಯಾದಿ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿಕೊಂಡು ರೈತರು ವ್ಯವಸಾಯ ಮಾಡುತ್ತಿರುವ ಪ್ರಶ್ನೆ ಏನಿದೆ ಅದನ್ನು ನಮ್ಮ ಆಳುವ ಸರ್ಕಾರಗಳು ನೋಡುವ ದೃಷ್ಟಿಯಲ್ಲಿ ಗಂಭೀರ ದೋಷವಿದೆ. ಈ ವಿಷಯಕ್ಕೆ ಸಂಬಂಧಿಸಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದು, ದೇಶದ ಆಹಾರ ಸ್ವಾವಲಂನೆಗೆ, ಆಹಾರ ಭದ್ರತೆಗೆ ಕಾಣಿಕೆ ನೀಡುವುದು, ಉದ್ಯೋಗ ಸೃಷ್ಟಿ, ಬಡತನದ ಬವಣೆ ನೀಗುವುದು, ಮುಂತಾದ ಮಹತ್ವದ ಅಂಶಗಳನ್ನು ಪರಿಗಣಿಸದೇ ಇದೊಂದು ಅಕ್ರಮ, ಕಾನೂನು ಬಾಹಿರ ಕೆಲಸ ಎಂಬಂತೆ ನೋಡುತ್ತಿರುವುದೇ ಸಮಸ್ಯೆಯ ಮೂಲವಾಗಿದೆ.

ರಾಜ್ಯದಲ್ಲಿ ಭೂಮಿ ಒಡೆತನ

ಕರ್ನಾಟಕ ರಾಜ್ಯದಲ್ಲಿ ಸುಮಾರು 1.10 ಲಕ್ಷ ಕುಟುಂಬಗಳು ಇವೆ ಎಂಬುದು ಅಧಿಕೃತ ಅಂದಾಜು. ಇದರಲ್ಲಿ ಸುಮಾರು 36 ಲಕ್ಷ ಕುಟುಂಬಗಳಿಗೆ ಭೂಮಿ ಒಡೆತನ ಎಂಬುದೇ ಇಲ್ಲ. ಅಂದರೆ ಅವರು ಒಂದೋ ಕೃಷಿಕೂಲಿಕಾರರಾಗಿ ಪರರ ಜಮೀನಿನಲ್ಲಿ ಕೂಲಿ ಮಾಡುವವರು. ಅಥವಾ ಗೇಣಿಗೆ, ವಾರಕ್ಕೆ ಅಂದರೆ ಬೆಳೆದದ್ದರಲ್ಲಿ ಭೂಮಿಯ ಒಡೆಯರು ಮತ್ತು ಬೆಳೆ ಬೆಳೆಯುವವರು ಬೆಳೆಯನ್ನು ಹಂಚಿಕೊಳ್ಳುವ ಒಪ್ಪಂದದಂತೆ ಕೃಷಿ ಮಾಡಿ ಬದುಕುವ ಭೂಹೀನರು ರೈತರು. ಇನ್ನು 73 ಲಕ್ಷ ಜನರಿಗೆ ಸ್ವಂತ ಭೂಮಿ ಇದೆ ಎಂದಾಕ್ಷಣ ಅವರೆಲ್ಲರಿಗೂ ತಮ್ಮ ತಮ್ಮ ಕುಟುಂಬದ ಹೊಟ್ಟೆ ಹೊರೆಯುವುದಕ್ಕೆ ಅಗತ್ಯವಾದಷ್ಟು ಭೂಮಿ ಇದೆ... ಅವರೆಲ್ಲ ನೆಮ್ಮದಿಯಾಗಿದ್ದಾರೆ ಎಂದೇನು ಅಲ್ಲ. 73 ಲಕ್ಷ ಜನರಲ್ಲಿ ಸು. 57 ಲಕ್ಷ ಜನರು ಸಣ್ಣ ರೈತರು. ಅಂದರೆ ಸು. 5 ಎಕರೆ ಜಮೀನು ಹೊಂದಿರುವವರು. ಸು.3–5 ಎಕರೆ ಜಮೀನು ಹೊಂದಿರುವ ಅತಿ ಸಣ್ಣ ರೈತರದೂ ದೊಡ್ಡ ಸಂಖ್ಯೆ.. ಶ್ರೀಮಂತ ರೈತರೂ ಇದ್ದಾರೆ. ಸಾವಿರಾರು ಎಕರೆ ಜಮೀನು ಹೊಂದಿರುವ ಎಂ.ಎಸ್. ರಾಮಯ್ಯ, ಖೋಡೆ, ಖೇಣಿ ಮುಂತಾದವರೂ ಬರುತ್ತಾರೆ. ಸಣ್ಣ, ಅತಿ ಸಣ್ಣ ರೈತರು ಬರೀ ತಮ್ಮ ಹೊಲ ನಂಬಿ ಬದುಕಲಾರರು. ತಮ್ಮ ಜಮೀನಿನಲ್ಲಿ ವರ್ಷದ ನಾಲ್ಕೈದು ತಿಂಗಳ ಕೆಲಸವಾದರೆ ಉಳಿದಂತೆ ಜೀವನ ನಿರ್ವಹಣೆಗಾಗಿ ಅವರು ದೊಡ್ಡ ರೈತರ ಭೂಮಿಯಲ್ಲಿ ಕೂಲಿ ಕೆಲಸ ಮಾಡಬೇಕಾದ ಪರಿಸ್ಥಿತಿ ಇದ್ದೇ ಇರುತ್ತದೆ.

ಬಾರಿ ಶ್ರೀಮಂತರು, ಭೂ ಮಾಲಿಕರನ್ನು ರೈತರು ಎಂದು ಕರೆಯಲಾಗದು. ಹೊಲದಲ್ಲಿ ಒಂದು ಹನಿ ಬೆವರನ್ನು ಸುರಿಸದ, ಕೈಯಿಂದ ಮಣ್ಣನ್ನೇ ಮುಟ್ಟದ ಜನರು ಬಾರಿ ಪ್ರಮಾಣದ ಭೂಮಿಗೆ ಮಾಲಿಕರಾಗಿ ಮೆರೆಯುತ್ತಿರುವುದು ನಿಜಕ್ಕೂ ಒಂದು ದುರಂತ ಸ್ಥಿತಿ. ಇಂತಹ



ವಿಷಮ ಪರಿಸ್ಥಿತಿಯಲ್ಲಿ ಹೊಲ, ಗದ್ದೆ, ತೋಟಗಳಲ್ಲಿ ನಿಜಕ್ಕೂ ಬೆವರು ಸುರಿಸಿ ದುಡಿಯುವ ಶ್ರಮಿಕರಿಗೆ ಭೂಮಿಯ ಮೇಲೆ ಮಾಲಿಕತ್ವ ಸಿಗಬೇಕು ಎಂಬುದು ಒಂದು ಪ್ರಜಾಸತ್ತಾತ್ಮಕ ಬೇಡಿಕೆಯಾಗಿದೆ. ಕೇರಳ ರಾಜ್ಯದಲ್ಲಿ ಕಳೆದ ವಿಧಾನ ಸಭೆಯ ಅವಧಿಯಲ್ಲಿ ಅಧಿಕಾರದಲ್ಲಿದ್ದ ಸಿಪಿಐ(ಎಂ) ನೇತೃತ್ವದ ಎಲ್‌ಡಿಎಫ್ ಸರ್ಕಾರ ಇಡೀ ಕೇರಳ ರಾಜ್ಯದಲ್ಲಿ ಸ್ವಂತ 'ಮನೆ ಇಲ್ಲದ ಸ್ಥಿತಿಯಲ್ಲಿ ಯಾರೂ ಇರಬಾರದು. ಪ್ರತಿಯೊಬ್ಬರಿಗೂ ಸ್ವಂತದ ಮನೆ ನಿವೇಶನ ನೀಡಬೇಕೆಂಬ ಗುರಿಯೊಂದಿಗೆ ಉತ್ತಮ ಸಾಧನೆ ಮಾಡಿದ್ದು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು.

ಅದು ಕೇರಳದ ಸಮಾಚಾರ. ಆದರೆ ಕರ್ನಾಟಕ ರಾಜ್ಯದಲ್ಲಿ ಇರುವ ಪರಿಸ್ಥಿತಿಯೇ ಬೇರೆ

ರಕ್ಷಣೆ ಹೆಸರಿನಲ್ಲಿ ಕಾನೂನು ಬದ್ಧ 'ಭೂಗಳ್ಳತನ'

ಬೆಂಗಳೂರು ನಗರವೊಂದರಲ್ಲೇ ಸುಮಾರು 40 ಸಾವಿರ ಎಕರೆಗಳಷ್ಟು ಸರ್ಕಾರಿ ಭೂಮಿ ಭೂಗಳ್ಳರ, ಶ್ರೀಮಂತರ, ರಿಯೆಲ್ ಎಸ್ಟೇಟ್ ಲಾಭಿಕೋರರ ಪಾಲಾಗಿದೆ.... ಆ ಬಗೆಗೆ ತನಿಖೆ ನಡೆಸಿ ಅದನ್ನು ವಶಕ್ಕೆ ತೆಗೆದುಕೊಳ್ಳಬೇಕು ಎಂದು ರಾಜ್ಯದ ವಿಧಾನ ಸಭೆಯಲ್ಲಿ ಒತ್ತಾಯಿಸಿದ್ದೇ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪದಾಧಿಕಾರಿಗಳೂ ಆಗಿರುವ ಸಿಪಿಐ(ಎಂ) ಶಾಸಕ ಜಿ.ವಿ. ಶ್ರೀರಾಮರೆಡ್ಡಿಯವರು. ಆ ಪ್ರಸ್ತಾಪಕ್ಕೆ ಇತರ ಕೆಲವರೂ ಬೆಂಬಲಿಸಿ ರಾಮಸ್ವಾಮಿ ಎಂಬ ಆಯೋಗ ರಚನೆಯಾಗಿದ್ದು. ಆ ಸಮಿತಿ ಸಾಕಷ್ಟು ತನಿಖೆ ಪರಿಶೀಲನೆ ನಡೆಸಿ ವರದಿ ನೀಡಿದ್ದು, ಸಮಿತಿ ಶಿಫಾರಸ್ಸಿನ ಆಧಾರದಲ್ಲಿ ಸರ್ಕಾರಿ ಜಮೀನನ್ನು ಭೂಗಳ್ಳರಿಂದ ವಶಕ್ಕೆ ತೆಗೆದುಕೊಳ್ಳುವ ಕೆಲಸ ಆರಂಭವಾಗಿದ್ದು ಕುಮಾರ ಸ್ವಾಮಿಯವರು ಮುಖ್ಯ ಮಂತ್ರಿಯಾಗಿದ್ದ ಜೆಡಿ(ಎಸ್)–ಬಿಜೆಪಿ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ. ಈ ಎಲ್ಲವೂ ಇತ್ತೀಚಿನ ಚರಿತ್ರೆ.

ಕರ್ನಾಟಕ ರಾಜ್ಯದಲ್ಲಿ ಒಟ್ಟಾರೆ ಆಕ್ರಮಣಕ್ಕೆ, ಒತ್ತುವರಿಗೆ, ಕಳ್ಳತನಕ್ಕೆ ಗುರಿಯಾಗಿರುವ ಸರ್ಕಾರಿ ಭೂಮಿಯ ಕುರಿತು ಪರಿಶೀಲನೆ ನಡೆಸಿ 'ಡಾ|| ಬಾಲಸುಬ್ರಮಣ್ಯಂ ನೇತೃತ್ವದ ಕಾರ್ಯಪಡೆ' ವರದಿ ನೀಡಿದ್ದು ರಾಜ್ಯದಲ್ಲಿ ಸುಮಾರು 12 ಲಕ್ಷ ಎಕರೆ ಜಮೀನು ಅಕ್ರಮಣಕ್ಕೆ ತುತ್ತಾಗಿದೆ ಎಂದು ಗುರುತಿಸಲಾಗಿದೆ. ಇಂತಹ ಜಮೀನುಗಳ ಮರುವಶ, ರಕ್ಷಣೆಯ ಉದ್ದೇಶಕ್ಕೆಂದು ಹೇಳಿ 'ಸಾರ್ವಜನಿಕ ಆಸ್ತಿಗಳ ಸಂರಕ್ಷಣಾ ನಿಗಮ' ಎಂಬುದೊಂದನ್ನು ರಚಿಸಲಾಗಿದೆ. ಸರ್ಕಾರಿ ಜಮೀನಿಗೆ ಬೇಲಿ ಹಾಕಿ, ಫಲಕ ನೆಟ್ಟು ಜಮೀನು–ಜಾಗ 'ಸಂರಕ್ಷಣೆ' ಮಾಡುವ ಕೆಲಸವೂ ನಡೆಯುತ್ತಿದೆ.

ಶ್ರೀಮಂತರು, ಭೂಗಳ್ಳರೂ ನಡೆಸಿರುವ ಭೂಗಳ್ಳತನವನ್ನು ಪತ್ತೆ ಹಚ್ಚಿ ಅದನ್ನು ತೆರವುಗೊಳಿಸಿ ಸರ್ಕಾರ ಮರುವಶ ಮಾಡಿಕೊಳ್ಳುವುದನ್ನು ಪ್ರಗತಿಪರರು, ಸಾಮಾಜಿಕ ಕಾಳಜಿ ಉಳ್ಳವರು ಯಾರೂ ವಿರೋಧಿಸುವುದಿಲ್ಲ. ಆದರೆ ಅದು ಅಷ್ಟು ಸರಳವಾದ ವಿಷಯವಲ್ಲ. ವಿಷಯದ ಆಳಕ್ಕಿಳಿದು ಈ ಪ್ರಶ್ನೆಯನ್ನು ಸರಿಯಾಗಿ ಪರಿಶೀಲಿಸಿ ತೀರ್ಮಾನಕ್ಕೆ ಬರಬೇಕಿದೆ.

ಕಬಳಿಕೆ–ಸಾಗುವಳಿಗಳ ನಡುವೆ ವ್ಯತ್ಯಾಸವಿದೆ

ಮೊದಲನೆಯದಾಗಿ ಬಾಲಸುಬ್ರಮಣ್ಯಂ ಸಮಿತಿಯು ಬಡವರು ಜೀವನದ ಆಸರೆಗಾಗಿ, ಹೊಟ್ಟೆ ಹೊರೆದುಕೊಳ್ಳುವ ಮಾರ್ಗವಾಗಿ ಗೋಮಾಳ, ಬೀಳು ಭೂಮಿ ಮುಂತಾದ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿರುವ ಬಗರ್ ಹುಕುಂ ಸಾಗುವಳಿದಾರರನ್ನೂ, ಮಹಡಿಗಳ ಮೇಲೆ ಮೇಲೆ ಮಹಡಿ ಕಟ್ಟಿಕೊಂಡು, ಮನೆಯ ಕಾಂಪೌಂಡಿನಲ್ಲಿ ಈಜುಕೊಳ ನಿರ್ಮಿಸಿಕೊಳ್ಳುವ, ವಿದೇಶಿ ಕಾರುಕೊಳ್ಳುವ ತೆವಲಿಗಾಗಿ ಸರ್ಕಾರಿ ಜಮೀನಿಗೆ ಅಕ್ರಮ ದಾಖಲೆ ಸೃಷ್ಟಿಸಿ ಭೂಮಿ ಲಪಟಾಯಿಸುವವನ್ನು ಒಂದೇ ತಕ್ಕಡಿಯಲ್ಲಿ ತೂಗುತ್ತದೆ. ಇಬ್ಬರನ್ನೂ ಅತಿಕ್ರಮಣದಾರರು ಅನ್ನುತ್ತದೆ. ಅದೇ ರೀತಿಯಲ್ಲಿ ನಗರ, ಮಹಾನಗರಗಳನ್ನು ಕಟ್ಟುವ, ನಗರಗಳ ಶ್ರೀಮಂತರು, ಮಧ್ಯಮವರ್ಗದ ಜನರ ಹಲವು ಅಗತ್ಯಗಳ ಸಲುವಾಗಿ ಅಗ್ಗದ ಕೂಲಿಯವರಾಗಿ ದಕ್ಕುವ ನಗರದ ಬಡವರು, ಯಾವುದೋ ಸರ್ಕಾರಿ ಜಮೀನಿನಲ್ಲಿ ಗುಡಿಸಲು ಕಟ್ಟಿಕೊಂಡು ವಾಸ ಮಾಡುತ್ತಿದ್ದಲ್ಲಿ ಅವರನ್ನು ಅಪರಾಧಿಗಳನ್ನಾಗಿ ನೋಡುವುದು ತಪ್ಪಾಗುತ್ತದೆ. ಹಾಗೆಯೇ ದುಬಾರಿ ಬಾಡಿಗೆ ಕಟ್ಟಲಾರದ, ಸ್ವಂತ ಮನೆ, ನಿವೇಶನ ಇಲ್ಲದ ಬಡವರು, ಕೆಳ ಮಧ್ಯಮ ವರ್ಗದ ಜನ ಸರ್ಕಾರಿ ಜಮೀನಿನಲ್ಲಿ ಮನೆ ಕಟ್ಟಿಕೊಂಡಿದ್ದಲ್ಲಿ ಅದನ್ನು ನೋಡುವ ದೃಷ್ಟಿಯಲ್ಲಿ ಕಾರ್ಯಪಡೆಗೆ ಭಿನ್ನ ಧೋರಣೆ ಬೇಕಾಗುತ್ತದೆ. ಈ ಪ್ರಶ್ನೆಗಳಲ್ಲಿ ಸಮಿತಿಗೆ ಭಿನ್ನ ಧೋರಣೆ ಇಲ್ಲ ಎನ್ನುವುದು ಇಲ್ಲಿ ಮುಖ್ಯ ಸಮಸ್ಯೆ.

ಸರ್ಕಾರವೇ ನಡೆಸುವ ಭೂ ಗಳ್ಳತನ

ರಾಮಸ್ವಾಮಿ ನೇತೃತ್ವದ ಸಮಿತಿ ಪತ್ತೆ ಹಚ್ಚಿದ ಸರ್ಕಾರಿ ಜಮೀನು ಒತ್ತುವರಿ ತೆರವುಗೊಳಿಸಿದ

ಪುಟ 12ಕ್ಕೆ....

ಉದಾರ ಧನ ಸಹಾಯ ನೀಡಲು ಮನವಿ

ಕರ್ನಾಟಕ ರಾಜ್ಯದ ಲಕ್ಷಾಂತರ ಕುಟುಂಬಗಳ ಬದುಕಿನ ಜ್ವಲಂತ ಪ್ರಶ್ನೆಯಾದ ಭೂಮಿ ಪ್ರಶ್ನೆಯ ಆಧಾರದಲ್ಲಿ ರಾಜ್ಯದ ಉದ್ದಗಲಕ್ಕೂ ಆಂದೋಲನದ ಸಿದ್ದತೆಗಳು ತೀವ್ರವಾಗಿ ನಡೆಯುತ್ತಿವೆ.

ರಾಜ್ಯವ್ಯಾಪಿಯಾಗಿ ಸಂಚರಿಸುವ ಜಾಥಾಗಳು ಪ್ರಚಾರ ಕಾರ್ಯಕ್ರಮಗಳು, ಸ್ಥಳೀಯ ಹಂತದ ಹೋರಾಟಗಳು. ಈ ಹೋರಾಟಗಳ ತಾರಕ ರೂಪವಾಗಿ ರಾಜಧಾನಿಯಲ್ಲಿ ಏ. 21 ರಿಂದ ಅನಿರ್ಧಿಷ್ಟಾವಧಿ ಮಹಾ ಧರಣಿ.

ಇವೆಲ್ಲವೂ ಪರಿಣಾಮಕಾರಿಯಾಗಿ ನಡೆಯಬೇಕಾದರೆ ಹಣ ಬೇಕು. ರಿಯೆಲ್ ಎಸ್ಟೇಟ್ ಉದ್ದಿಮೆದಾರರು, ಜನ ವಂಚಕವಾದ ಭ್ರಷ್ಟ ಮೂಲದಿಂದ ನಿಧಿ ಸಂಗ್ರಹ ಮಾಡಿ ಚಳುವಳಿ ನಡೆಸುವುದು ಜನಪರ ಸಂಘಟನೆಗಳ ವಿಧಾನವಲ್ಲ. ಅದರಿಂದ ಚಳುವಳಿಯ ಗುರಿ ಈಡೇರುವುದು ಕೂಡ ಸಾಧ್ಯವಿಲ್ಲ.

ಈ ಹಂತದ ಈ ಭೂ ಆಂದೋಲನಕ್ಕೆ ಸು. 20 ಲಕ್ಷ ರೂಪಾಯಿ ಖರ್ಚು ಬರಲಿದೆ ಎಂದು ಅಂದಾಜಿಸಲಾಗಿದೆ.

ಜನ ಚಳುವಳಿಗಳ ಹಿತೈಷಿಗಳು, ಪ್ರಗತಿಪರ ವ್ಯಕ್ತಿಗಳು ಮತ್ತು ಸಂಘ ಸಂಸ್ಥೆಗಳು ಉದಾರವಾಗಿ ಧನ ಸಹಾಯ ಮಾಡಬೇಕೆಂದು ಈ ಮೂಲಕ ಕೋರಲಾಗಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಇವರನ್ನು ಇನ್ನಷ್ಟು ದಂಡಿಸಿ!

ಗಣಿ ಕಂಪನಿಗಳಿಂದ ಲಂಚಪಡೆದ ಆರೋಪ ಎದುರಿಸುತ್ತಿರುವ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರ ಮೇಲಿನ ಕೆಲ ಪ್ರಕರಣಗಳ ಕುರಿತು ಸಿ.ಬಿ.ಐ ನಂತಹ ಸ್ವತಂತ್ರ ತನಿಖಾ ಸಂಸ್ಥೆಯಿಂದ ತನಿಖೆ ನಡೆಸಬೇಕೆಂದು 'ಕೇಂದ್ರ ಉನ್ನತಾಧಿಕಾರ ಸಮಿತಿ'ಯು ಸರ್ವೋಚ್ಚ ನ್ಯಾಯಾಲಯಕ್ಕೆ ವರದಿಯನ್ನು ಸಲ್ಲಿಸಿರುವುದು ಸ್ವಾಗತಾರ್ಹವಾಗಿದೆ.

ಮುಖ್ಯಮಂತ್ರಿಯಾಗುವ ಕನಸು ಕಾಣುತ್ತಿರುವ ಯಡಿಯೂರಪ್ಪನವರಿಗೆ ತೀವ್ರ ಮುಖಭಂಗವಾಗಿದೆ.

ತಾವು ಯಾವುದೇ ಲಂಚ ಪಡೆದಿಲ್ಲ, ಅಕ್ರಮ ಎಸಗಿಲ್ಲ, ನಿರಪರಾಧಿಯೆಂದೇ ಯಡಿಯೂರಪ್ಪನವರು ವಾದಿಸುತ್ತಿದ್ದುದನ್ನೂ ಈ ವರದಿಯು ಸ್ಪಷ್ಟವಾಗಿ ನಿರಾಕರಿಸಿ, ಪ್ರಕರಣಗಳ ಸತ್ಯಾಸತ್ಯತೆಯನ್ನು ಎತ್ತಿ ಹಿಡಿದಂತಾಗಿದೆ. ಈ ಕುರಿತು ಇತ್ತೀಚೆಗೆ ರಾಜ್ಯ ಉಚ್ಚ ನ್ಯಾಯಾಲಯ ನೀಡಿದ ಖುಲಾಸೆಯ ತೀರ್ಪನ್ನು ಸಿಇಸಿಯ ವರದಿ ಪ್ರಶ್ನಿಸಿದಂತಾಗಿದೆ. ರಾಜ್ಯದ ಉಚ್ಚ ನ್ಯಾಯಾಲಯದ ತೀರ್ಪನ್ನು ಪ್ರಸ್ತಾಪಿಸಿ ತಾನು ನಿರಪರಾಧಿ, ದೋಷ ಮುಕ್ತನೆಂದೂ, ತನ್ನನ್ನೇ ಮುಖ್ಯಮಂತ್ರಿಯನ್ನಾಗಿ ಪುನಃ ನೇಮಿಸಬೇಕೆಂದು ಹೇಳುತ್ತಿದ್ದುದ್ದನ್ನು ನಿರಾಕರಿಸಿದಂತಾಗಿದೆ.

ಅದೇ ಹೊತ್ತಿನಲ್ಲಿ ಕರ್ನಾಟಕ ಲೋಕಾಯುಕ್ತರು ನೀಡಿದ ವರದಿಯನ್ನೂ ಧೃಡೀಕರಿಸಿದೆ.

ಜಿಂದಾಲ್ ಮತ್ತು ಅದಾನಿ ಕಂಪನಿಗಳಿಂದ ಯಡಿಯೂರಪ್ಪ-ಅವರ ಕುಟುಂಬದ ಸದಸ್ಯರು 30 ಕೋಟಿರೂ. ಹಣವನ್ನು ಲಂಚವಾಗಿ ಪಡೆದ ಆರೋಪವಿದಾಗಿದೆ. ಇವರ ಕುಟುಂಬದ ಸದಸ್ಯರ ಪ್ರೇರಣಾ ಟ್ರಸ್ಟ್‌ಗೆ ಜಿಂದಾಲ್ ಸಂಸ್ಥೆಯು 10 ಕೋಟಿ ರೂ.ಗಳನ್ನು, ರಾಚೇನಹಳ್ಳಿಯಲ್ಲಿ 20 ಲಕ್ಷರೂ. ಎರಡು ನಿವೇಶನಗಳನ್ನು 20 ಕೋಟಿ ರೂ.ಗಳಿಗೆ ಜಿಂದಾಲ್ ಕಂಪನಿ ಖರೀದಿಸಿರುವುದು ಲಂಚವೆಂದೇ ಪ್ರಸ್ತಾಪಿತವಾಗಿದೆ. ಈ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ ಯಡಿಯೂರಪ್ಪನವರನ್ನು ಒಳಗೊಂಡು ವಿವಿದ ವಾದಿಗಳ ವಾದಗಳನ್ನು ಆಲಿಸಿದ ಬಳಿಕವೇ ಈ ನಿರ್ಧಾರ ಕೈಗೊಂಡಿರುವುದು ಗಮನಾರ್ಹ.


ಸಿಇಸಿ ಸಲ್ಲಿಸಿರುವ ವರದಿಯ ಬಗ್ಗೆ ಸುಪ್ರಿಂ ಕೋರ್ಟ್ ವಿಚಾರಣೆ ನಡೆಸಿ ಅಂತಿಮ ನಿರ್ದೇಶನ ನೀಡಬೇಕಿದೆ. ಈ ಆಧಾರದಲ್ಲಿ ಯಡಿಯೂರಪ್ಪನವರ ಈ ಪ್ರಕರಣದ ಸಮಗ್ರ ತನಿಖೆಯಾಗಲೇಬೇಕು. ಈಗಿನ ವರದಿಯನ್ನು ಹಗರಣದಲ್ಲಿ ಭಾಗಿಯಾದವರು ಗಂಭೀರವಾಗಿ ಪರಿಗಣಿಸಿ ಹಗರಣ ಮುಚ್ಚಿ ಹಾಕುವ ಯಾವುದೇ ಹುನ್ನಾರಗಳಿಗೆ ಕೈಹಾಕಲಾರರೆಂದು ಭಾವಿಸದಿರಲಾಗದು. ಅವುಗಳನ್ನು ವಿಫಲಗೊಳಿಸಬೇಕಿದೆ. ಅಂತಹ ನಿಲುವನ್ನು ಸುಪ್ರಿಂ ಕೋರ್ಟ್ ಕೈಗೊಳ್ಳುತ್ತದೆಯೆಂಬ ನಿರೀಕ್ಷೆ ಜನತೆಯದ್ದು. ಯಡಿಯೂರಪ್ಪನವರ ಮೇಲೆ ಇಂತಹ ಹತ್ತಾರು ಹಗರಣ-ಆರೋಪಗಳಿದ್ದು ಅವುಗಳ ಸಮಗ್ರ ತನಿಖೆಯಾಗಬೇಕು. ಇಷ್ಟೊಂದು ಆರೋಪಗಳಿರುವ ವ್ಯಕ್ತಿ ಮತ್ತೇ ಮುಖ್ಯಮಂತ್ರಿಯಾಗಲು ಹಪಾಹಪಿಸುವುದು ರಾಜ್ಯದ ಜನತೆಯ ಒಳತಿಗಲ್ಲ, ಬದಲಾಗಿ ತನ್ನನ್ನು ರಕ್ಷಿಸಿಕೊಳ್ಳಲು ಎಂಬುದೂ ನಿಚ್ಚಳ.

ಇದೇ ಹೊತ್ತಿನಲ್ಲಿ ಇದು ಕೇವಲ ಒಂದು ವ್ಯಕ್ತಿ ಮಾತ್ರ ಎಸಗಿದ ಅಪರಾದವಲ್ಲ, ಇಡೀ ಸರಕಾರವೇ, ಹತ್ತಾರು ಸಚಿವರು, ಶಾಸಕರು ಅಧಿಕಾರಶಾಹಿ ಆಳುವ ಬಿಜೆಪಿ ಪಕ್ಷ, ಆರ್.ಎಸ್.ಎಸ್ ಹೀಗೆ ಎಲ್ಲರೂ ಭಾಗಿಯಾದ ನೂರಾರು ಪ್ರಕರಣಗಳು ಇಲ್ಲಿವೆ. ಹೀಗಾಗಿ ಇಡೀ ಬಿಜೆಪಿ ಸರಕಾರ- ಸಂಘಪರಿವಾರ ಮಹಾ ಅಪರಾಧಿಯಾಗಿ ನಗ್ನಗೊಂಡು ನಿಂತಿದೆ. ಹೀಗಿರುವಾಗ ಈ ತಪ್ಪಿತಸ್ಥರಿಗೆಲ್ಲಾ ಶಿಕ್ಷೆಯಾಗಲೇಬೇಕು. ಆದ್ದರಿಂದ ಈ ಸರಕಾರ ರಾಜೀನಾಮೆ ನೀಡಿ ತೊಲಗಲೇಬೇಕು. ಇಲ್ಲಿ ಒಬ್ಬರು ಖಳನಾಯಕರು, ಇನ್ನೊಬ್ಬರನ್ನು ನಾಯಕರು ಎಂಬಂತೆ ಬಿಂಬಿಸುವದೂ ಅರ್ಥಹೀನ ಮಾತ್ರವಲ್ಲ ಅಪರಾಧಗಳನ್ನು ಮುಂದುವರಿಸುವ ಸೂಚನೆಯೂ ಆಗಿದೆ. ಇದಕ್ಕೆ ಜಾತಿಯ ಗುರಾಣಿ ಹಿಡಿದು ರಕ್ಷಿಕೊಳ್ಳುವುದು , ಮಠಾದೀಶರು ಅಂತಹವರ ಟೊಂಕ ಕಟ್ಟುವುದೂ ಸಹ ನೀಚತನ.

ಈ ಹಿನ್ನೆಲೆಯಲ್ಲಿ ಕಾನೂನು, ಸಂವಿಧಾನ ನಿಷ್ಠುರವಾಗಿ ಜಾರಿಯಾಗಬೇಕು. ಸುಪ್ರಿಂ ಕೋರ್ಟ್ ಆ ದಿಕ್ಕಿನಲ್ಲಿ ದೃಡ ಕ್ರಮ ವಹಿಸುವ ನಿರೀಕ್ಷೆ ಜನತೆಯದ್ದು.

ಬರೀ ರಾಜಕೀಯ ವರಸೆಯೇ

ಗರ ಬಡಿದು ಕೊಂಡಿದ್ದ ಸರಕಾರ, ಆಡಳಿತ ಮತ್ತು ವಿರೋಧ ಪಕ್ಷಗಳು ದಿಡೀರನೇ ಎಚ್ಚೆತ್ತು ಬರದ ಸುತ್ತ ಬರ,ಬರ ಸುತ್ತ ತೊಡಗಿವೆ. ಮಠ, ಗುಡಿ ಗುಂಡಾರ, ಭೂತ-ಪ್ರೇತ ದರ್ಶನ, ದೆಹಲಿ ಯಾತ್ರೆಗಳಲ್ಲೇ ಮುಳುಗಿ ರಾಜ್ಯಭಾರ ನಿಭಾಯಿಸುತ್ತಿದ್ದ ಮುಖ್ಯಮಂತ್ರಿ ಸದಾನಂದಗೌಡರೂ ಸಹ ಕೆಲವು ಹಳ್ಳಿಗಳ ದರ್ಶನ ಮಾಡಿ ಪರಿಸ್ಥಿತಿಯನ್ನು 'ಖುದ್ದಾಗಿ' ಕಂಡಿದ್ದಾರೆ! ರಾಜಕೀಯ ನಿಷ್ಕ್ರೀಯತೆ, ಒಳಜಗಳದ ತಲೆ ಭಾರದಿಂದ ಹಾಸಿಗೆ ಹಿಡಿದು ಮಕಾಡೆ ಮಲಗಿದ್ದ ಅಧಿಕೃತ ವಿರೋಧ ಪಕ್ಷದ ನಾಯಕರೂ ಜಿಲ್ಲೆಗಳನ್ನು ಸುತ್ತಿ ವಾಪಾಸಾಗಿದ್ದಾರೆ. ಅವರ ಸರ್ವೋಚ್ಚ ನಾಯಕಿ ಸೋನಿಯಾ ಮೇಡಂರವರೇ ಇವರನ್ನು ಎಬ್ಬಿಸಿ ಹೊರ ದಬ್ಬಬೇಕಾಗಿ ಬಂದ ಬಗ್ಗೆ ಅವರಲ್ಲಿ ವಿಷಾಧವೇನಿಲ್ಲ !.ಇನ್ನೊಂದೆಡೆ ಜನತೆ ಬೀದಿಗಿಳಿದು ಧಿಕ್ಕಾರದ ಘೋಷಣೆ ಕೂಗುತ್ತಿದ್ದಾರೆ. ಇವೆಲ್ಲವುಗಳ ಒಂದು ಪರಿಣಾಮವಾಗಿ ಸರ್ಕಾರ ಸರ್ವಪಕ್ಷಗಳ ಸಭೆಯನ್ನು ನಡೆಸಿದೆ. ಅಂತಿಮವಾಗಿ ನಿಯೋಗವೊಂದು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿ ಹೆಚ್ಚಿನ ಅನುದಾನ ಪಡೆಯುವಂತಾದರೆ ಬರದ ಬವಣೆ ನೀಗುತ್ತವೆ (ಯಾರಿಗೆ?) ಎಂಬ ಪರಿಹಾರೋಪಾಯಕ್ಕೆ ಸರ್ಕಾರ ಮೊರೆ ಹೋಗಿದೆ.



ನಿರ್ಲಕ್ಷದ ನಂತರ

ರಾಜ್ಯ ಬರದ ದವಡೆಗೆ ತುತ್ತಾಗಿರುವ ವಿಷಯ ಇಂದು ನಿನ್ನೆಯ ಸಂಶೋಧನೆಯೇನಲ್ಲ, ಭೂತ-ಪ್ರೇತಗಳ ಅಣತಿಯೂ ಅಲ್ಲ. ಈಗಾಗಲೇ ಸುಮಾರು 123 ತಾಲೂಕುಗಳು ತೀವ್ರ ಮಳೆ ಕೊರತೆಯಿಂದಾಗಿ ಬರದ ಭಾಧೆಗೆ ಸಿಕ್ಕಿ ಹಾಕಿಕೊಂಡ ಬಗ್ಗೆ, ಕುಡಿದ ನೀರು, ಜಾನುವಾರುಗಳಿಗೆ ಮೇವು-ನೀರಿನ ಕೊರತೆ, ಬೆಳೆಹಾನಿ, ಕೃಷಿಕರಿಗೆ-ಕೂಲಿಕಾರರಿಗೆ ಕೆಲಸವಿಲ್ಲದ ಪರದಾಟಗಳು ಕಳೆದ ಆರು ತಿಂಗಳ ಹಿಂದಿನಿಂದಲೇ ನಿತ್ಯದ ಯಾತನೆಗಳು. ಸದಾನಂದಗೌಡ ಮುಖ್ಯಮಂತ್ರಿಯಾದಗಲೇ ಪರಿಸ್ಥಿತಿ ಬಿಕ್ಕಟ್ಟಿನತ್ತ ಸಾಗುತ್ತಿದ್ದದ್ದೂ ಗೋಚರವೇ. ಎಡ ಪಕ್ಷಗಳು ಮತ್ತು ಜನ ಸಂಘಟನೆಗಳು ಮೇಲಿಂದ ಮೇಲೆ ಈ ಪ್ರಶ್ನೆಗಳನ್ನೆತ್ತಿದ್ದವು, ಪ್ರತಿ ಭಟಿಸಿದವು. ಜನರೂ ಸ್ವಯಂ ಆಗಿ ಕಷ್ಟಗಳನ್ನು ಪರಿಹರಿಸಲು ಬೀದಿಗಿಳಿದರು. ಇಷ್ಟಾದಾಗಲೂ ಸರ್ಕಾರವಾಗಲೀ, ಜನಪ್ರತಿನಿಧಿಗಳಾಗಲೀ ಕಿಂಚಿತ್ತೂ ಗಮನ ಹರಿಸಲೇ ಇಲ್ಲ. ಎಲ್ಲಾ ಹಂತಗಳಲ್ಲಿನ ಆಡಳಿತವನ್ನು ಚುರುಕುಗೊಳಿಸಲಿಲ್ಲ. ಯೋಜನೆ ರೂಪಿಸಿ, ಸಂಪನ್ಮೂಲ ಕ್ರೋಢೀಕರಿಸಿ ನೆರವಿಗೆ ಇಳಿಯಲಿಲ್ಲ. ಸರಿ ಸುಮಾರು ರಾಜ್ಯದ ಮುಕ್ಕಾಲು ಭಾಗ ಬರಪೀಡಿತವಾಗಿ, ಕೃಷಿ-ನಾಶವಾಗಿ ಜನ ತತ್ತರಿಸುತ್ತಿರುವಾಗ, ಬದುಕೇ ಅಪಾಯದತ್ತ ತಳ್ಳಲ್ಪಡುತ್ತಿರುವಾಗ ಏನೊಂದೂ ಕ್ರಮ ವಹಿಸದೇ ನಿರ್ಲಕ್ಷ್ಯತನ ತೋರಿಸುವುದು, ಕ್ರಿಮಿನಲ್ ಅಪರಾಧ ಅಲ್ಲವೇ?. ಇಡಿ ಸಮಯವನ್ನು ಕೇವಲ ಅಧಿಕಾರದ ಕುರ್ಚಿ ಉಳಿಸಿಕೊಳ್ಳಲು, ಅಧಿಕಾರ ದಾಹದ ಒಳಜಗಳದಲ್ಲಿ, ನಡೆಸಲಾದ ಅಕ್ರಮ-ಹಗರಣ, ಭ್ರಷ್ಟಾಚಾರದ ಪ್ರಕರಣಗಳನ್ನು ಮುಚ್ಚಿ ಹಾಕಿಕೊಳ್ಳುವಲ್ಲಿ, ಲೂಟಿ ಮುಂದುವರಿಸುವಲ್ಲಿಯೇ ಕಾಲ ಕಳೆದದ್ದು ಅಕ್ಷಮ್ಯ. ಜನಪ್ರತಿನಿಧಿಗಳೆನಿಸಿಕೊಂಡ ಶಾಸಕರು, ಸಚಿವರು, ಮುಖ್ಯಮಂತ್ರಿ ಮತ್ತು ಆಡಳಿತ ಪಕ್ಷದ್ದು ಜನದ್ರೋಹವೇ ಆಗಿದೆ.

ಏನಾಕಾರಣ?

ಈಗಲೂ ಇಲ್ಲಿ ಯೋಚಿಸಬೇಕಾದದ್ದು ಸರ್ಕಾರಕ್ಕೆ ಈಗ ಎಚ್ಚರ ಹುಟ್ಟಿದ್ದಾದರೂ ಹೇಗೆ? ಯಾಕೆ?. ತಮ್ಮ ನಿರ್ಲಕ್ಷ್ಯ ತನಕ್ಕೆ ಪಟ್ಟ ಪಶ್ಚಾತಾಪದಿಂದ ಈ ಚುರುಕು ಮೂಡಿತೇ? . ಖಂಡಿತ ಅಲ್ಲ.

ತನ್ನನ್ನೇ ಮುಖ್ಯಮಂತ್ರಿಯನ್ನಾಗಿಸಬೇಕೆಂದು ವಿವಿಧ ತಂತ್ರಗಳು, ಒತ್ತಡಗಳನ್ನು ಹಾಕುತ್ತಿರುವ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರು ಬರದ ತೀವ್ರತೆ, ಸರಕಾರದ ನಿರ್ಲಕ್ಷ್ಯದಿಂದ ಜನತೆಯಲ್ಲಿ ಬೆಳೆಯುತ್ತಿರುವ ತೀವ್ರ,

– 6ನೇ ಪುಟಕ್ಕೆ

ಕಾರ್ಟೂನ್ ಕಾರ್ನರ್



....ಬಗರ್ ಹುಕುಂ ಸಾಗುವಳಿ

–2ನೇ ಪುಟದಿಂದ

ನಂತರ ಬಿಜೆಪಿ ಸರ್ಕಾರ ಮಾಡಿದ್ದಾದರೂ ಏನು? ಆ ಜಾಗವು ಸರ್ಕಾರಿ ಶಾಲೆ, ಕಾಲೇಜು, ಆಸ್ಪತ್ರೆ, ಬಸ್ ನಿಲ್ದಾಣ ಇತ್ಯಾದಿ ಸಾರ್ವಜನಿಕ ಉದ್ದೇಶಗಳಿಗಾಗಿ ಬಳಕೆಯಾಗುವಂತೆ ಯೋಜಿಸಿತೆ ? ಅಥವಾ ಭವಿಷ್ಯದ ಜನಾಂಗಕ್ಕೆ ಅದು ಬೇಕಾಗುತ್ತದೆ ಎಂದು ಸಂರಕ್ಷಿತೇ ? ಉಹುಂ. ಅದೇ ಶ್ರೀಮಂತರು, ಉಳ್ಳವರ ಮಡಿಲಿಗೆ ಮತ್ತೆ ಭೂಮಿಯನ್ನು ಹಾಕಲು ಹೊರಟಿತು. ಅದು ಬಹಿರಂಗ ಹರಾಜು ಮೂಲಕ. ದುಂದು ವೆಚ್ಚ, ಜಾತಿವಾದಿ ಮಠಗಳಿಗೆ, ಕೋಮುವಾದಿ ಸಂಘಪರಿವಾರದ ಅಂಗ ಸಂಘಟನೆಗಳಿಗೆ ಸಂವಿಧಾನ ಬಾಹಿರವಾಗಿ ಕೋಟಿ, ಕೋಟಿ ಹಣಕಾಸು ನೆರವು ಹರಿಸುವ ಜನವಿರೋಧಿ ಬಜೆಟ್‌ನ ಹಣಕಾಸು ಕೊರತೆ ತುಂಬಿಕೊಳ್ಳುವ ಸಲುವಾಗಿ ಹೀಗೆ ಸಾರ್ವಜನಿಕ ಆಸ್ತಿಯನ್ನು ಹರಾಜು ಹಾಕಿ ಮಾರಿಕೊಳ್ಳುವುದು ಸರ್ಕಾರವೇ ನಡೆಸುವ ಭೂ ಗಳ್ಳತನವಲ್ಲದೇ ಮತ್ತೇನು ?

ಈಗಲಾದರೂ ಇತ್ಯರ್ಥವಾಗ ಬೇಕು

2010ರಲ್ಲಿ ಲಭ್ಯವಾದ ಅಂಕಿಸಂಖ್ಯೆಗಳ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಅರ್ಜಿ ನಮೂನೆ 50 ರ ಮೂಲಕ 10,90,408 ಅರ್ಜಿಗಳನ್ನು ಸಲ್ಲಿಸಲಾಗಿದೆ. ಇವರು ಮಂಜೂರು ಮಾಡಲು ಕೋರಿರುವ ಜಮೀನಿನ ಪ್ರಮಾಣ 26,03,211.53 ಎಕರೆ. ಅರ್ಜಿ ನಮೂನೆ 54 ರ ಮೂಲಕ ಸಲ್ಲಿಸಲಾದ ಅರ್ಜಿಗಳ ಸಂಖ್ಯೆ 10,94,505. ಈ ಮೂಲಕ ಅರ್ಜಿದಾರರು 26,06,450.28 ಎಕರೆ ಭೂಮಿಗೆ ಹಕ್ಕು ಪತ್ರ ಕೇಳಿ ಅರ್ಜಿ ಸಲ್ಲಿಸಿದ್ದಾರೆ. ಅಂದರೆ ಒಟ್ಟು 21,84,903 ಅರ್ಜಿಗಳ ಮೂಲಕ ಒಟ್ಟಾರೆ 52,09,661.61 ಎಕರೆ ಭೂಮಿ ಮಂಜೂರಾತಿಗೆ ಮನವಿ ಮಾಡಲಾಗಿದೆ.

ತಿರಸ್ಕಾರವೇ ಮೂಲ ಮನೋಭಾವ

ಸಲ್ಲಿಸಲಾದ ಒಟ್ಟು 21 ಲಕ್ಷ ಮೀರಿದ ಅರ್ಜಿಗಳಲ್ಲಿ ಅಂಗೀಕಾರವಾಗಿರುವುದು 5,20,681 ಅರ್ಜಿಗಳು ಮಾತ್ರ,

ಅಂದರೆ ಸರಿ ಸುಮಾರು ಕಾಲು ಭಾಗದಷ್ಟು ಅರ್ಜಿಗಳನ್ನು ಮಾತ್ರವೇ ಪರಿಗಣಿಸಲಾಗಿದೆ.

52 ಲಕ್ಷ ಎಕರೆಗಿಂತಲೂ ಮೀರಿ ಜಮೀನು ಮಂಜೂರಾತಿ ಕೋರಿರುವ ಕಡೆ ಮಂಜೂರಾಗಿರುವುದು ಕೇವಲ 8,85,338.51 ಎಕರೆ ಜಮೀನು. ಅಂದರೆ ಮನವಿ ಮಾಡಲಾಗಿರುವ ಒಟ್ಟು ಜಮೀನಿನ ಸು. ಶೇ. 16 ರಷ್ಟು ಕೇಳಿದ್ದರಲ್ಲಿ ಏಳನೇ ಒಂದರಷ್ಟು ಭೂಮಿಯನ್ನು ಮಾತ್ರವೇ ನೀಡಲಾಗಿದೆ. ಒಟ್ಟು 4,28,411 (ಅರ್ಜಿ.ನ. 50–26,046, ಅರ್ಜಿ. ನ. 53–4,02,365) ಅರ್ಜಿಗಳನ್ನು ಬಾಕಿ ಇಡಲಾಗಿದ್ದರೆ ಒಟ್ಟಾರೆ 12,35,812 (ಅ.ನ. 50–6,95,095, ಅ.ನ. 5,40,727) ಅರ್ಜಿಗಳನ್ನು ತಿರಸ್ಕರಿಸಲಾಗಿದೆ.

ಎರಡು ಅರ್ಜಿಗಳಲ್ಲಿ ಅರ್ಜಿ ನಮೂನೆ 50 ಅಂದರೆ ಅದು ಮೊದಲ ಹಂತದಲ್ಲಿ ಬಗರ್ ಹುಕುಂ ಅರ್ಜಿದಾರರಿಂದ ಆಹ್ವಾನಿಸಲಾದ ಅರ್ಜಿ ನಮೂನೆ. ಈ ಅರ್ಜಿ ಸಲ್ಲಿಸಲು 17/07/91 ಕಡೆಯ ದಿನಾಂಕವಾಗಿತ್ತು. ಅರ್ಜಿ ನಮೂನೆ 53 ಎಂದರೆ ನಂತರದ ದಿನಗಳಲ್ಲಿ ಮತ್ತೊಂದು ಹಂತದಲ್ಲಿ ಬಗರ್ ಹುಕುಂ ಸಾಗುವಳಿದಾರರಿಂದ ಆಹ್ವಾನಿಸಲಾಗಿದ್ದ ಅರ್ಜಿ ನಮೂನೆ. ಅದನ್ನು ಸಲ್ಲಿಸಲು 30/04/99 ಕಡೆಯ ದಿನಾಂಕವಾಗಿತ್ತು.

ಹೀಗೆ ಅರ್ಜಿ ಸಲ್ಲಿಸಿದವರಲ್ಲಿ ಶ್ರೀಮಂತರು, ಅನುಕೂಲಸ್ಥರು ಒಂದಷ್ಟು ಪ್ರಮಾಣದಲ್ಲಿ ಇರಲೂ ಬಹುದು. ಆದರೆ ಬಹುತೇಕ ಅರ್ಜಿಗಳು ಸಾಗುವಳಿ ಮಾಡುತ್ತಿರುವ ರೈತರದ್ದು. ಒಂದೊಮ್ಮೆ ಬಗರ್ ಹುಕುಂ ಸಕ್ರಮಕ್ಕೆ ಪರಿಗಣಿಸಬಾರದ ಶ್ರೀಮಂತರೂ, ಅನುಕೂಲಸ್ಥರೂ ಇದ್ದಲ್ಲಿ ಅದನ್ನು ಪತ್ತೆ ಮಾಡಿ ಅವರಿಗೆ ಭೂಮಿ ದಕ್ಕದಂತೆ ಮಾಡುವ ಹೊಣೆಗಾರಿಕೆಯೂ ಸರ್ಕಾರದ ಮೇಲೆ ಇತ್ತು. ಆದರೆ ಸರ್ಕಾರ ಈ ಪ್ರಶ್ನೆಯನ್ನು ನೆಪವಾಗಿ ತೋರಿಸಿ ಬಡರೈತರಿಗೆ ಭೂಮಿ ವಂಚಿಸುವ ಕೆಲಸ ಮಾಡಿದರೆ ಅದು ಸರ್ಕಾರದ ಜನವಿರೋಧಿತನಕ್ಕೆ ಸಾಕ್ಷಿಯಾಗುತ್ತದೆ. ಈ ವಿಚಾರದಲ್ಲಿ ಈಗಾಗಲೇ 2010 ರಲ್ಲಿ ಒಂದು ಹಂತದ ಗಂಭೀರ ಆಂದೋಲನ ನಡೆದಿದೆ. ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಗಳಲ್ಲದೇ ಹಲವಾರು ಜನಪರ ಸಂಘಟನೆಗಳು, ದುಡಿಯುವ ಜನರ ಸಂಘಟನೆಗಳು ಈ ಆಂದೋಲನದಲ್ಲಿ ಪಾಲ್ಗೊಂಡವು.

ಪುರೋಹಿತರು ಮಂತ್ರ ಹೇಳಿದಂತೆ, ಮಾತಿಗೆ ಮುಂಚೆ ಅಭಿವೃದ್ಧಿ...ಅಭಿವೃದ್ಧಿ... ಎನ್ನುವ ಬಿಜೆಪಿ ಸರ್ಕಾರದ ಚುಕ್ಕಾಣಿ ಹಿಡಿದವರಿಗೆ ಈ ಬಡವರ, ದಲಿತರ, ದುಡಿಯುವ ಜನರ ಬದುಕು ಹಸನಾಗದೇ ಒಟ್ಟು ಸಮಾಜ ಅಭಿವೃದ್ಧಿಯ ಕಡೆಗೆ ಹೋಗುವುದು ಸಾಧ್ಯವಿಲ್ಲ ಎಂಬುದು ಅರ್ಥವೇ ಆಗಲಿಲ್ಲ. ಹೀಗಾಗಿ ಈ ಪ್ರಶ್ನೆಗಳು ಇನ್ನೂ ಈಡೇರಬೇಕಾದ ಪ್ರಶ್ನೆಗಳಾಗಿ ಹಾಗೇ ಉಳಿದಿವೆ. ಸರ್ಕಾರದ ಧೋರಣೆಗಳು, ಹೊಸ ಯೋಜನೆ, ವಾದ, ತರ್ಕಗಳು ಬಡ ಬಗರ್ ಹುಕುಂ ಸಾಗುವಳಿದಾರರಿಗೆ ಭೂಮಿ ವಂಚಿಸುವುದಕ್ಕೆ ಪೂರಕವಾಗಿಯೆ ಇವೆ.

30–40 ವರ್ಷಗಳಿಂದ ಜಮೀನು ಸಾಗುವಳಿ ಮಾಡುತ್ತಾ ಅದು ರೈತರ ಸ್ವಾಧೀನದಲ್ಲೇ ಇದ್ದರೂ, ಸಕ್ರಮಕ್ಕೆ ಅರ್ಜಿ ಸಲ್ಲಿಸಿ 20 ವರ್ಷಗಳೇ ಕಳೆದರೂ ಇನ್ನೂ ಸಮಸ್ಯೆಯನ್ನು ಇತ್ಯರ್ಥ ಪಡಿಸಿಲ್ಲ. ಮಾತ್ರವಲ್ಲ ಈಗ ನಾನಾ ನೆಪಗಳನ್ನು ಒಡ್ಡಿ ಸರ್ಕಾರ ರೈತರಿಗೆ ಭೂಮಿ ಹಕ್ಕು ಕೊಡುವ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಯತ್ನಿಸುತ್ತಿದೆ.

ಗೋಮಾಳ ಜಮೀನು ಮತ್ತು ನ್ಯಾಯಾಲಯದ ಆದೇಶಕ್ಕೆ ಬಂದಿರುವ ತಿದ್ದುಪಡಿ

ಈ ಮಧ್ಯೆ ಗ್ರಾಮಗಳ ಗೋಮಾಳ ಭೂಮಿಯು ದನಕರುಗಳ ಮೇವಿನ ಅಗತ್ಯವನ್ನು ಪೂರೈಸಲು ಇರುವುದರಿಂದ ಅದನ್ನು ಬಗರ್ ಹುಕುಂ ಸಾಗುವಳಿದಾರಿಗೆ ಮಂಜೂರು ಮಾಡಬಾರದು ಎನ್ನುವ ತೀರ್ಪು ಹೊರ ಬಿದ್ದಿತ್ತು. ಈ ತೀರ್ಪನ್ನು ಪ್ರಶ್ನಿಸಿದ ಮನವಿಯ ಉದ್ದೇಶವನ್ನು ಪುರಸ್ಕರಿದ ನ್ಯಾಯಾಲಯ ಆ ಆದೇಶಕ್ಕೆ ತಿದ್ದುಪಡಿ ಮಾಡಿದೆ.

ಗೋಮಾಳಕ್ಕೆ ಸಂಬಂಧಿಸಿದ ಗ್ರಾಮದಲ್ಲಿ ಎಷ್ಟು ಜಾನುವಾರುಗಳಿವೆಯೋ ಅದಕ್ಕೆ ತಕ್ಕಂತೆ ಭೂಮಿ ಉಳಿಸಿ ಉಳಿದ ಭೂಮಿಯನ್ನು ಬಗರ್ ಹುಕುಂ ಸಾಗುವಳಿದಾರರಿಗೆ ಕೊಡಬಹುದು ಎಂಬುದು ಈ ತಿದ್ದುಪಡಿಯ ಸಾರ. 100 ದನಕರುಗಳಿರುವ ಗ್ರಾಮವಾದರೆ 30 ಎಕರೆ ಭೂಮಿಯನ್ನು ಗೋಮಾಳವಾಗಿ ಉಳಿಸಿ, ಉಳಿದದ್ದನ್ನು ಸರ್ಕಾರ ಯಾವುದೇ ಅಡ್ಡಿಯಿಲ್ಲದೇ ಬಡ ರೈತರಿಗೆ ಹಂಚಬಹುದಾಗಿದೆ.

ಈ ತಿದ್ದುಪಡಿಯ ಫಲವನ್ನು ಬರೀ ದನಕರುಗಳ ಲಾಭಕ್ಕಲ್ಲದೇ, ಬಡ ರೈತರ ಬದುಕಿಗೂ ಲಾಭವಾಗುವಂತೆ ಸರಿಯಾಗಿ ಅರ್ಥೈಸಬೇಕಾಗಿದೆ ●

ನಗರ ಪಟ್ಟಣಗಳ ಸುತ್ತಲ ಭೂಮಿ 'ಸಾರ್ವಜನಿಕ ಬಳಕೆಗೆ' !! ??

ಹಿಂದೆ 80 ದಶಕದಲ್ಲಿ ಬೆಂಗಳೂರು ಮಹಾನಗರದ ಸುತ್ತ ಮುತ್ತಲ 18 ಕಿ.ಮಿ. ವ್ಯಾಪ್ತಿಯಲ್ಲಿನ ಸರ್ಕಾರಿ ಜಮೀನನ್ನು ಸಕ್ರಮ ಮಾಡಬಾರದು. ನಗರ ಬೆಳೆದಂತೆ ಸಾರ್ವಜನಿಕ ಅಗತ್ಯಗಳಿಗೆ ಸರ್ಕಾರಿ ಭೂಮಿ ಬೇಕಾಗಲಿದ್ದು ಅದನ್ನು ಮೀಸಲಿಡಬೇಕು ಎಂಬ ಒಂದು ಮಾತುಗಳಿದ್ದವು. ಅಂದಿನ ಸಂದರ್ಭದಲ್ಲಿ ಆ ಮಾತಿಗೆ ಒಂದಷ್ಟು ಅರ್ಥವೂ ಇತ್ತು. ಆದರೆ ಅಂತಹದ್ದೇ ವಾದಗಳನ್ನು ಈಗಲೂ ಮಂಡಿಸಲಾಗುತ್ತಿದೆ. ಆದರೆ ಅದರ ಅರ್ಥ ಉದ್ದೇಶಗಳು ಮತ್ತು ಸಂದರ್ಭ ಬೇರೆಯಾಗಿವೆ.

ಅಂದಿನ ಬೆಂಗಳೂರು ನಗರ ಪುಟ್ಟದಾಗಿತ್ತು. ಈಗ ಬೆಂಗಳೂರು ನಗರ ಮಹಾ ನಗರವಾಗಿ ವಿಸ್ತಾರವಾಗಿ ಬೆಳೆದಿದೆ. ಬೆಂಗಳೂರು ಮಹಾನಗರ ಪಾಲಿಕೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿದೆ. ಈಗಿನ ಬಿಬಿಎಂಪಿ ವ್ಯಾಪ್ತಿಯ ಅಂಚಿನಿಂದ 18 ಕಿ.ಮಿ. ಸುತ್ತಳತೆಯಲ್ಲಿನ ಯಾವುದೇ ಜಮೀನಿನ ಬಗರ್ ಹುಕುಂ ಸಾಗುವಳಿಯನ್ನು ಸಕ್ರಮ ಮಾಡಬಾರದು ಎಂಬ ವಾದವನ್ನು ಈಗ ಮಂಡಿಸಲಾಗುತ್ತಿದೆ. ಈ ಅರ್ಥದಲ್ಲಿ ಅದು ಬಹು ದೊಡ್ಡ ಸಂಖ್ಯೆಯಲ್ಲಿ ಬಗರ್ ಹುಕುಂ ಸಾಗುವಳಿದಾರರಿಗೆ ಭೂಮಿ ವಂಚಿಸಲಿದೆ.

ಇಲ್ಲಿ ಎಲ್ಲಕ್ಕಿಂತ ಮುಖ್ಯವಾಗಿ ಒಂದು ವ್ಯತ್ಯಾಸ ಇದೆ. ಜಾಗತೀಕರಣ, ಉದಾರೀಕರಣಗಳು ಇನ್ನೂ ಜಾರಿಗೆ ಬಂದಿಲ್ಲದ ಆ ಸಂದರ್ಭದಲ್ಲಿ ಸಾರ್ವಜನಿಕ ಉದ್ದೇಶ ಎಂದರೆ ಸರ್ಕಾರಿ ಶಾಲೆ, ಸರ್ಕಾರಿ ಆಸ್ಪತ್ರೆ, ಅಥವಾ ಸರ್ಕಾರಿ ಬಸ್ ನಿಲ್ದಾಣ, ಅಂಚೆ ಕಚೇರಿ ಮುಂತಾಗಿ ಅರ್ಥ ಬರುತ್ತಿದ್ದವು.

ಆದರೆ ಈಗ 'ಸಾರ್ವಜನಿಕ ಉದ್ದೇಶ', 'ಅಭಿವೃದ್ಧಿ ' ಎಂದರೆ, ಕೈಗಾರಿಕೆ, ಉದ್ದಿಮೆ ಸ್ಥಾಪನೆ ಹೆಸರಿನಲ್ಲಿ ಬರುವ ದೇಶೀಯ, ಬಹುರಾಷ್ಟ್ರೀಯ ಕಂಪನಿಗಳಿಗೆ ಧಾರಾಳವಾಗಿ ಅಗತ್ಯಕಿಂತಲೂ ಹೆಚ್ಚಾಗಿ ಭೂಮಿಯನ್ನು ಧಾರೆ ಎರೆದು ಕೊಡುವುದು ಎಂದಾಗಿದೆ. ಈ ಕಂಪನಿಗಳ ಪಟ್ಟಿಯಲ್ಲಿ ಉದ್ದಿಮೆ ಹೆಸರಿನಲ್ಲಿ ಭೂಮಿ ನುಂಗಲು ಬರುವ ನುಂಗಣ್ಣ ಕಂಪನಿಗಳು, ರಿಯೆಲ್ ಎಸ್ಟೇಟ್ ದಂಧೆ ಮಾಡುವ ಮುಖವಾಡದ ಕಂಪನಿಗಳು, ಜನರ ಅನ್ನಕ್ಕೆ ಮಣ್ಣು ಹಾಕುವ ಬ್ಲೇಡ್ ಕಂಪನಿಗಳೆಲ್ಲವೂ ಧಾರಾಳವಾಗಿರುತ್ತವೆ. ಆಳುವ ಪಕ್ಷದ ಸಚಿವರು, ಅವರ ಬಂಧುಗಳು ರಚಿಸಿಕೊಂಡ ಬೇನಾಮಿ ಕಂಪನಿಗಳಿಗೂ ಈಗ ಬರ ಇಲ್ಲ ಎಂಬುದು ಈಗಾಗಲೇ ಜನಕ್ಕೆ ತಮ್ಮ ಅನುಭವದಿಂದಲೇ ಅರ್ಥವಾಗಿರುವ ಸಂಗತಿಗಳು.

ಹೀಗಾಗಿ ಬಗರ್ ಹುಕುಂ ಸಕ್ರಮಕ್ಕೆ ಅಡ್ಡವಾಗಿ 18 ಕಿ.ಮೀ. ವ್ಯಾಪ್ತಿಯ ಪ್ರಶ್ನೆಯನ್ನು ಮುಂದೊಡ್ಡುವುದನ್ನು ಒಪ್ಪುವುದು ಸಾಧ್ಯವೇ ಇಲ್ಲ. ಸರ್ಕಾರದ ವಾದವನ್ನು ತಿರಸ್ಕರಿಸಬೇಕಾಗಿದೆ. 30–40 ವರ್ಷಗಳ ಹಿಂದೆಯೇ ಬಗರ್ ಹುಕುಂ ಸಾಗುವಳಿ ಭೂಮಿಗೆ ಹಕ್ಕು ಪತ್ರ ನೀಡಿದ್ದಿದ್ದರೆ ಆಗಲೇ ಎಂದೋ ಈ ಪ್ರಶ್ನೆ ಇತ್ಯರ್ಥವಾಗಿ ಹೋಗಿರುತ್ತಿತ್ತು. ಈಗ ಸರ್ಕಾರದ ವಾದವನ್ನು ತಿರಸ್ಕರಿಸದಿದ್ದರೆ ಮುಂದೆ ನಗರದ ವ್ಯಾಪ್ತಿ ವಿಸ್ತರಿಸುತ್ತಲೇ ಹೋಗುವುದರಿಂದ ಇನ್ನಷ್ಟು ಇನ್ನಷ್ಟು ಭೂಮಿ ವಂಚನೆ ಬಿಟ್ಟರೆ ಬಡ ರೈತರಿಗೆ ಬೇರೇನೂ ದಕ್ಕುವುದು ಸಾಧ್ಯವಿಲ್ಲ.

ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿರುವ ಆನೇಕಲ್ ತಾಲ್ಲೂಕಿನಲ್ಲಿ ಕಳೆದ 40–50 ವರ್ಷಗಳಿಂದ ಸುಮಾರು 12 ಸಾವಿರ ಎಕರೆ ಜಮೀನಿಗೆ ಸಂಬಂಧಿಸಿದ 7,200 ಅರ್ಜಿಗಳು ಇತ್ಯರ್ಥವಾಗದೇ ನೆನೆಗುದಿಗೆ ಬಿದ್ದಿವೆ.

ಈ ಪ್ರಶ್ನೆ ಬರೀ ಬೆಂಗಳೂರು ನಗರಕ್ಕೆ ಮಾತ್ರ ಸಂಬಂಧಿಸಿದ್ದಲ್ಲ. ಇಡೀ ರಾಜ್ಯದ ಪೇಟೆ ಪಟ್ಟಣ, ಎಲ್ಲ ಕಡೆಯೂ ಈ ಪ್ರಶ್ನೆ ಇದೆ. ಬೆಂಗಳೂರು ಬಿಟ್ಟು ಇತರ ದೊಡ್ಡ ನಗರಗಳಲ್ಲಿ ನಗರದ ವ್ಯಾಪ್ತಿಯ 10 ಕಿ.ಮಿ. ಸುತ್ತಳತೆಯಲ್ಲಿ, ಸಿ.ಎಂ.ಸಿ.ಗಳ 5 ಕಿ.ಮಿ. ವ್ಯಾಪ್ತಿಯ ಸುತ್ತಳತೆಯಲ್ಲಿ, ಟಿಎಂಸಿಗಳ ಸುತ್ತಲ 3 ಕಿ.ಮಿ. ವ್ಯಾಪ್ತಿಯಲ್ಲಿನ ಸರ್ಕಾರಿ ಜಮೀನನ್ನು ರೈತರಿಗೆ ಮಂಜೂರು ಮಾಡಬಾರದು ಎಂಬ ನೀತಿ ಸರ್ಕಾರದ ಮಟ್ಟದಲ್ಲಿದೆ. ಈ ಒಟ್ಟು ಪ್ರಶ್ನೆಯನ್ನು

ಪುಟ 15 ಕ್ಕೆ

ರಾಜ್ಯದಾದ್ಯಂತ ವ್ಯಾಪಕ ಪ್ರತಿಭಟನೆ – ಧರಣಿ "ಮಾನವಂತರಾಗಿ ಬದುಕಲು ಅಗತ್ಯವಾದ ಕೂಲಿ ಕೇಳಿದ್ದು ಕೊಡಿ"

ಅಸಂಘಟಿತ ಕಾರ್ಮಿಕರ ಹೋರಾಟದಲ್ಲಿ ಆಗ್ರಹ

ಛಾಯಾ .ಐ.ಕೆ

ರಾಜ್ಯದ ಕಾರ್ಮಿಕರನ್ನು ನಿರ್ಲಕ್ಷ್ಯ ಮಾಡುತ್ತಾ ಶ್ರೀಮಂತ ಬಂಡವಾಳಗಾರರ ಸೇವೆಯಲ್ಲಿ ತೊಡಗಿರುವ ಸರಕಾರದ ಧೋರಣೆಗಳನ್ನು ಬದಲಾಯಿಸಲು ಒತ್ತಾಯಿಸಿ ಸಿಐಟಿಯು ನೇತೃತ್ವದಲ್ಲಿ ಅಸಂಘಟಿತ ಕಾರ್ಮಿಕರು ಧರಣಿ ಸತ್ಯಾಗ್ರಹವನ್ನು (17,18 ಮತ್ತು19ಎಪ್ರಿಲ್2012) ಕಾರ್ಮಿಕ (ಭವನ) ಆಯುಕ್ತರ ಕಛೇರಿ ಡೈರಿ ಸರ್ಕಲ್, ಬೆಂಗಳೂರು ಎದುರು ಆರಂಭಿಸಿದರು. ಧರಣಿಯನ್ನು ಉದ್ಘಾಟಿಸಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ಪ್ರಸನ್ನ ಕುಮಾರ್ ಮಾತನಾಡಿದರು. ನ್ಯಾಯಯುತ ಬೇಡಿಕೆಯ ನಿರಂತರ ಹೋರಾಟದ ಭಾಗವಾಗಿ ಈ ಧರಣಿ ನಡೆಯುತ್ತಿದೆ. ಮಾನವಂತರಾಗಿ ಬದುಕಲು ಕೇವಲ 10,000 ಕನಿಷ್ಠ ಕೂಲಿಯನ್ನು ಎಲ್ಲ ಕಾರ್ಮಿಕರಿಗೂ ಕೇಳುತ್ತಿದ್ದೇವೆ. ಕರ್ನಾಟಕ ರಾಜ್ಯದಲ್ಲಿ 80 ರೀತಿಯ ಕೆಲಸ ಮಾಡುವ ನೌಕರರನ್ನು ಕಾರ್ಮಿಕರ ಪಟ್ಟಿಯನ್ನು ಮಾಡಲಾಗಿದೆ. ಈ ಯಾದಿಯನ್ನು (ಶೆಡ್ಯೂಲ್ಡ್/ಪಟ್ಟಿಯನ್ನು) ಕಿತ್ತುಹಾಕಿ ಎಲ್ಲ ಕೆಲಸಗಾರರಿಗೂ ಕನಿಷ್ಠ ವೇತನ ಜಾರಿ ಮಾಡಬೇಕು. ಸರ್ಕಾರ ಬಗೆ ಹರಿಸುವವರೆಗೂ ಹೋರಾಟ. ಎಂದು ನುಡಿದ ಪ್ರಸನ್ನ ಕುಮಾರ್ 'ಕತ್ನಾಲ್ ಸಮಿತಿ'ಯನ್ನು ಸರ್ಕಾರ ಈ ಕಾರಣಕ್ಕಾಗಿಯೇ ನೇಮಿಸಿತ್ತು. ಆ ಸಮಿತಿಯಲ್ಲಿ ಸಿಐಟಿಯುನ ರಾಜ್ಯ ಅಧ್ಯಕ್ಷರಾದ ವಿಜೆಕೆ ನಾಯರ್‌ರವರು ಹಾಗೂ ನಾನೂ (ಪ್ರಸನ್ನ ಕುಮಾರ್) ಸದಸ್ಯರಿದ್ದು, ಆ ಸಮಿತಿ ವರ್ಷಕ್ಕೊಮ್ಮೆಯೂ ಸಭೆಯನ್ನ ಸೇರುತ್ತಿಲ್ಲ. ಇದೇ ದೇಶದ ದೆಹಲಿ, ಹರ್‍ಯಾಣ, ಹಿಮಾಚಲ ಪ್ರದೇಶ ಮತ್ತು ಮುಂತಾದ 8 ರಾಜ್ಯಗಳಲ್ಲಿ ಜಾರಿಯಾದ ಕನಿಷ್ಠ ಕೂಲಿ ನಮ್ಮ ರಾಜ್ಯದಲ್ಲಿ ಯಾಕೆ ಆಗುತ್ತಿಲ್ಲ. ನಾವು ಹೊಸತನ್ನ ಕೇಳುತ್ತಿಲ್ಲ. ಒಬ್ಬ ವ್ಯಕ್ತಿಗೆ ಸರ್ಕಾರ ಅಂದಾಜಿಸಿದ ತಿಂಗಳ ದಿನಸಿ, ಬಟ್ಟೆ–ಬರೆ, ಪೋಷಕಾಂಶ...(ವರ್ಷಕ್ಕೆ 73 ಗಜ ಬಟ್ಟೆ) ಕೊಳ್ಳಲೂ ಸಹ ಸಾಧ್ಯವಾಗದ ವೇತನ ಶ್ರೇಣಿಯಿದ್ದೂ ಪದೆ ಪದೆ ಬೆಲೆ ಏರಿಕೆ ಕೂಡ ಆಗುತ್ತಿದೆ. ಹೀಗಿದ್ದಾಗ ಜನ ಸಾಮಾನ್ಯ ಬದುಕಲು ಹೇಗೆ ಸಾಧ್ಯ ಎನ್ನುವುದನ್ನು ಸರ್ಕಾರ ಯೋಚಿಸಬೇಕು.

ಕಾರ್ಮಿಕ ಮಹಾ ಅಧಿವೇಶನದಲ್ಲಿ ಸರ್ಕಾರ, ಕಾರ್ಮಿಕ ಮುಖಂಡರು ಮತ್ತು ಅಧಿಕಾರಿಗಳು ಸೇರಿ ಒಪ್ಪಿ ನಿಗದಿ ಮಾಡಿದ ಕನಿಷ್ಠ ಕೂಲಿಯನ್ನು 40 ವರ್ಷಗಳಾದರೂ ಏಕೆ ಜಾರಿ ಆಗಿಲ್ಲ. ತಜ್ಞರ ಸಮಿತಿ ಯಡಿಯೂರಪ್ಪನಿಂದ ಆದದ್ದಲ್ಲ; ಕೆಂಬಾವುಟ ಹಿಡಿದ ನಿಮ್ಮ ಹೋರಾಟದಿಂದ ಆದದ್ದು.

ಗ್ಯಾರಂಟಿ ಪಿಂಚಣಿ ಕನಿಷ್ಠ 1000ರೂಪಾಯಿಗಳಾದರೂ ಆಗಬೇಕು. ಉಮಾದೇವಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನ ಆದೇಶದಂತೆ ಎಲ್ಲ ಗುತ್ತಿಗೆ ಆಧಾರಿತ ನೌಕರರನ್ನು ಖಾಯಂಗೊಳಿಸಬೇಕು. ಇಲ್ಲದಿದ್ದರೆ ಎಲ್ಲಾ ಜಿಲ್ಲಾ ಕೇಂದ್ರಗಳಿಗೂ ಮುತ್ತಿಗೆ ಹಾಕುವ ಎಚ್ಚರಿಕೆ ನೀಡಿ ಧರಣಿ ಉದ್ಘಾಟನೆ ಗೊಂಡಿರುವುದಾಗಿ ಘೋಷಿಸಿದರು.

ಹಮಾಲಿ ಸಂಘಟನೆಯ ಮುಖಂಡರಾದ ಮಹಾಂತೇಶ್, ಹಮಾಲಿ, ಆಟೋ, ಧರ್ಜಿ, ಹೋಟೆಲ್ ಮತ್ತು ವರ್ಕ್‌ಶಾಪ್‌ಗಳ ಕಾರ್ಮಿಕರನ್ನು ಮಾತ್ರ ಅಸಂಘಟಿತ ಕಾರ್ಮಿಕರು ಎಂದು ಕರೆಯುತ್ತಿದ್ದು, ಉಳಿದವರ ಪಾಡೇನು? ಎಂಬ ಪ್ರಶ್ನೆಯೊಂದಿಗೆ ಮಾತಿಗಾರಂಭಿಸಿದರು. ಗ್ರಾಚುವಿಟಿ ಹೆಚ್ಚಳ, ಕಾರ್ಮಿಕರ ನೊಂದಾವಣೆಗೆ ಅವಕಾಶ, ಪ್ಯಾಕ್ಟರಿ ಮುಚ್ಚಿದ ಕಾರ್ಮಿಕರಿಗೆ ನಿರುದ್ಯೋಗ ಭತ್ತೆ – ಸಾಮಾಜಿಕ ಭದ್ರತೆ ನೀಡುವಂತಾಗಬೇಕು ಎಂದರು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಸ್ಥಾಪನೆಗೊಂಡು 3ವರ್ಷ ಆಗಿದ್ದರೂ ಸಹ ಇನ್ನೂ ಗುರುತಿನ ಚೀಟಿ ಕೊಡಲು ಸಾಧ್ಯವಾಗಿಲ್ಲ. ಕೇವಲ ಮೀಟಿಂಗ್ ಮೇಲೆ ಮೀಟಿಂಗ್ ಮಾತ್ರ ಮಾಡುತ್ತಿದ್ದಾರೆ. ಕಾರ್ಮಿಕರ ನಿಜ ಪ್ರತಿನಿಧಿಗಳಿಗೆ ಅದರಲ್ಲಿ ಅವಕಾಶ, ಸ್ಥಾನವಿಲ್ಲ. 2009–10ಮತ್ತು2010–11 ನೇ ಸಾಲಿನಲ್ಲಿ 10 ಕೋಟಿ ಹಣ ಬಿಡುಗಡೆ ಆಗಿದೆಯಾದರೂ ಜನರಿಗೆ ಸಿಕ್ಕಿಲ್ಲ. ಕೂಲಿನೇ ಖಾತ್ರಿ ಇಲ್ಲದಿರುವಾಗ ಪಿಂಚಣಿಗಾಗಿ 100ರೂ ಹೇಗೆ ಕಟ್ಟಲು ಸಾಧ್ಯ. ಕಟ್ಟಿದರೂ ನಿಗದಿತ ಪಿಂಚಣಿ ಇಲ್ಲ. ಮೀಟಿಂಗ್‌ನಲ್ಲಿ ನಿಗದಿ ಆದ ಘೋಷಣೆ ಕೂಡ ಜಾರಿ ಆಗಿಲ್ಲ. (ರಾಷ್ಟ್ರೀಯ ಸ್ವಾಸ್ಥ ಯೋಜನೆ) ಕೇವಲ ಮನವಿ ಪತ್ರ ನೀಡಿ ಹೋಗೋದಿಲ್ಲ, ಬದಲಾಗಿ 3 ದಿನಗಳೊಳಗಾಗಿ ತೀರ್ಮಾನಿಸಿ ಭರವಸೆ ನೀಡಬೇಕು. ಇಲ್ಲದ್ದಿದ್ದರೆ ಜಿಲ್ಲಾ ಕೇಂದ್ರ ಮತ್ತು ಕಾರ್ಮಿಕ ಕಛೇರಿ ಮುತ್ತಿಗೆ ಹಾಕುವ ಎಚ್ಚರಿಕೆಯನ್ನು ಕೊಟ್ಟು ಮಾತು ಮುಗಿಸಿದರು.



ಧರಣಿ ನಿರತ ಕಾರ್ಮಿಕರು

ಗ್ರಾಮ ಪಂಚಾಯತ ನೌಕರರ ಸಂಘದ ಅಧ್ಯಕ್ಷರಾದ ಗೋಪಾಲ ಕೃಷ್ಣ ಅರಳಹಳ್ಳಿ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ 2ರೂ. ನಂತೆ 35 ಕೆ.ಜಿ. ಅಕ್ಕಿ ಕೊಡಿ ಅಂತ ಕೇಳಿದರೆ 45 ಲಕ್ಷ ಬಿಪಿಎಲ್ ಕಾರ್ಡ್ ರದ್ದು ಮಾಡಿದರು. ಗ್ರಾಮ ಪಂಚಾಯತ ನೌಕರರ ಕನಿಷ್ಠ ಕೂಲಿ 5300 ರೂ. ನಿಗದಿ ಮಾಡಿ 1 ವರ್ಷ ಕಳೆದರೂ ಇನ್ನೂ ಜಾರಿ ಆಗಿಲ್ಲ.

ರಾಜಣ್ಣ (ಹಮಾಲಿ ರಾಜ್ಯ, ಸಿಐಟಿಯುನ ಜಿಲ್ಲಾ ಉಪಾಧ್ಯಕ್ಷ), 1970 ರಲ್ಲೇ ಗುತ್ತಿಗೆ ಪದ್ಧತಿ ರದ್ಧತಿಗೆ ಕಾನೂನು ಬಂದಿದ್ದರೂ ಇವತ್ತಿಗೂ ಈ ಹೀನಾಯ ಪದ್ಧತಿ ಹೋಗಿಲ್ಲ ಎಂದು ವಿಷಾದ ವ್ಯಕ್ತ ಪಡಿಸಿದರು.


ಆರ್.(ಮೈಕೊ) ಮಂಜುನಾಥ ಇವತ್ತು ಮತ್ತು ನಾಳೆ(17,18) ಸಾಂಕೇತಿಕ ಧರಣಿ ನಾಡಿದ್ದು(19) ಒಳಗೆ ಬೇಡಿಕೆಗೆ ಸ್ಪಂದಿಸದೆ ಹೋದರೆ ಉಗ್ರ ರೂಪದ ಹೋರಾಟ. ಕೂಲಿಯ ಹಣದಿಂದ ಆರೋಗ್ಯಯುತ ಆಹಾರ ಪಡೆಯುವುದಕ್ಕೆ ಸಾಧ್ಯವಾಗದಿದ್ದರೆ ಕಾರ್ಯನಿರ್ವಹಿಸಲು ಹೇಗೆ ಸಾಧ್ಯ? ಆರೋಗ್ಯ ಸೌಲಭ್ಯವಿಲ್ಲ. 'ಕಲ್ಯಾಣ ಮಂಡಳಿ' ರಚಿಸಿ ಎಲ್ಲ ಅಸಂಘಟಿತ ಕಾರ್ಮಿಕರನ್ನೂ ಅದರಲ್ಲಿ ಸೇರಿಸಬೇಕು.

ರಘು, ಆಟೋ ಡ್ರೈವರ್ಸ್ ಯೂನಿಯನ್ ಮುಖಂಡರು, ಸ್ಪಷ್ಟ ಕಾನೂನು ಬಂದು ಜಾರಿ ಆಗಬೇಕು. ಸ್ವಾತಂತ್ರ್ಯ ಬಂದು 63 ವರ್ಷಗಳ ನಂತರವೂ ಆಹಾರ, ಆರೋಗ್ಯ, ವಿದ್ಯಾಭ್ಯಾಸದ ಪ್ರಶ್ನೆ ಬೃಹದಾಕಾರವಾಗಿ ಕಾಡುತ್ತಿದೆ. ಹೋರಾಟ ಮಾಡಿ ಪಡೆದು ಕೊಳ್ಳುವುದು ಅನಿವಾರ್ಯವಾಗಿದೆ. ಎನ್ನುತ್ತಾ ಸೂರಿಯವರ ಕಾರ್ಯವೈಖರಿಯನ್ನು ನೆನೆದರು.

ಸಿಐಟಿಯುನ ರಮೇಶ ಸಹ ಮಾತನಾಡಿದರು.

ಪ್ರಕಾಶ್ –ಅಪೌಷ್ಟಿಕತೆ ಇವತ್ತು ಮಕ್ಕಳು ಮತ್ತು ತಾಯಂದಿರಲ್ಲಿ ತಾಂಡವವಾಡುತ್ತಿದೆ. ದುಡಿವ ಜನರಿಗೆ, ಕಾರ್ಮಿಕರಿಗೆ, ಬಡವರಿಗೆ ಇವತ್ತು ತಲೆಯ ಮೇಲೆ ಸೂರಿಲ್ಲವಾಗಿದೆ. ನೆಲ ಇಲ್ಲದವರಿಗೆ ನೆಲ ಕೊಡಲು ಹೇಳಿದರೆ ಕೋಟ್ಯಾಧಿಪತಿಗಳಿಗೆ (ರಾಘವೇಂದ್ರ, ಯಡಿಯೂರಪ್ಪರ ಮಗ, ಅವರ ತಂಗಿ, ಸತೀಶ ರೆಡ್ಡಿ, ನಂದೀಶ್ ರೆಡ್ಡಿ, ದಯಾನಂದ ಸಾಗರ ವಿದ್ಯಾ ಸಂಸ್ಥೆಯ ಮಾಲಿಕರಿಗೆ) ಸೈಟ್ ಹಂಚಿದರು ಎಂದರು.

ಕೆ.ಎಸ್.ಆರ್.ಟಿ.ಸಿ ಸಂಘದ ಮಂಜುನಾಥ ಮಾತನಾಡಿ ಅಂಗನವಾಡಿಯ ಪೌಷ್ಟಿಕ ಆಹಾರವನ್ನು ತಮಿಳುನಾಡಿನ ಖಾಸಗಿ ಕಂಪನಿಗೆ ವಹಿಸಲಾಗಿತ್ತು. ಅದರಲ್ಲಿ ಸಾವಿರಾರು ಕೋಟಿ ರೂ. ಹಗರಣವಾಯಿತು. ಹಗರಣಕ್ಕೆ ಅವಕಾಶ ಕಲ್ಪಿಸುವ ಬದಲು ತಾಯಂದಿರಿಗೆ ಮಕ್ಕಳಿಗೆ ಆಹಾರದ ವ್ಯವಸ್ಥೆಯನ್ನು ಸರಿಯಾಗಿ ಮಾಡಬುದಾಗಿತ್ತು. ಇದಕ್ಕೆಲ್ಲ ಯಾರು ಹೊಣೆ? ಎಂದರು.



ಉದ್ಘಾಟಿಸುತ್ತಿರುವ ಕಾಂ. ಪ್ರಸನ್ನಕುಮಾರ್



ಆಯುಕ್ತರೊಂದಿಗೆ ನಾಯಕರ ನಿಯೋ...

ಮಲೆ ಕುಡಿಯ ವಿಠಲ್ ಅಕ್ರಮ ಬಂಧನ: ಗ್ರಾಮಕ್ಕೆ ಸಂಸದ ರಾಜೇಶ್ ಭೇಟಿ

ಕಡಲತಡಿ

ವರದಿ : ವಾ.ಉ.

DYFI ಸದಸ್ಯ ಮಂಗಳೂರು ವಿ.ವಿ.ಯ ಪತ್ರಿಕೋದ್ಯಮದ ವಿದ್ಯಾರ್ಥಿ ವಿಠಲ ಮಲೆಕುಡಿಯ ಮತ್ತು ಅವರ ತಂದೆ ಲಿಂಗಣ್ಣ ಮಲೆಕುಡಿಯರನ್ನು ನಕ್ಸಲ್ ಬೆಂಬಲಿಗ ಮಾವೋವಾದಿ ಪಕ್ಷದ ಸದಸ್ಯ ಎಂದು ಆರೋಪಿಸಿ ನಕ್ಸಲ್ ನಿಗ್ರಹದಳದ ಪೊಲೀಸರು ಬಂಧಿಸಿ ಜೈಲಿಗಟ್ಟಿದ ಪ್ರಕರಣ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಸುದ್ದಿಯಾಗತೊಡಗಿದೆ. DYFI ಮತ್ತು CPI(M) ಬಂಧನದ ನಂತರ ನಿರಂತರವಾಗಿ ಒಂದೂವರೆ ತಿಂಗಳು ವಿಠಲ ಮಲೆಕುಡಿಯನ ಪರವಾಗಿ ಮಾಡಿದ ಹೋರಾಟ, ನಾಡಿನೆಲ್ಲೆಡೆ ಜನಾಭಿಪ್ರಾಯ ವಿಠಲನ ಪರವಾಗಿ ರೂಪುಗೊಳ್ಳುವಂತಾಗಿದೆ.

ಕಾನೂನು ಹೋರಾಟದಲ್ಲಿ ಜಾಮೀನು ನಿರಾಕರಿಸಲ್ಪಟ್ಟರೂ ಪರೀಕ್ಷೆ ಬರೆಯಲು ನ್ಯಾಯಾಲಯ ಅವಕಾಶ ಮಾಡಿಕೊಟ್ಟಿದೆ. ಆದರೆ ಅಮಾನವೀಯವಾಗಿ ವರ್ತಿಸಿದ ಪೋಲೀಸರು ಓದಲು ಪುಸ್ತಕ ನೀಡದೆ, ಕೈಗೆ ಕೋಳ ಹಾಕಿಸಿ ಪರೀಕ್ಷೆ ಬರೆಯಿಸಿ ತಾವೂ ಸುದ್ದಿಯಾಗಿದ್ದಾರೆ. ಈ ಎಲ್ಲಾ ಬೆಳವಣಿಗೆಗಳ ಗಂಭೀರತೆಯನ್ನು ಅರಿತ DYFI ಅಖಿಲ ಭಾರತ ಜಂಟಿ ಕಾರ್ಯದರ್ಶಿಗಳೂ ಕೇರಳದ CPI(M) ಸಂಸತ್ ಸದಸ್ಯರೂ ಆದ ಯುವನಾಯಕ ಎಂ.ಬಿ. ರಾಜೇಶ್ ಮಂಗಳೂರಿಗೆ ಭೇಟಿ ನೀಡಿದರು. ಆರಂಭದಲ್ಲಿ ವಿಠಲನ ಸ್ವ ಗ್ರಾಮ ಬೆಳ್ತಂಗಡಿ ತಾಲೂಕಿನ ನಕ್ಸಲ್ ಪೀಡಿತ ಕುತ್ಲೂರಿಗೆ ಭೇಟಿ ನೀಡಿದರು. ಅಲ್ಲಿ ನೂರಾರು ಸಂಖ್ಯೆಯಲ್ಲಿ ಸೇರಿದ್ದ ಆದಿವಾಸಿ ಮಲೆಕುಡಿಯರು ಮತ್ತು ವಿಠಲನ ತಾಯಿ ಹೊನ್ನಮ್ಮ ನಕ್ಸಲ್ ನಿಗ್ರಹ ದಳ ಮತ್ತು ಸರಕಾರ ಒಕ್ಕಲೆಬ್ಬಿಸುವ ಸಲುವಾಗಿ ನಿರಂತರವಾಗಿ ನೀಡುವ ಕಿರುಕುಳ ಮತ್ತು ಹಿಂಸೆಯನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿದರು. ಅವರನ್ನು ಉದ್ದೇಶಿಸಿ



ಮಾತನಾಡಿದ ಎಂ.ಬಿ. ರಾಜೇಶ್ ಮಲೆಕುಡಿಯರಿಗೆ ಧೈರ್ಯ ತುಂಬಿ ವಿಠಲನ ಕುಟುಂಬ ಮತ್ತು ಮಲೆಕುಡಿಯರ ಮೇಲಾಗುತ್ತಿರುವ ದೌರ್ಜನ್ಯದ ವಿರುದ್ಧ ರಾಷ್ಟ್ರಮಟ್ಟದಲ್ಲಿ ಧ್ವನಿ ಎತ್ತುವುದಾಗಿ ಮತ್ತು ಹೋರಾಟ ರೂಪಿಸುವುದಾಗಿ ಭರವಸೆ ನೀಡಿದರು. ಒಟ್ಟು ಸಂಸದರ ಭೇಟಿ ಪ್ರತಿಭಟನೆಯ ಧ್ವನಿಯನ್ನೇ ಕಳಕೊಂಡಿದ್ದ ಮಲೆಕುಡಿಯರಲ್ಲಿ ಆತ್ಮ ವಿಶ್ವಾಸವನ್ನು ಮೂಡಿಸಿತು. ಅಲ್ಲಿಂದ ಮಂಗಳೂರಿನ ಜೈಲಿಗೆ ಭೇಟಿ ನೀಡಿ ವಿಠಲ ಮತ್ತು ಲಿಂಗಣ್ಣ ಮಲೆಕುಡಿಯರಿಗೆ ಧೈರ್ಯ ತುಂಬಿದರು. ನಡೆದ ಘಟನೆಗಳನ್ನು ಅವರಿಂದ ವಿವರವಾಗಿ ಆಲಿಸಿದರು. ಆನಂತರ ಕಿಕ್ಕಿರಿದು ತುಂಬಿದ್ದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದರು. ಒಟ್ಟು ಎಂ.ಬಿ. ರಾಜೇಶ್‌ರ ಭೇಟಿ ವಿಠಲನ ಪರವಾದ ಹೋರಾಟಕ್ಕೆ ಹೊಸ ಹುರುಪು ನೀಡಿದೆ.

...ಬರವೆಂಬುದೂ ಇವರಿಗೆ ವರ!

3ನೇ ಪುಟ್ಟದಿಂದ

ಅತೃಪ್ತಿಯನ್ನು ಬಳಸಿ ಸದಾನಂದಗೌಡರಿಗೆ ಆಡಳಿತ ಪಕ್ಷದೊಳಗಿದ್ದೇ ವಿರೋಧ ಪಕ್ಷವಾಗಿ ಸವಾಲು ಹಾಕುವ, ಆಮೂಲಕ ತಾನು ನಿಜಕ್ಕೂ ಜನರ ಪರ, ಜನ ಧ್ವನಿ ಎಂದೆಲ್ಲಾ ಬಿಂಬಿಸಿಕೊಳ್ಳಲು ಒಂದು ಅವಕಾಶವನ್ನಾಗಿ ರೂಪಿಸಿಕೊಂಡದ್ದು. ಹೀಗಾಗಿಯೇ ಸರಕಾರ, ಸಚಿವರು ಜನರ ನಡುವೆ ಹೊಗದೇ ಬೆಂಗಳೂರಿನಲ್ಲೇ ಬೀಡುಬಿಟ್ಟಿರುವುದರಿಂದ ತಾನೇ ಒಂದು ಸರ್ಕಾರವೆಂಬಂತೆ ಅಧಿಕಾರದ ಕೇಂದ್ರವೆಂದು ವರ್ತಿಸುತ್ತಿರುವ ಅವರು ಅಹವಾಲು ಕೇಳಿ ಪರಿ ಹರಿಸುವವ ಎಂಬಂತೆ ಜಿಲ್ಲೆ ಜಿಲ್ಲೆಗಳಲ್ಲಿ ಬರ ಪೀಡಿತ ಪ್ರದೇಶಗಳಿಗೆ ಪ್ರವಾಸ ಕೈಗೊಂಡಿದ್ದು ಆಡಳಿತ–ವಿರೋಧ ಪಕ್ಷಗಳ ಮೇಲೂ ರಾಜಕೀಯ ಒತ್ತಡ ಹಾಕಿತು. ದೊರೆತ ಅಂತಹ ಜನ ಸ್ಪಂದನವನ್ನು ಯಡಿಯೂರಪ್ಪನವರ ಬಣ ರಾಜಕೀಯ ಬೆಂಬಲವನ್ನಾಗಿ ಕ್ರೋಡಿಕರಿಸಿಕೊಳ್ಳುವ, ಸಂದರ್ಭವನ್ನು ಮುನಗಂಡೇ ಸದಾನಂದಗೌಡರೂ ಯಾತ್ರೆ ಕೈಗೊಳ್ಳಬೇಕಾಗಿ ಬಂತು. ವಿರೋಧ ಪಕ್ಷಗಳೂ ಸಹ ಇದರಲ್ಲಿ ತೀವ್ರ ತೊಡಗಿದ್ದು ತಾನು ಸುಮ್ಮನಿದ್ದರೆ ಇನ್ನಷ್ಟು ಮೂಲೆಗುಂಪಾಗುವ ಆತಂಕ ಕಾಡಿದ್ದರಿಂದಲೇ ಸರ್ಕಾರ ಸರ್ವ ಪಕ್ಷಗಳ ಸಮಾಲೋಚನೆಗೆ. ರಾಜೀ ಸಂಧಾನಕ್ಕೆ ಇಳಿಯಿತು .ಮತ್ತು ರಾಜಕೀಯ ತಂತ್ರದಲ್ಲಿ ತಾನೂ ಒಂದು ಹೆಜ್ಜೆ ಮುಂದೆ ಎಂಬುದನ್ನು ತೋರಿಸಲು ಪ್ರಯತ್ನಿಸಿತು.

ನಿಜ, ಸ್ಥಿತಿ ಹೀಗಿದೆ. ಬಿಜೆಪಿಯೊಳಗಿನ ಕಿತ್ತಾಟ, ಅಧಿಕಾರದ ಮೇಲಾಟಗಳು, ಮುಂಬರಲಿರುವ ಚುನಾವಣೆಯು ಸರ್ಕಾರದ ಈಗಿನ ವರಸೆಗಳಿಗೆ ಒತ್ತಾಸೆಗಳು. ನಿಜ.

ಕಾಣದ ನಿಜ ಕಾಳಜಿ:

ಇರಲಿ, ಸರ್ಕಾರ ತಡವಾಗಿಯಾದರೂ ಬಹಳ ಕಾಲ ವಿಳಂಬದ ನಂತರ ಎಚ್ಚೆತ್ತುಕೊಂಡಿದೆ ಎಂದೇ ಭಾವಿಸೋಣ. ಬಿಜೆಪಿಯಲ್ಲಿರುವ ಭಿನ್ನಾಭಿಪ್ರಾಯ, ಮೇಲುಗೈ ಸಾಧಿಸುವ ಹಣಾಹಣಿಯೂ ಇದರ ಹಿಂದಿದೆ. ಎಂಬುದನ್ನೂ ಗಮನಿಸೋಣ. ಮುಖ್ಯವಾಗಿ ಬಿಜೆಪಿ ಪಕ್ಷಕ್ಕೆ ಬರದ ವಿನಾಶಕಾರಿ ಪರಿಣಾಮಗಳತ್ತ ಹಿಂದಿನಿಂದಲೂ ಕಾಳಜಿಯನ್ನು ವ್ಯಕ್ತ ಪಡಿಸಿಯೇ ಇಲ್ಲ. ಈಗಲೂ ಸರ್ವಪಕ್ಷಗಳ ಸಭೆ ನಂತರ ಬಿಜೆಪಿ ಪಕ್ಷದ ರಾಜ್ಯ ವಕ್ತಾರರು ಪ್ರಕಟಿಸಿದಂತೆ ಬಿಜೆಪಿ ಕಾರ್ಯಕರ್ತರ ತಂಡಗಳು ಹಳ್ಳಿ ಹಳ್ಳಿಗಳಿಗೂ ಭೇಟಿ ನೀಡಿದರೂ ಯಾವುದೇ ನಿರ್ದಿಷ್ಟ ಕಾರ್ಯ ಯೋಜನೆ ಗೊತ್ತು ಗುರಿ ಇಲ್ಲದೇ ಹೋಗುವುದು ಒಂದು (ಮೋಜಿನ) ಪ್ರವಾಸವಾಗಬಹುದು ಅಷ್ಟೇ. ಸರ್ಕಾರದ ನಿಯಂತ್ರಕ–ಮಾರ್ಗದರ್ಶಕ ಆರ್.ಎಸ್.ಎಸ್. ಸಹ ಬರದ ಕಾಮಗಾರಿ–ಪರಿಹಾರ ಕ್ಕಿಂತಲೂ 'ಬರ'ದ ಬಗ್ಗೆ ಪ್ರಸ್ತಾಪಿಸುವುದು 'ಗೋಶಾಲೆ'ಗಳ ಆರಂಭದ ಹೆಸರಿನಲ್ಲಿ ಅಪಾರವಾಗಿ ಸರಕಾರದ ಜಮೀನು ಹೊಡೆಯಲು ಅಷ್ಟೇ..

ಜನರ ಹಿತವೇ ಸಂಕುಚಿತ ರಾಜಕೀಯವೇ?

ಆದ್ದರಿಂದಲೇ ಇದೇ ನಿಷ್ಕಾಳಜಿ ಈ ಏಪ್ರೀಲ್ 19 ರಂದು ಕರೆದ ಸರ್ವ ಪಕ್ಷಗಳ ಸಭೆಯಲ್ಲಿಯೂ ವ್ಯಕ್ತಗೊಂಡಿತು. ಸಭೆ ನಡೆದದ್ದೇನೋ ಸ್ವಾಗತಾರ್ಹ. ಇಲ್ಲಿ ಬರದೊಟ್ಟಿಗೆ 371ನೇ ವಿಧಿಗೆ ತಿದ್ದುಪಡಿ, ರೇಷ್ಮೆ, ಆಲೂ,ಇತ್ಯಾದಿ ಬೆಳೆಗಾರರ ಪ್ರಶ್ನೆಗಳು, ಕಾವೇರಿ ನೀರಿನ ವಿವಾದ ಮುಂ. ಪ್ರಶ್ನೆಗಳೂ ಇದ್ದವು. ಅಂತಿಮವಾಗಿ ರಾಜ್ಯದ ಬಿಜೆಪಿ ಸರ್ಕಾರ ರಾಜ್ಯದ ಜನತೆ ಎದುರಿಸುತ್ತಿರುವ ಸಮಸ್ಯೆಗಳಿಗೆ ನೈಜ ಪರಿಹಾರ ನೀಡಬೇಕೆಂಬ ಕಾಳಜಿಗಿಂತ ಅದನ್ನು ರಾಜಕೀಯ ಉದ್ದೇಶಗಳಿಗಾಗಿ ಬಳಸುವುದನ್ನೇ ಗುರಿಯಾಗಿಸಿಕೊಂಡಿತ್ತು. ಮುಖ್ಯವಾಗಿ ಜಾನುವಾರುಗಳನ್ನು ಸಂರಕ್ಷಿಸಲು ಮೇವು, ಸಮತೋಲನ ಆಹಾರ, ಕುಡಿವ ನೀರಿನ ಸಮರ್ಪಕ ತುರ್ತು ಪೂರೈಕೆ. ಕೆಲಸವಿಲ್ಲದೇ ಕಂಗಾಲಾಗಿರುವ ಜನತೆಗೆ ಉದ್ಯೋಗ ಕಲ್ಪಿಸುವುದು ಅದಕ್ಕಾಗಿ ರೇಗಾ, ಬರ ಕಾಮಗಾರಿ ಯೋಜನೆ ಬಳಸಿ ಕನಿಷ್ಠ 200 ದಿನ ಉದ್ಯೋಗ ದೊರಕಿಸುವುದು, ಪಡಿತರ ವ್ಯವಸ್ಥೆ ಮೂಲಕ ಅಗತ್ಯ ಆಹಾರ ವಸ್ತುಗಳನ್ನು ತತ್‌ಕ್ಷಣದಲ್ಲಿ ಉಚಿತವಾಗಿ ನೀಡುವುದು ವಲಸೆಯನ್ನು ತಪ್ಪಿಸುವುದು. ಸಾಲ ಮನ್ನಾ,ಬೆಳೆ ಹಾನಿ ಪರಿಹಾರ ಮತ್ತು ಆ ಕಾಯ್ದೆಗೆ ಅಗತ್ಯ ತಿದ್ದುಪಡಿ ತಂದು ಹೆಚ್ಚಿನ ಪರಿಹಾರ ನೀಡುವುದು ಇತ್ಯಾದಿ ಕ್ರಮಗಳನ್ನು ಅತ್ಯಂತ ತುರ್ತಾಗಿ ಕೈಗೊಳ್ಳಬೇಕಿದೆ. ಇಂತಹ ನಿರ್ದಿಷ್ಟ ಹಲವಾರು ಸೂಚನೆಗಳು ಸಭೆಯಲ್ಲಿ ಬಂದವಾದರೂ ಅಂತಿಮವಾಗಿ ಸರ್ಕಾರ ಈ ವಿಷಯಗಳ ಬಗ್ಗೆ ಗಂಭೀರವಾದ ನಿರ್ಧಾರವನ್ನು ಕೈಗೊಳ್ಳಲಿಲ್ಲ, ಅವನ್ನು ಮುಖ್ಯ ಪ್ರಶ್ನೆಗಳೆಂದೂ ಪರಿಗಣಿಸಿಲ್ಲ. ಮೇವು–ನೀರು ಇತ್ಯಾದಿಗಳ ಬಗ್ಗೆ ಅದರ ಹೇಳಿಕೆ ಒಣ ಕಾಳಜಿಯಂತಿವೆ ಅಷ್ಟೇ. ಮೇಲಾಗಿ ಗ್ರಾಮೀಣ ಪ್ರದೇಶದಿಂದ ನಗರಗಳತ್ತ ಕೆಲಸ ಹುಡುಕಿ ಗುಳೇ ಹೋಗುವುದನ್ನು ಸರಕಾರ ಸ್ವಾಗತಿಸಿ ಅದಕ್ಕೆ ಬೆಂಬಲ ವ್ಯಕ್ತಪಡಿಸಿತು. ಅಂದರೆ ಗ್ರಾಮೀಣ ಪ್ರದೇಶದ ಜನತೆ ಹೆಚ್ಚೆಚ್ಚು ದಿವಾಳಿಯೆದ್ದು ಊರು ಬಿಟ್ಟು ಹೋದರೆ, ಕೃಷಿ ಮಾಡಲಾಗದಂತಾದರೆ ಕೃಷಿ ಬಂಡವಾಳ ಹೂಡಲು, ಭೂಮಿ ಕಿತ್ತುಕೊಳ್ಳಲು ಅನುಕೂಲ ಎಂಬ ಲೆಕ್ಕಾಚಾರವೇ? .ರೈತರನ್ನು ಒಕ್ಕಲೆಬ್ಬಿಸಲು ಬರವನ್ನೂ ವರವಾಗಿ ಬಳಸಲು ಬಿಜೆಪಿ ಹವಣಿಸುತ್ತಿದೆಯೇ? . ಇದೇ ಬಿಜೆಪಿ ಸರ್ಕಾರ 'ಸಮೃದ್ಧ ಕರ್ನಾಟಕ ನಿರ್ಮಿಸಲು" ಅಂಗೀಕರಿಸಿದ 'ವಿಷನ್–2020' ರಲ್ಲಿ ಗ್ರಾಮೀಣ ವಲಸೆಯನ್ನು ಬಲವಾಗಿ ಸಮರ್ಥಿಸಿ ಪ್ರೋತ್ಸಾಹಿಸಿದೆ. ವಿಶ್ವಬ್ಯಾಂಕ್‌ನ ಅಭಿವೃದ್ಧಿ ಮಾದರಿ ಕಣ್ಣೋಟವನ್ನೇ ಬರಪೀಡಿತ ಸಂದರ್ಭದಲ್ಲಿಯೂ ಜಾರಿಗೆ ತರುವ ಅದರ ಹಠ ಮತ್ತು ಬದ್ಧತೆ ಗಮನಿಸಿದರೆ ಜನರ ಬಗ್ಗೆ ಅದಕ್ಕಿರುವ ನಿಷ್ಕಾಳಜಿಯ ಸ್ವರೂಪ ಜನ ದ್ರೋಹಿತನ ಸ್ಪಷ್ಟವಾಗುತ್ತದೆ.

ಉತ್ತರವೇನು?

ಹೀಗಿರುವಾಗ ಈ ಸಭೆ ಮೂಲಕ, ತಾನು ನಿರ್ವಹಿಸಬೇಕಾದ ಹೊಣೆಯನ್ನು ಮರೆ ಮಾಚಿ, ಕೇಂದ್ರದಿಂದ ಒಂದಿಷ್ಟು ಹಣ ಪಡೆದು ಜೀರ್ಣಿಸಿಕೊಳ್ಳಲು ಮತ್ತು ಎಲ್ಲಾ ಹೊಣೆಯನ್ನು ಕೇಂದ್ರ ಸರ್ಕಾರದ ಮೇಲೆ ಎತ್ತಿ ಹಾಕಿ ರಾಜಕೀಯ ಲಾಭ ಹೊಡೆಯಲು ಯೋಜಿಸಿದ ಪ್ರಯತ್ನವೇ ಇದು. ರಾಜಕೀಯದುರುದ್ದೇಶಕ್ಕೆ ಬರವನ್ನೂ ವರದಂತೆ ಬಳಸಿಕೊಳ್ಳುವ ಬಿಜೆಪಿಯ. ಆಳುವವರ್ಗಗಳ ಪ್ರಯತ್ನಕ್ಕೆ ಜನತೆಯೇ ಸೂಕ್ತವಾಗಿ ಉತ್ತರಿಸಬೇಕು.

ಬರ ಪರಿಹಾರಕ್ಕೆ ಒತ್ತಾಯಿಸಿ
ರಾಜ್ಯ ಸರ್ಕಾರದ
ನಿರ್ಲಕ್ಷ್ಯತನ ವಿರೋಧಿಸಿ
ಏಪ್ರಿಲ್ 23 ರಂದು
ರಾಜ್ಯಾದ್ಯಂತ ಎಲ್ಲಾ ಜಿಲ್ಲಾ -
ತಾಲ್ಲೂಕು ಕೇಂದ್ರಗಳಲ್ಲಿ
ಪ್ರತಿಭಟನೆಗೆ ಸಿಪಿಐ(ಎಂ) ಕರೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಮೇ ದಿನದ ಪ್ರಮಾಣ

ಶೋಷಣೆಮುಕ್ತ ಸಮಾಜರಚನೆಯತ್ತ ಸಂಘರ್ಷದ ಕಾವು ಇಮ್ಮಡಿಗೊಳಿಸೋಣ

ಮತ್ತೊಂದು ಮೇ ದಿನ ಬಂದೇ ಬಂತು. ಕಾರ್ಮಿಕರಿಗೆ ಏನು ಸಂದೇಶ ತಂತು ? ಇಗೋ ಈ ಬಗ್ಗೆ ಬರೆದಿದ್ದಾರೆ. ಸಿಐಟಿಯು ಸಂಘಟನೆಯ ಅಖಿಲ ಭಾರತ ಅಧ್ಯಕ್ಷರು. ಓದಿ.

ಎ.ಕೆ. ಪದ್ಮನಾಭನ್

ಶೋಷಣೆ ರಹಿತ ಸಮಾಜರಚನೆಯತ್ತ ಕಾರ್ಮಿಕ ವರ್ಗವು ಕ್ರಾಂತಿಕಾರಿ ಹೋರಾಟ ನಡೆಸಬೇಕಾದ ಅನಿವಾರ್ಯತೆಯನ್ನು ಮೇ ದಿನ ಮತ್ತೊಮ್ಮೆ ನಮಗೆ ನೆನಪಿಸುತ್ತದೆ. ನೇಣುಗಂಬಕ್ಕೇರಿಸುವ ಮೂಲಕ ಯಾರ ಧ್ವನಿಯನ್ನು ಅಡಗಿಸಲಾಗಿತ್ತೋ 1886ರ ಚಿಕಾಗೋದ ಆ ಹುತಾತ್ಮರು ತಮ್ಮ ಮೌನವೇ ಶೋಷಿತ ಜನತೆಯ ಪ್ರಬಲ ದನಿಯಾಗಿ ಹೊರಹೊಮ್ಮುತ್ತದೆ ಎಂದು ಘೋಷಿಸಿದ್ದರು. 19ನೇ ಶತಮಾನದ ಆರಂಭದಲ್ಲಿ ಕೈಗಾರಿಕೀಕೃತ ಜಗತ್ತಿನಲ್ಲಿ ಆರಂಭವಾದ ಹೋರಾಟ ದುಡಿಯುವ ಜನರಿಗೆ ನ್ಯಾಯ ಬೇಕೆಂದು ಜಗತ್ತಿನಾದ್ಯಂತ ಇಂದಿಗೂ ನಾನಾ ರೂಪಗಳಲ್ಲಿ ಮುಂದುವರಿಯುತ್ತಿದೆ. ಚಿಕಾಗೋ ಹೋರಾಟದ ಮೂಲ ಬೇಡಿಕೆಯಾದ ಎಂಟು ಗಂಟೆಗಳ ಕೆಲಸದ ದಿನ ಕೂಡ ಭಾರತ ಸೇರಿದಂತೆ ವಿವಿಧ ದೇಶಗಳ ಮಿಲಿಯಾಂತರ ಜನರಿಗೆ ಇಂದಿಗೂ ಕನಸಾಗಿಯೇ ಉಳಿದಿದೆ. ಭಾರತದಲ್ಲಿ ಸ್ವಾತಂತ್ರ್ಯ ಪೂರ್ವದಿಂದಲೂ ಈ ಸಂಬಂಧ ಅನೇಕ ಕಾನೂನುಗಳು ಇದ್ದಾಗ್ಯೂ ಈ ಪರಿಸ್ಥಿತಿ ಇದೆ.

ಜಾಗತಿಕ ಚಳುವಳಿ ಮಹತ್ವ ಮತ್ತು ಮಿತಿ

ಕಳೆದ ಮೇ ದಿನಾಚರಣೆಯ ನಂತರದ ವರ್ಷ ಜಗತ್ತಿನೆಲ್ಲೆಡೆ ಭಾರೀ ಹಾಗೂ ಪ್ರಬಲವಾದ ಹೋರಾಟಗಳು ನಡೆದಿವೆ. ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟು ಈ ಅಸ್ಥಿರವಾದ ವ್ಯವಸ್ಥೆಯ ವಿರುದ್ಧ ಹೋರಾಟ ಅವಿವಾರ್ಯ ಎಂಬುದನ್ನು ಮತ್ತೊಮ್ಮೆ ಎತ್ತಿ ತೋರಿಸಿದೆ. ಆದರೆ, ಅರಬ್ ಜಗತ್ತಿನ ಹೋರಾಟಗಳೇ ಆಗಲಿ ಅಮೆರಿಕದ "ಆಕ್ರಮಿಸಿಕೋ" (ಒಕ್ಯುಪೈ) ಹೋರಾಟವೇ ಆಗಲಿ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಾಯಿಸಬೇಕೆಂಬ ತಿಳಿವಳಿಕೆಯ ಆಧಾರದಲ್ಲಿ ನಡೆದಿಲ್ಲ ಎನ್ನುವುದನ್ನು ಗಮನಿಸಬೇಕು.

ಈ ಚಳವಳಿಗಳು ಹೋರಾಟವನ್ನು ಸತತವಾಗಿ ಮುಂದಕ್ಕೆ ಒಯ್ಯುವಂಥ ಯಾವುದೇ ಸಂಘಟನೆಯ ನೇತೃತ್ವದಲ್ಲಿ ನಡೆದಿದ್ದಲ್ಲ. ಹಾಗಿದ್ದಾಗ್ಯೂ ಸಾಮ್ರಾಜ್ಯಶಾಹಿ ಶಕ್ತಿಗಳ ತೊಟ್ಟಿಲುಗಳಲ್ಲೇ ಕಂಡ ಈ ಸಾಮೂಹಿಕ ಉತ್ಕ್ರಾಂತಿಗಳ ಮಹತ್ವವನ್ನು ನಾವು ಕಡೆಗಣಿಸುವಂತಿಲ್ಲ.

ಕಳೆದ ಒಂದು ವರ್ಷದಲ್ಲಿ ಹೋರಾಟಗಳು ಹಬ್ಬಿದ ಹರಹು ತುಂಬಾ ವ್ಯಾಪಕ ಹಾಗೂ ವಿಶಾಲವಾಗಿತ್ತು. ಈ ಹೋರಾಟಗಳಲ್ಲಿ ಕೆಲವು ಅನೇಕ ಕಾರಣಗಳಿಗಾಗಿ ಐತಿಹಾಸಿಕ ಸಂಘರ್ಷಗಳು. ಎರಡು ತಿಂಗಳ ಹಿಂದೆ ಜೊಹಾನ್ಸೆಸ್‌ಬರ್ಗ್‌ನಲ್ಲಿ ನಡೆದ ಕಾರ್ಮಿಕ ಸಂಘಟನೆಗಳ ಜಾಗತಿಕ ಒಕ್ಕೂಟದ (ಡಬ್ಲ್ಯು.ಎಫ್.ಟಿ.ಯು.) ಅಧ್ಯಕ್ಷೀಯ ಮಂಡಳಿ ಸಭೆಯು ಈ ಹೋರಾಟಗಳ ಈ ರೀತಿ ವಿಶ್ಲೇಷಿಸಿದೆ:

"ಕಾರ್ಮಿಕ ವರ್ಗದ ಹೋರಾಟಗಳನ್ನು ಹಾಗೂ ತುಂಬಾ ತೀಕ್ಷ್ಣವಾಗುವ ಜನಪ್ರಿಯ ಪದರಗಳನ್ನು ಮತ್ತು ಜನತೆ ಹಾಗೂ ಕಾರ್ಮಿಕರಿಗೆ ಬಹು ನಿರೀಕ್ಷೆ ಮತ್ತು ಒಳನೋಟವನ್ನು ಕೊಡುವ ಹೋರಾಟಗಳನ್ನು ನಾವು ಕಂಡಿದ್ದೇವೆ. ಕಾರ್ಮಿಕವರ್ಗ ಹೋರಾಟ ನಡೆಸುತ್ತದೆ ಮಾತ್ರವಲ್ಲದೆ ದಿನದಿಂದ ದಿನಕ್ಕೆ ಅದನ್ನು ತೀಕ್ಷ್ಣಗೊಳಿಸುತ್ತದೆ. ಅನೇಕ ಜನರ ಸಾವಿನಲ್ಲಿ ಪರ್ಯಾವಸಾನವಾದ ನೈಜೀರಿಯಾದ ಮಹಾ ಮುಷ್ಕರ, ಮೆಕ್ಸಿಕೋದಲ್ಲಿ ಅನೇಕ ತಿಂಗಳ ಕಾಲ ನಡೆದ ಎಸ್‌ಎಂಇ ಹೋರಾಟ, ಗ್ರೀಸ್‌ನ ಉಕ್ಕು ಕಾರ್ಮಿಕರ ಧೀರೋದಾತ್ತ ಹೋರಾಟ, ಕಝಕಸ್ತಾನ್ ಕಾರ್ಮಿಕರ ಹೋರಾಟ, ಪನಾಮಾದ ಬಾಳೆತೋಟಗಳ ಕಾರ್ಮಿಕರ ಹೋರಾಟ, ಪನಾಮಾ ಕಾಲುವೆ ಕಾರ್ಮಿಕರ ಹೋರಾಟ, ಥಾಯ್‌ಲ್ಯಾಂಡ್, ಭಾರತ, ಪೋರ್ಚುಗಲ್, ಇಟಲಿ, ಪೋಲೆಂಡ್, ಬಲ್ಗೇರಿಯಾ, ಬೆಲ್ಜಿಯಮ್, ದಕ್ಷಿಣ ಆಫ್ರಿಕಾದಲ್ಲಿ ಲೋಹ ಮತ್ತು ಬಹುರಾಷ್ಟ್ರೀಯ ನಿಗಮಗಳ ಕ್ಷೇತ್ರದಲ್ಲಿ, ಕೊಲಂಬಿಯಾದಲ್ಲಿ ಆಹಾರ ಕ್ಷೇತ್ರದಲ್ಲಿ, ಪೆರುನಲ್ಲಿ ಗಣಿ ಕ್ಷೇತ್ರದಲ್ಲಿ, ಇಂಗ್ಲೆಂಡ್‌ನಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ, ಚಿಲಿಯಲ್ಲಿ ಯುವಜನತೆ ನಡೆಸಿದ ಹೋರಾಟಗಳು, ವಾಲ್‌ಸ್ಟ್ರೀಟ್ ಹೋರಾಟ ಇವೇ ಮೊದಲಾದ ಉದಾಹರಣೆಗಳು ನಮ್ಮ ಮುಂದಿವೆ. ಎಲ್ಲಾ ಖಂಡಗಳಲ್ಲಿ ಕಾರ್ಮಿಕರ ದೊಡ್ಡ ವಿಭಾಗಗಳು ನವ ಉದಾರವಾದಿ ಹಾಗೂ ಸೋಷಲ್ ಡೆಮೊಕ್ರಾಟ್ ಸರಕಾರಗಳು ಅನುಸರಿಸುತ್ತಿರುವ ಕಾರ್ಮಿಕ ವಿರೋಧಿ ನೀತಿಗಳನ್ನು ಪ್ರತಿಭಟಿಸಿವೆ ಎನ್ನುವುದನ್ನು ಈ ಉದಾಹರಣೆಗಳು ಸಾಬೀತುಪಡಿಸಿವೆ. ಆಳವಾದ ಬಂಡವಾಳಶಾಹಿ ಬಿಕ್ಕಟ್ಟು, ಬಂಡವಾಳಶಾಹಿ ವ್ಯವಸ್ಥೆಯ ಅಧಃಪತನದ ಪರಿಸ್ಥಿತಿಯಲ್ಲಿ, ಕಾರ್ಮಿಕರು, ರೈತರು, ಯುವಜನತೆಯ ಹೋರಾಟಗಳು ಆಶಾವಾದದ ಭರವಸೆಗಳಾಗಿವೆ ಬಂಡವಾಳಶಾಹಿ ಶೋಷಣೆಯ ವ್ಯವಸ್ಥೆಯ ವಿರುದ್ಧ ಕಾರ್ಮಿಕರ ಪ್ರತಿ-ಹೋರಾಟವನ್ನು ಸಾಮಾನ್ಯೀಕರಿಸುವ ಏಕೈಕ ಮಾರ್ಗವಾಗಿದೆ".



ಚಳುವಳಿ ಮುಂದುವರೆದಿದೆ

ಮೇಲೆ ನಮೂದಿಸಿದ ದೇಶಗಳು ಬೃಹತ್ ಹೋರಾಟಗಳು ನಡೆದ ಕೆಲವು ಉದಾಹರಣೆಗಳು ಅಷ್ಟೇ. "ಮುಕ್ತ ಸಾಮೂಹಿಕ ಮಾಧ್ಯಮ" ವರದಿ ಮಾಡದಿದ್ದರೂ ಯುರೋಪ್ ಮತ್ತು ಇತರ ಖಂಡಗಳಲ್ಲಿ ವ್ಯಾಪಕ ಭಾಗವಹಿಸುವಿಕೆಯಿಂದ ಹೋರಾಟಗಳು ಮುಂದುವರಿಯುತ್ತಿವೆ.

ಅಮೆರಿಕದಲ್ಲಿ ಒಕ್ಯುಪೈ ಹೋರಾಟ ಮುಂದುವರಿಯುತ್ತಿದ್ದು 2012ರ ಮೇ ಒಂದರಂದು ಅಲ್ಲಿ ಸಾರ್ವತ್ರಿಕ ಮುಷ್ಕರಕ್ಕೆ ಕರೆಕೊಡಲಾಗಿದೆ. "ಅಂದು ಕೆಲಸವಿರುವುದಿಲ್ಲ, ಶಾಲೆಯಿರುವುದಿಲ್ಲ, ಶಾಪಿಂಗ್ ಇರುವುದಿಲ್ಲ, ಬ್ಯಾಂಕಿಂಗ್ ಇಲ್ಲ, ವ್ಯಾಪಾರ-ವಹಿವಾಟಿಲ್ಲ" ಎಂಬ ಘೋಷಣೆಯೊಂದಿಗೆ ಆ ಹೋರಾಟದಲ್ಲಿ "ಭೂಗ್ರಹದ ಜನತೆ ಬೀದಿಗಿಳಿಯುವ ದಿನ"ದಂದು ಈ ಹೋರಾಟದಲ್ಲಿ ಕೈಜೋಡಿಸುವಂತೆ ಅಮೆರಿಕದ ಕಾರ್ಮಿಕರಿಗೆ ಕರೆ ಕೊಡಲಾಗಿದೆ. ಅಮೆರಿಕದಲ್ಲಿನ "ಸರಕಾರಿ" ಟ್ರೇಡ್‌ಯೂನಿಯನ್‌ಗಳು ಮೇ ದಿನವನ್ನು ಆಚರಿಸುವುದಿಲ್ಲ ಎನ್ನುವುದು ಗಮನಾರ್ಹ ಸಂಗತಿಯಾಗಿದೆ. ಅವುಗಳಿಗೆಂದೇ ಪ್ರತ್ಯೇಕ ಕಾರ್ಮಿಕ ದಿನವಿದೆ.

ಬಿಕ್ಕಟ್ಟು ಆಳವಾದಷ್ಟೂ ಸಾಮ್ರಾಜ್ಯಶಾಹಿ ಶಕ್ತಿಗಳು ತೀವ್ರ ಆಕ್ರಮಣಕಾರಿ ಆಗುತ್ತಿವೆ. ಸಾಮ್ರಾಜ್ಯಶಾಹಿಯು ತಾನು ಹಸ್ತಕ್ಷೇಪ ಮಾಡುವಲ್ಲೆಲ್ಲಾ ಅಥವಾ ಆಗಲೇ ಮಾಡಿದ್ದಲ್ಲಿ ಪ್ರಜಾಪ್ರಭುತ್ವದ ಹೆಸರಿನಲ್ಲಿ ಆಡಳಿತಗಳನ್ನು ಬದಲಾಯಿಸುತ್ತಿದೆ. ನ್ಯಾಟೋ ಹಸ್ತಕ್ಷೇಪದ ನಂತರ ಲಿಬ್ಯಾದಲ್ಲಿ ಅಸ್ಥಿರತೆ, ಒಡಕು ಹಾಗೂ ಅರಾಜಕತೆ ತಾಂಡವವಾಡುತ್ತಿದೆ. ನಾನಾ ಜನವಿಭಾಗಗಳ ಹತ್ಯೆ, ಲೂಟಿ ಮತ್ತು ಕ್ರೂರ ಆಕ್ರಮಣಗಳಿಲ್ಲದ ದಿನವೇ ಅಲ್ಲಿಲ್ಲ. ಸಿರಿಯಾದಲ್ಲಿಯೂ 'ಪ್ರಜಾಪ್ರಭುತ್ವದ ಉಳಿವಿಗಾಗಿ' ಅಪಾರ ಪ್ರಮಾಣದ ಶಸ್ತ್ರಾಸ್ತ್ರ ಮತ್ತು ಹಣದ ಹೊಳೆಯನ್ನು ಹರಿಸಲಾಗುತ್ತಿದೆ. ಇರಾನ್ ಮೇಲೆ ದಿಗ್ಬಂಧನ ಜಾರಿಯಲ್ಲಿದೆ. ಜಗತ್ತಿನ ಪ್ರತಿಯೊಂದು ದೇಶವೂ ತನ್ನ ಆದೇಶಕ್ಕೆ ಅಡಿಯಾಳಾಗಬೇಕೆಂದು ಸಾಮ್ರಾಜ್ಯಶಾಹಿಯು ಬಯಸುತ್ತಿದೆ.

ಭಾರತದಲ್ಲಿನ ವಿದ್ಯಮಾನಗಳೂ ಇದಕ್ಕೆ ಕನ್ನಡಿ ಹಿಡಿದಿದೆ. ಅಧಿಕಾರದಲ್ಲಿರುವ ನವ ಉದಾರವಾದಿ ಪ್ರತಿಪಾದಕರು ನವ ಉದಾರವಾದಿ ನೀತಿಗಳ ಅನುಷ್ಠಾನವನ್ನು ತ್ವರಿತಗೊಳಿಸಬೇಕೆಂದು ಬಯಸುತ್ತಿವೆ. ಹಣಕಾಸು ಬಂಡವಾಳ ಬಹಿರಂಗವಾಗಿ ಮಂಡಿಸುವ ಬೇಡಿಕೆಗಳಿಗೆ ಅನುಗುಣವಾಗಿಯೇ ಇದೆ ಈ ಪ್ರವೃತ್ತಿ.

ಅಶಾಂತಿ ವ್ಯಾಪಕ

ಭಾರತದಲ್ಲಿ ಬದುಕು ದಿನೇ ದಿನೇ ದುಸ್ತರವಾಗುತ್ತಿರುವ ಹಿನ್ನೆಲೆಯಲ್ಲಿ ದೇಶದಲ್ಲಿ ಅಶಾಂತಿ ವ್ಯಾಪಕವಾಗುತ್ತಿದೆ. ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ರಾಷ್ಟ್ರೀಯ ಒಕ್ಕೂಟಗಳ ಕರೆಯ ಮೇರೆಗೆ ಫೆಬ್ರವರಿ 28ರಂದು ನಡೆದ ಮುಷ್ಕರ ಕಾರ್ಮಿಕ ವರ್ಗದ ಆಕ್ರೋಶ ಬಯಲಿಗೆ ಬರುವಂತೆ ಮಾಡಿದೆ. ಇಡೀ ದೇಶದ ಮುಂದೆ ಪರ್ಯಾಯ ನೀತಿಗಳನು ಮಂಡಿಸುವಂತೆ ಮಾಡುವುದು ದೇಶದ ಕಾರ್ಮಿಕ ವರ್ಗದ ಮುಂದಿರುವ ಹೊಣೆಯಾಗಿದೆ.

ದೇಶದ ವಿವಿಧ ಭಾಗಗಳಲ್ಲಿ ರೈತರು ಮತ್ತು ಕೃಷಿಕೂಲಿಗಾರರು ಆತ್ಮಹತ್ಯೆಗಳನ್ನು ಮಾಡಿಕೊಳ್ಳುತ್ತಿದ್ದು ಗ್ರಾಮೀಣ ಭಾರತದಲ್ಲಿ ನೆಲೆಸಿರುವ ದಯನೀಯ ಸ್ಥಿತಿಯನ್ನು ಅದು ಬಿಂಬಿಸುತ್ತದೆ. ಇಂಥ ಸನ್ನಿವೇಶದಲ್ಲಿ "ಗ್ರಾಮೀಣ ಪ್ರದೇಶಗಳಲ್ಲಿನ ಈ ಮಿತ್ರ ವಿಭಾಗಗಳನ್ನು" ಅಣಿನೆರೆಯಿಸುವುದು ಕೂಡ ಹೋರಾಟ ನಿರತ ಕಾರ್ಮಿಕ ವರ್ಗದ ಜವಾಬ್ದಾರಿ ಎಂಬುದನ್ನು ಖಾತರಿಪಡಿಸಬೇಕು.

ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಹೋರಾಟನಿರತ ಸೋದರ-ಸೋದರಿಯರಿಗೆ ಸೌಹಾರ್ದತೆಯನ್ನು ವ್ಯಕ್ತಪಡಿಸುತ್ತಲೇ ಭಾರತೀಯ ಕಾರ್ಮಿಕ ವರ್ಗದ ಏಕತೆಯನ್ನು ಬಲಪಡಿಸುವ, ಕಾರ್ಮಿಕ - ರೈತ ಸಖ್ಯತೆಯನ್ನು

ಪುಟ 12 ಕ್ಕೆ

ಮಾಧ್ಯಮಗಳ ನವ-ಉದಾರವಾದಿ ಭಟ್ಟಂಗಿಗಳ ಆಲಾಪನೆಗಳು

ಸಿಪಿಐ(ಎಂ)ನ 20 ನೇ ಮಹಾಧಿವೇಶನದ ಕರೆ ಹುಟ್ಟಿಸಿರುವ ಭೀತಿಯ ಅಭಿವ್ಯಕ್ತಿ

'ಪೀಪಲ್ಸ್ ಡೆಮಾಕ್ರಸಿ' ವಾರ ಪತ್ರಿಕೆಯ ಏಪ್ರಿಲ್ 19, 2012ರ ಸಂಪಾದಕೀಯ

ಭಾರತದ ಮಾಧ್ಯಮಗಳಲ್ಲಿರುವ ಜಾಗತಿಕ ಹಣಕಾಸಿನ ಹೊಗಳು ಭಟ್ಟಂಗಿಗಳಿಗೆ ಸಿಪಿಐ(ಎಂ)ನ 20ನೇ ಮಹಾಧಿವೇಶನ ಭಾರತೀಯ ಜನತೆಗೆ ನೀಡಿರುವ ಸ್ಫೂರ್ತಿದಾಯಕ ಕರೆ ದಿಗಿಲುಂಟು ಮಾಡಿದೆ. ಸಿಪಿಐ(ಎಂ)ನ್ನು ತನ್ನ ಪರವಾಗಿ ಸೆಳೆದುಕೊಳ್ಳಲಾರದ ನವ-ಉದಾರವಾದದ ಹತಾಶೆ, ತನ್ನ ಪರವಾದವರ ಜತೆ ಸೇರುವ ಬದಲು, ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ನೇತೃತ್ವದ ಸಾಮ್ರಾಜ್ಯಶಾಹಿ ಜಾಗತೀಕರಣದತ್ತ ಬಲವಂತದಿಂದ ತಳ್ಳುತ್ತಿರುವ ಆರ್ಥಿಕ ಧೋರಣೆಗಳ ವಿರುದ್ಧ ಜನತೆಯ ಹೋರಾಟಗಳನ್ನು ಬಲಪಡಿಸಲು ದ್ವಿಗುಣ ದೃಢತೆಯಿಂದ 20ನೇ ಮಹಾಧಿವೇಶನ ತೀರ್ಮಾನಿಸಿರುವುದರಿಂದ ಉಂಟಾಗಿರುವ ಹತಾಶೆ ಮತ್ತು ಭೀತಿ ಅವರ ಸಂಪಾದಕೀಯ ಟಿಪ್ಪಣಿಗಳಲ್ಲಿ ಬಿಂಬಿತವಾಗಿವೆ.

ಇತ್ತೀಚೆಗೆ ಕೇರಳದ ಕೋಝಿಕೊಡ್‌ನಲ್ಲಿ ನಡೆದ ಸಿಪಿಐ(ಎಂ)ನ 20ನೇ ಮಹಾಧಿವೇಶನದ ಕಲಾಪಗಳಿಗೆ ಮತ್ತು ತೀರ್ಮಾನಗಳಿಗೆ ಮುಖ್ಯಧಾರೆಯ ಮಾಧ್ಯಮಗಳ ಪ್ರತಿಕ್ರಿಯೆಗಳು ನಿರೀಕ್ಷಿತ ದಾರಿಗಳಲ್ಲಿಯೇ ಇವೆ. ಇವು ಮಾರ್ಕ್ಸ್‌ವಾದಿ-ಲೆನಿನ್‌ವಾದಿ ತತ್ವಸಿದ್ಧಾಂತಗಳನ್ನೇ ಹೀಗಳೆಯುವ ಉನ್ಮತ್ತ ಕಮ್ಯುನಿಸ್ಟ್-ವಿರೋಧಿ ಉದ್ಗಾರಗಳಿಂದ ಹಿಡಿದು ಭಾರತೀಯ ವಾಸ್ತವತೆಗಳನ್ನು ಅರಿಯುವ ಸಾಮರ್ಥ್ಯ ಸಿಪಿಐ(ಎಂ)ಗೆ ಇಲ್ಲ ಎನ್ನುವ ವರೆಗೆ ವಿವಿಧ ಬಗೆಯವು. ಬಹಳಷ್ಟು ವಿಷಕಾರುವ ದಾಳಿಗಳು ಇವೆರಡುಗಳ ನಡುವಿನವು. ಇವೆಲ್ಲ ಒಂದೋ, ಸಿಪಿಐ(ಎಂ) ಭಾರತದ ವಾಸ್ತವತೆಗಳ ಬಗ್ಗೆ ಮತ್ತು ಆಮೂಲಕ ಕ್ರಾಂತಿಕಾರಿ ಆಂದೋಲನದ ಮುನ್ನಡೆಯ ಬಗ್ಗೆ ಏನು ಹೇಳುತ್ತಿದೆ ಎಂಬುದನ್ನು ಗ್ರಹಿಸಲು ಅವರು ಅಸಮರ್ಥರಾಗಿರುವುದನ್ನು ಪ್ರದರ್ಶಿಸುತ್ತವೆ, ಇಲ್ಲವೇ ಜಾಗತಿಕ ಹಣಕಾಸು ಬಂಡವಾಳದ ಯಜಮಾನರುಗಳನ್ನು ಮತ್ತು ನವ-ಉದಾರವಾದದ ಪಂಡಿತರನ್ನು ಸುಪ್ರೀತಗೊಳಿಸುವ ಅವರ ನಗ್ನ ಆಕಾಂಕ್ಷೆಯನ್ನು ಬಿಂಬಿಸುತ್ತವೆ.



ಭಾರತದಲ್ಲಿನ ನವ-ಉದಾರವಾದಿ ಆರ್ಥಿಕ ಸುಧಾರಣಾ ದಿಕ್ಪಥದ ಡಂಗುರ ಸಾರುವ ಮಂದಿ ಸಿಪಿಐ(ಎಂ) ಮತ್ತೊಮ್ಮೆ ಪ್ರಸಕ್ತ ವಾಸ್ತವತೆಗಳನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತಿದೆ ಎಂದು ಹೀಯಾಳಿಸಿದ್ದಾರೆ. ದಿ ಇಕನಾಮಿಕ್ ಟೈಮ್ಸ್‌ನ ಸಂಪಾದಕೀಯ ಟಿಪ್ಪಣಿ(ಏಪ್ರಿಲ್ 11, 2012) ಸಿಪಿಐ(ಎಂ) "ಎಂದೂ ಸುಧಾರಣೆಗಳು ಖಾಸಗಿ ವಲಯದ ಸೃಜನಶೀಲತೆಯನ್ನು ಹರಿಯಬಿಡುತ್ತವೆ, ಲಕ್ಷಾಂತರ ಜನಗಳಿಗೆ ಉದ್ಯೋಗಗಳನ್ನು ಮತ್ತು ಅವಕಾಶಗಳನ್ನು ಸೃಷ್ಟಿಸುತ್ತವೆ ಎಂದು ಒಪ್ಪಿಕೊಳ್ಳಲು ಸಿದ್ಧವಾಗಿಲ್ಲ" ಎಂದಿದೆ. ಅದೇ ರೀತಿ, ಬಿಸಿನೆಸ್ ಸ್ಟಾಂಡರ್ಡ್ ಸಂಪಾದಕೀಯ "ಒಂದು ವಿಚಾರದ ಸಮಯ ಬಂದಿದ್ದರೆ, ಅದನ್ನು ಪ್ರತಿರೋಧಿಸುವುದು ಸಾಧ್ಯವಿಲ್ಲ ಎಂಬುದು ವಿಕ್ಟರ್ ಹ್ಯೂಗೊರವರ ಪ್ರಖ್ಯಾತ ಉದ್ಗಾರ. ವಾಸ್ತವತೆಯ ಸಂಪರ್ಕವಿಲ್ಲದ ಸಿಪಿಐ(ಎಂ)ನ ದಿಲ್ಲಿ-ಕೇಂದ್ರಿತ ನಾಯಕತ್ವಕ್ಕೆ ಸಮಯ ಕಳೆದು ಹೋದ ಒಂದು ವಿಚಾರವನ್ನು ಪ್ರತಿರೋಧಿಸುವುದು ಸಾಧ್ಯವಿಲ್ಲ" ಎಂದಿದೆ. ಏಶ್ಯನ್ ಏಜ್ (ಏಪ್ರಿಲ್ 10, 2012) "ಸಾಮಾಜಿಕ ನ್ಯಾಯವನ್ನು ಪ್ರೋತ್ಸಾಹಿಸಲು ಪ್ರತಿಯೊಬ್ಬರನ್ನೂ ಬಡತನಕ್ಕೆ ಎಳೆಯುವ ಬದಲು . . . ಎಲ್ಲೆಡೆಯೂ ಸಮಯ ಬದಲಾಗುತ್ತಿದೆ, ನಮ್ಮ ಮಾರ್ಕ್ಸ್‌ವಾದಿಗಳೂ ಕೂಡ ತಮ್ಮ ಯೋಚನೆಯನ್ನು ಬದಲಿಸಬೇಕಾದ ಸಮಯ ಬಂದಿದೆ" ಎಂದು ಸಂಪಾದಕೀಯದಲ್ಲಿ ಹೇಳಿದೆ.



ಬಂಡವಾಳದ ಭಟ್ಟಂಗಿಗಳಿಗೆ ದಿಗಿಲು

ಜಾಗತಿಕ ಹಣಕಾಸಿನ ಈ ಹೊಗಳು ಭಟ್ಟಂಗಿಗಳಿಗೆ ಸಿಪಿಐ(ಎಂ)ನ 20ನೇ ಮಹಾಧಿವೇಶನ ಭಾರತೀಯ ಜನತೆಗೆ ನೀಡಿರುವ ಸ್ಫೂರ್ತಿದಾಯಕ ಕರೆ ದಿಗಿಲುಂಟು ಮಾಡಿದೆ. ಹೆಚ್ಚೆಚ್ಚು ಜನಗಳನ್ನು ಬಡತನಕ್ಕೆ, ಅಭಾವಗಳಿಗೆ ತುತ್ತಾಗಿಸುತ್ತಿರುವ ಈ ಆರ್ಥಿಕ ನೀತಿಗಳು ದೇಶದ ಸಂಪನ್ಮೂಲಗಳನ್ನು ಲೂಟಿ ಮಾಡುತ್ತಿರುವ ವಿರುದ್ಧ ನಮ್ಮ ಜನತೆಯ ಎಲ್ಲ ಶೋಷಿತ ವಿಭಾಗಗಳನ್ನು ಹೋರಾಟಗಳಲ್ಲಿ ಒಂದುಗೂಡಿಸುವ ದೃಢನಿರ್ಧಾರದ ಕರೆ ಅವರಲ್ಲಿ ಭೀತಿಯುಂಟು ಮಾಡಿದೆ. ಭಾರತದಲ್ಲಿ ಬಡತನದ ಅತ್ಯಂತ ಅಸಂಬದ್ಧವಾದ ಅಧಿಕೃತ ಅಂದಾಜುಗಳ ಪ್ರಕಾರ ಕೂಡ ಈಗ ದಟ್ಟ ದಾರಿದ್ರ್ಯ ಮತ್ತು ವಂಚಿತ ಬದುಕು ಸಾಗಿಸುತ್ತಿರುವ ಜನಗಳ ಸಂಖ್ಯೆ ದೇಶ ಸ್ವತಂತ್ರವಾದಾಗ ಇದ್ದ ಒಟ್ಟು ಜನಸಂಖ್ಯೆಗಿಂತಲೂ ಹೆಚ್ಚು. ಈ ಎರಡು ದಶಕಗಳ ಸುಧಾರಣೆಗಳ ಅವಧಿಯಲ್ಲಿ ಭಾರತದಲ್ಲಿನ ಡಾಲರ್ ಬಿಲಿಯಾಧಿಪತಿಗಳ ಸಂಖ್ಯೆ ಮೂರು ಪಟ್ಟಾಗಿದೆ, ಅವರ ಒಟ್ಟು ಆಸ್ತಿಯ ಪ್ರಮಾಣ ನಮ್ಮ ಒಟ್ಟು ದೇಶೀ ಉತ್ಪಾದನೆಯ ಮೂರನೇ ಒಂದರ ಮಟ್ಟಕ್ಕೆ ಬೆಳೆದಿದೆ; ಆದರೆ ನಮ್ಮ 80ಶೇ.ಕ್ಕಿಂತಲೂ ಹೆಚ್ಚು ಜನ ಈಗಲೂ 20ರೂ. ಕೂಡ ಖರ್ಚು ಮಾಡಲಾರದ ಹೀನಾಯ ಸ್ಥಿತಿಯಲ್ಲಿದ್ದಾರೆ. ಇಂತಹ ಪರಿಸ್ಥಿಗಳನ್ನು ಬದಲಿಸಲು ಸಿಪಿಐ(ಎಂ) ಕಟಿಬದ್ಧವಾಗಿದೆ. ಇದನ್ನು ಬೃಹತ್ ಪ್ರಮಾಣದಲ್ಲಿ ಜನತೆಯ ಶಕ್ತಿಯನ್ನು ಅಣಿನೆರೆಸಿ, ನವ-ಉದಾರವಾದಿ ಧೋರಣೆಯ ದಿಕ್ಕನ್ನು ಆಳುವ ವರ್ಗಗಳು ಕೈಬಿಡುವಂತೆ ಬಲವಂತ ತರುವ ಮೂಲಕ ಅದು ಮಾಡಿಯೇ ಮಾಡುತ್ತದೆ.

ಸಿಪಿಐ(ಎಂ)ನ್ನು ತನ್ನ ಪರವಾಗಿ ಸೆಳೆದುಕೊಳ್ಳಲಾರದ ನವ-ಉದಾರವಾದದ ಹತಾಶೆ, ತನ್ನ ಪರವಾದವರ ಜತೆ ಸೇರುವ ಬದಲು, ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ನೇತೃತ್ವದ ಸಾಮ್ರಾಜ್ಯಶಾಹಿ ಜಾಗತೀಕರಣದತ್ತ ಬಲವಂತದಿಂದ ತಳ್ಳುತ್ತಿರುವ ಈ ಧೋರಣೆಗಳ ವಿರುದ್ಧ ಜನತೆಯ ಹೋರಾಟಗಳನ್ನು ಬಲಪಡಿಸಲು ದ್ವಿಗುಣ ದೃಢತೆಯಿಂದ 20ನೇ ಮಹಾಧಿವೇಶನ ತೀರ್ಮಾನಿಸಿರುವುದರಿಂದ ಉಂಟಾಗಿರುವ ಹತಾಶೆ ಅವರ ಈ ದಾಳಿಗಳಲ್ಲಿ ಬಿಂಬಿತವಾಗಿದೆ. ನವ-ಉದಾರವಾದಿ ಆರ್ಥಿಕ ಸುಧಾರಣೆಯ ದಿಕ್ಪಥವನ್ನು ಅಪ್ಪಿಕೊಂಡಿರುವ ದೊಡ್ಡ ಬಂಡವಾಳಿಗರ ನೇತೃತ್ವದ ಭಾರತೀಯ ಆಳುವ ವರ್ಗಗಳನ್ನು ಖಂಡತುಂಡವಾಗಿ ವಿರೋಧಿಸುವ ರಣಕಹಳೆಯನ್ನು ಸಿಪಿಐ(ಎಂ)ನ 20ನೇ ಮಹಾಧಿವೇಶನ ಮೊಳಗಿಸಿದೆ.

ಸೋಶಲ್ ಡೆಮಾಕ್ರಸಿಯ ಸಲಹೆ

ಮಾಧ್ಯಮಗಳಲ್ಲಿನ ಇನ್ನೊಂದು ಬಗೆಯ ಧಾಳಿಗಳು ಸಿಪಿಐ(ಎಂ)ನ ಈ ದೃಢ ನಿರ್ಧಾರದ ಪುನರುಚ್ಚಾರ ಮೊನಚು ಕಳಕೊಳ್ಳುವಂತೆ ಮಾಡುವ ಪ್ರಯತ್ನ ನಡೆಸಿವೆ. ಸಿಪಿಐ(ಎಂ)ನ್ನು ನವ-ಉದಾರವಾದದ ಪರವಾಗಿ ಸೆಳೆದುಕೊಳ್ಳಲಾಗದಿದ್ದರೇನಂತೆ, ಅವರು ಕಮ್ಯುನಿಸ್ಟರಾಗಿ ಉಳಿಯದೆ ಸೋಶಲ್ ಡೆಮಾಕ್ರಟ್‌ಗಳಾಗುವಂತೆ ಸಲಹೆ ಕೊಟ್ಟು ಅವರನ್ನು ಅಸಮರ್ಥರಾಗಿಸೋಣ ಎಂಬುದು ಅವರ ತರ್ಕ. ಈ ರಾಗವನ್ನು ಆಲಾಪಿಸುತ್ತ ದಿ ಇಕನಾಮಿಕ್ ಟೈಮ್ಸ್ ನ ಸಂಪಾದಕೀಯ "ಸಿಪಿಐ(ಎಂ) ಲ್ಯಾಟಿನ್ ಅಮೆರಿಕಾದ ಎಡಪಂಥೀಯರಂತೆ ತಾವು ಸೋಶಲ್ ಡೆಮಾಕ್ರೆಟರು ಎಂದು ಹೆಮ್ಮೆ ಪಡುವ ಬದಲು, ಕ್ರಾಂತಿ ಬರುವ ವರೆಗಷ್ಟೇ ಸಮಯ ಕಳೆಯಲು ಚುನಾವಣೆಗಳಲ್ಲಿ ಸ್ಪರ್ಧಿಸುವ ಒಂದು ಕಮ್ಯುನಿಸ್ಟ್ ಪಕ್ಷ ಎಂದು ಆಗ್ರಹ ಪೂರ್ವಕವಾಗಿ ಹೇಳುತ್ತದೆ. ಈ ಹಳಸಲು ಸಿದ್ಧಾಂತಕ್ಕೆ ಸಿಲುಕಿಕೊಂಡಿದ್ದರೆ, ಅದು ಬಹುಕಾಲ ಹೀಗೆ ಕಾದುಕೊಂಡೇ ಇರಬೇಕಾದೀತು" ಎಂದು ಹೇಳಿದೆ. ಇದು ಸಿಪಿಐ(ಎಂ)ನ 20ನೇ ಮಹಾಧಿವೇಶನ ಕ್ರಾಂತಿಕಾರಿ ಪ್ರಕ್ರಿಯೆಯನ್ನು ತ್ವರಿತಗೊಳಿಸುವ ದೃಢನಿರ್ಧಾರ ಮಾಡಿದೆ ಎಂಬ ಯೋಚನೆಯಿಂದಲೇ ನಡುಗಿ ಹೋಗಿರುವವರ ಎಂದಿನ ಪ್ರತಿಕ್ರಿಯೆ. ಕಮ್ಯುನಿಸ್ಟರು ಕ್ರಾಂತಿಗೆ ನೇತೃತ್ವ ನೀಡುತ್ತಾರೆ, ಇದು ಅವರಿಗೆ ಗೊತ್ತಿದೆ, ಕ್ರಾಂತಿ ತಾನಾಗಿ 'ಉರುಳಿಕೊಂಡು' ಬರುವುದಿಲ್ಲ, ಅದನ್ನು ಉಂಟು ಮಾಡಬೇಕಾಗುತ್ತದೆ ಎಂಬುದನ್ನು ಇತಿಹಾಸ ಮತ್ತೆ-ಮತ್ತೆ ತೋರಿಸಿ ಕೊಟ್ಟಿದೆ.

ಇದೇ ರೀತಿ ಬಿಸಿನೆಸ್ ಸ್ಟಾಂಡರ್ಡ್ ಕೂಡ "ಎರಡು ದಶಕಗಳ ಹಿಂದೆ ರಾಜಕೀಯ ಮಾರ್ಕ್ಸ್‌ವಾದವನ್ನು ಕೈಬಿಟ್ಟ ಒಂದು ಜಗತ್ತಿನಲ್ಲಿ ತನ್ನನ್ನು ಹೇಗೆ ಮರುಹೊಂದಿಸಿಕೊಳ್ಳಬೇಕಾಗಿದೆ ಎಂಬ ಪ್ರಶ್ನೆ ಹೊಸ ವಿಚಾರಗಳನ್ನು ಪ್ರಚೋದಿಸಿಲ್ಲ" ಎನ್ನುತ್ತದೆ. ಸಿಪಿಐ(ಎಂ) ನವ-ಉದಾರವಾದದ ಜೊತೆ ಸೇರಲು ನಿರಾಕರಿಸುತ್ತಿದೆ ಎಂಬುದೇ ಅವರ ಈ ಎಲ್ಲ ಮಾತುಗಳ ಅರ್ಥ. ಸಿಪಿಐ(ಎಂ) ಮಾರ್ಕ್ಸ್‌ವಾದ-ಲೆನಿನ್‌ವಾದದ ಸೃಜನಾತ್ಮಕ ವಿಜ್ಞಾನಕ್ಕೆ ಮತ್ತು ಸಮಾಜವಾದಿ ಪರ್ಯಾಯದ ಈಡೇರಿಕೆಗೆ ಕಟಿಬದ್ಧವಾಗಿದ್ದುಕೊಂಡು, ಸೋಶಲ್ ಡೆಮಾಕ್ರಸಿಯತ್ತ ತಿರುಗಲು ನಿರಾಕರಿಸುತ್ತಿದೆಯಲ್ಲಾ ಎಂದು ಮರುಗುತ್ತಾ ದಿ ಇಂಡಿಯನ್ ಎಕ್ಸ್‌ಪ್ರೆಸ್(ಏಪ್ರಿಲ್ 12, 2012) 20ನೇ ಮಹಾಧಿವೇಶನದ ನಿರ್ಣಯಗಳು, "ತನ್ನ ದೂಳು ಹಿಡಿದ ಕೈಪಿಡಿಗಳನ್ನು ಅವಲಂಬಿಸಿರುವ ಸಿಪಿಐ(ಎಂ) ನಿರ್ಣಾಯಕ ರಾಜಕೀಯ ಮತ್ತು ಆರ್ಥಿಕ ಪಲ್ಲಟಗಳನ್ನು ಪತ್ತೆ ಮಾಡದಂತೆ ಮಾಡಿವೆ ಎಂಬುದನ್ನಷ್ಟೇ ಸಾಬೀತು ಮಾಡುತ್ತವೆ. ತನ್ನನ್ನು ಒಂದು ನೈಜ ಪ್ರಗತಿಪರ ಪರ್ಯಾಯವಾಗಿ ಮಾಡಲಾರದ ಅದು ತನ್ನ ಬಾಲವನ್ನೇ ಅಟ್ಟಿಸಿಕೊಂಡು ಹೋಗುವುದರಲ್ಲಿ ಸಿಲುಕಿಕೊಂಡಿದೆ" ಎಂದಿದೆ. ಭಾರತದಲ್ಲಿ

ಪುಟ 12 ಕ್ಕೆ

ಇದು ಮಹಾಜನೋತ್ಸವ

ಕಟ್ಟೋಣ ಸ್ವತಂತ್ರ ಹಾಗೂ ಐಕ್ಯ ವಿಮೋಚನಾ ಜನತೆಯ ಚಳುವಳಿಯನ್ನು

ವರದಿ :
ಸಮ್ಮೇಳನದ ಪ್ರತಿನಿಧಿಯಾಗಿ ಪಾಲ್ಗೊಂಡ
ಕೆ.ಮಹಾಂತೇಶರವರಿಂದ

ಈಗ್ಗೆ 75 ವರ್ಷಗಳ ಹಿಂದೆ ಅಂದರೆ ದೇಶಕ್ಕೆ ಸ್ವಾತಂತ್ರ್ಯ ದೊರಕುವ ಮುನ್ನ 1937 ರಲ್ಲಿ ಕೇವಲ 4 ಸದಸ್ಯರನ್ನು ಒಳಗೊಂಡು ಆರಂಭಗೊಂಡ ಕೇರಳ ಕಮ್ಯೂನಿಷ್ಟ್ ಪಕ್ಷದ ಒಂದು ಶಾಖೆ ಇಂದು ಒಂದು ಹೆಮ್ಮರವಾಗಿ ಬೆಳೆದಿದೆ. ಕಾಮ್ರೇಡ್ ಪಿ.ಕೃಷ್ಣಪಿಳ್ಳೆ, ಕಾಮ್ರೇಡ್ ಇಎಂಎಸ್ ನಂಬೂದ್ರಿಪಾಡ್.ಕೆ. ಕಾಮ್ರೇಡ್ ದಾಮೋದರನ್ ಹಾಗೂ ಕಾಮ್ರೇಡ್ ಎನ್.ಸಿ. ಶೇಖರ್ ನೇತೃತ್ವದ ಶಾಖೆ ಆರಂಭಗೊಂಡಿದ್ದು ಈಗ 20 ನೇ ಮಹಾಧಿವೇಶನ ನಡೆದ ಐತಿಹಾಸಿಕ ನಗರವಾದ ಕಲ್ಲಿಕೋಟೆಯಲ್ಲಿ. ಈಗ ಆ ಕಲ್ಲಿಕೋಟೆ ಜಿಲ್ಲೆಯೊಂದರಲ್ಲಿಯೇ 27 ಸಾವಿರ ಪಕ್ಷದ ಸದಸ್ಯರು 2500 ಶಾಖೆಗಳಲ್ಲಿದ್ದಾರೆ. ಮೂರು ತಾಲೂಕುಗಳನ್ನು ಒಳಗೊಂಡ ಈ ಜಿಲ್ಲೆಯ ಒಟ್ಟು ಜನಸಂಖ್ಯೆ 30 ಲಕ್ಷವಾಗಿದ್ದರೆ ಅದರಲ್ಲಿ ಪಕ್ಷದ ನೇತೃತ್ವದಲ್ಲಿರುವ ಸಾಮೂಹಿಕ ಸಂಘಟನೆಗಳ ಸಂಖ್ಯೆಯೇ 12 ಲಕ್ಷಕ್ಕಿಂತ ಹೆಚ್ಚು. ಸ್ವಾತಂತ್ರ್ಯ ಪೂರ್ವದಿಂದ ಹಿಡಿದು ಇಲ್ಲಿವರೆಗೂ ಈ ಜಿಲ್ಲೆಯು ಕೇರಳದ ದುಡಿಯುವ ವರ್ಗದ ಮುಂಚೂಣಿ ಕೇಂದ್ರವಾಗಿ ಕೆಲಸ ಮಾಡುತ್ತಾ ಬಂದಿದೆ. ಈ ನಿರಂತರ ದುಡಿತ ಮತ್ತು ಚಳುವಳಿಯ ಪರಿಣಾಮವಾಗಿಯೇ ಕಳೆದ 35 ವರ್ಷಗಳಿಂದಲೂ ಇಲ್ಲಿನ ಜನರು ಮಹಾನಗರ ಪಾಲಿಕೆಯಲ್ಲಿ ಸಿಪಿಐ(ಎಂ) ಪಕ್ಷದ ನೇತೃತ್ವದ ಎಡರಂಗವನ್ನೇ ಚುನಾಯಿಸುತ್ತಾ ಇತಿಹಾಸ ನಿರ್ಮಿಸಿದ್ದಾರೆ. ಅಲ್ಲದೆ ಸಧ್ಯ ಜಿಲ್ಲೆಯಲ್ಲಿರುವ 12 ವಿಧಾನ ಸಭಾ ಕೇತ್ರಗಳ ಪೈಕಿ 10 ರಲ್ಲಿ ಎಡರಂಗದ ಶಾಸಕರಾಗಿ ಆಯ್ಕೆ ಮಾಡಿದ್ದಾರೆ.

ಐದು ಶತಮಾನಗಳ ಹಿಂದೆ, ಪೋರ್ಚುಗೀಸ್ ವ್ಯಾಪಾರಿ ವಾಸ್ಕೋಡಿಗಾಮ ಕಲ್ಲಿಕೋಟೆಗೆ ಬಂದಿಳಿಯುವ ಮುನ್ನ ಇದೊಂದು ಅರಬ್ ವ್ಯಾಪರಸ್ಥರೊಂದಿಗೆ ಉತ್ತಮ ವ್ಯಾಪಾರ ಸಂಬಂಧ ಹೊಂದಿದ್ದ ಕೇಂದ್ರವಾಗಿ ಹಲವು ಶತಮಾನಗಳ ಕಾಲ ಕಾರ್ಯನಿರ್ವಹಿಸುತ್ತಿದ್ದ ನಗರವಾಗಿತ್ತು ಮತ್ತು ಪ್ರಗತಿ ಹಾಗೂ ಸೌಹಾರ್ಧತೆ ಸಾಕ್ಷಿಯಾಗಿತ್ತು. ಮೊದಲಿನಿಂದಲೂ ಕಲ್ಲಿಕೋಟೆ ಮಲಬಾರ್ ಪ್ರಾಂತದ ಪ್ರಮುಖ ಕೇಂದ್ರ, ಮಾತ್ರವಲ್ಲ ಹಲವು ಸಮರಧೀರ ದುಡಿಯುವ ಜನರ ಚಳುವಳಿಯನ್ನು ಮುನ್ನೆಡೆಸಿದ ಹಿರಿಮೆ



ಹೊಂದಿದೆ. ಪೋರ್ಚುಗೀಸ್ ವಸಹಾತುಶಾಹಿಗಳು ಇಲ್ಲಿನ ಸಮುದ್ರ ತೀರಕ್ಕೆ ಕಾಲಿಡುತ್ತಿದ್ದಂತೆ ಅವರ ವಿರುದ್ಧ ಹೋರಾಡಿ ಹುತಾತ್ಮನಾದುದ್ದು ಕಲ್ಲಿಕೋಟೆ ರಾಜನ ನೌಕೆಯ ಕ್ಯಾಪ್ಟನ್ ಕುಂಜಲಿ ಮರಕ್ಕರ್. ಆ ನಂತರದಲ್ಲಿ ಬ್ರಿಟಿಷರ ವಿರುದ್ಧ ನೆಡೆದ ಎಲ್ಲಾ ಹೋರಾಟಗಳಿಗೆ ಈ ನಗರ ಐತಿಹಾಸಿಕ ಸಾಕ್ಷಿಯಾಗಿ ನಿಂತಿದೆ. ಸ್ವಾತಂತ್ರ್ಯ ಚಳುವಳಿಯ ಇತಿಹಾಸದಲ್ಲಿ ಬ್ರಿಟಿಷ್‌ರನ್ನು ನಿದ್ದೆಗೆಡಿಸಿದ ಮಾಪಿಳ್ಳೆ ದಂಗೆಗಳು, ವಯಾನಾಡು ಆದಿವಾಸಿ ಜನರ ದಂಗೆಗಳು, ಖಿಲಾಪತ್ ಚಳುವಳಿ ಅಂಗವಾಗಿ ಬೆಳೆದು ಬಂದ ಅಸಹಾಕಾರ ಚಳುವಳಿಗಳು ಆ ನಂತರದಲ್ಲಿ ಕಮ್ಯೂನಿಷ್ಟ್ ಪಕ್ಷದ ವಿಶೇಷವಾಗಿ ಕೃಷ್ಣಪಿಳ್ಳೆ, ಇಎಂಎಸ್, ಎಕೆ ಗೋಪಾಲನ್ ನೇತೃತ್ವದಲ್ಲಿ ಬೆಳೆದು ಬಂದ ರೈತ ಬಂಡಾಯಗಳು ಹಾಗೂ ಜಾತಿ ವ್ಯವಸ್ಥೆ, ಸಾಮಾಜಿಕ ತಾರತಮ್ಯಗಳ ವಿರುದ್ಧ ಈ ಜಿಲ್ಲೆಯಲ್ಲಿ ನಡೆಸಿದ ಹೋರಾಟಗಳ ಪರಿಣಾಮವಾಗಿ ಒಟ್ಟಾರೆ ಕೇರಳ ಸಮಾಜ ಅದರೊಳಗಿನ ಈ ಮಲಬಾರ್ ಪ್ರಾಂತವು ಈಗಲೂ ಕಮ್ಯೂನಿಷ್ಟ್ ಚಳುವಳಿಯ ಪ್ರಧಾನ ನೆಲೆಯಾಗಿ ಸ್ಪೂರ್ತಿಯ ಕೇಂದ್ರವಾಗಿ ಹೂರಹೊಮ್ಮಿದೆ. ಇಂತಹ ಎಲ್ಲಾ ಐತಿಹಾಸಿಕ ಘಟನೆಗಳಿಗೆ ಕಾರಣವಾಗಿ ಈಗಲೂ ಆ ಪರಂಪರೆಯನ್ನು ತನ್ನ ಒಡಲಲ್ಲಿಟ್ಟುಕೊಂಡು ಎಲ್ಲಾ ದುಡಿವ ಜನರ ಹೋರಾಟಗಳನ್ನು ಮುನ್ನೆಡೆಸುತ್ತಿರುವ ಕಲ್ಲಿಕೋಟೆ(ಕೋಝಿಕೊಡೆ)ಯಲ್ಲಿ ಸಿಪಿಐ(ಎಂ) ಪಕ್ಷದ 20 ನೇ ಮಹಾಧಿವೇಶನ ನಡೆಯಿತೆಂದರೆ ಅದರ ಮಹತ್ವ ಹೇಗಿತ್ತು ಎನ್ನುವ ಕುತೂಹಲ.ಸಹಜವಾಗಿಯೇ ಸಮಾನತೆಯ ಕನಸಿಗಾಗಿ ಹಂಬಲಿಸುವ ಲಕ್ಷಾಂತರ ಜನರ ಮನಲ್ಲಿರುತ್ತದೆ. ಆ ಎಲ್ಲಾ ಹಂಬಲಿಕೆಗಳನ್ನು ತಣಿಸಲು ಕೇವಲ ಬರವಣಿಗೆಯಿಂದ ಸಾಧ್ಯವಿಲ್ಲ. ಅದನ್ನು ಸ್ವತಃ ನೋಡಿ ಅನುಭವಿಸಿದವರಿಗೆ ಮಾತ್ರವೇ ಅದು ಸಾಧ್ಯ. ಆದರೂ 20 ನೇ ಮಹಾಧಿವೇಶನದ ಕೆಲವು ವಿಶೇಷಗಳನ್ನು ಹಂಚಿಕೊಳ್ಳುವ ಸಣ್ಣ ಪ್ರಯತ್ನ ಮಾತ್ರ ಇಲ್ಲಿದೆ.

ಕೇರಳದಲ್ಲಿ ಇದು 4 ನೇ ಅಧಿವೇಶನ: ದೇಶದಲ್ಲಿ ಕಮ್ಯೂನಿಷ್ಟ ಪಕ್ಷ 1920 ರಲ್ಲಿ ಆರಂಭಗೊಂಡ ನಂರತದಲ್ಲಿ ಇದುವರೆಗೂ 20 ಅಧಿವೇಶನಗಳು ನಡೆದಿವೆ. ಇದರಲ್ಲಿ ನಾಲ್ಕು ಅಧಿವೇಶನಗಳು ಅಂದರೆ, 4ನೇ ಮಹಾಧಿವೇಶನ (1956 ಪಾಲಕ್ಕಾಡ) 8ನೇ ಮಹಾಧಿವೇಶನ(ಕೊಚ್ಚಿ) 13ನೇ ಮಹಾಧಿವೇಶನ (ತಿರುವನಂತಪುರ) ಹಾಗೂ 20 ನೇ ಮಹಾಧಿವೇಶನ 2012 ಕೋಝೀಕೊಡ್) ಸೇರಿದಂತೆ ಒಟ್ಟು 4 ಮಹಾಧಿವೇಶನಗಳು ಕೇರಳದಲ್ಲಿ ನಡೆದಿವೆ.

5000 ಜನರ ಸ್ವಾಗತ ಸಮಿತಿ: ಬಹುಶಃ ಜಗತ್ತಿನ ಕಮ್ಯೂನಿಷ್ಟ್ ಪಕ್ಷದ ಇತಿಹಾಸದಲ್ಲಿ ಕೇರಳಕ್ಕೊಂದು ವಿಶಿಷ್ಟ ಸ್ಥಾನವಿದೆ. ರಾಜಕೀಯ ರಹಿತವಾದ ಕೇರಳವನ್ನು ಊಹಿಸಿಕೊಳ್ಳುವುದು ಸಾಧ್ಯವೇ ಇಲ್ಲ ಎನ್ನುವ ವಾತವರಣ ಇಲ್ಲಿಯದು. ಹಾಗಿಯೇ ಇಲ್ಲಿ ಸಾವಿರಾರು ಸಂಖ್ಯೆಯ ಕಮ್ಯುನಿಷ್ಟ ಕುಟುಂಬಗಳನ್ನು ಕಾಣಬಹುದು. ಮುಕ್ಕಾಲು ಶತಮಾನದ ಹಿಂದೆ ಆರಂಭಗೊಂಡ ಆ ಪ್ರಕ್ರಿಯೆ ಪಕ್ಷ ಮತ್ತು ಅದರ ಸಾಮೂಹಿಕ ಸಂಘಟನೆಗಳು ನಡೆಸುತ್ತಿರುವ ನಿರಂತರ ಚಳುವಳಿ ಹಾಗೂ ಸಂಘಟನೆಯಿಂದಾಗಿ ಈಗಲೂ ತಲೆಮಾರಿನಿಂದ ತಲೆಮಾರಿಗೆ ಗಟ್ಟಿಗೊಳ್ಳುತ್ತಾ ಸಾಗಿದೆ. ಆದ್ದರಿಂದಲೇ 20 ನೇ ಈ ಮಹಾಧಿವೇಶನವನ್ನು ಕಲ್ಲಿಕೋಟೆ ಜಿಲ್ಲೆಯ ಜನರ ಮನೆ ಮನಕ್ಕೂ ತಲುಪಿಸುವ ಭಾಗವಾಗಿಯೇ 5000 ಜನರ ವಿಶಾಲ ಸ್ವಾಗತ ಸಮಿತಿಯನ್ನು ಪಕ್ಷದ ರಾಜ್ಯ ಕಾರ್ಯದರ್ಶಿ ಕಾಮ್ರೇಡ್ ಪಿನಾರಾಯ್ ವಿಜಯನ್ ನೇತೃತ್ವದಲ್ಲಿ ರಚಿಸಿ ಅದರ ಅಡಿಯಲ್ಲಿ ಹತ್ತಾರು ಸಮಿತಿಗಳನ್ನು ರಚಿಸಲಾಗಿತ್ತು.ಹಾಧಿವೇಶನ ನಡೆದ ಸ್ಥಳವಂತೂ ಒಂದು ವಾರ ಪ್ರತಿ ನಿತ್ಯ ಜನಾಕರ್ಷಣೆಯ ಕೇಂದ್ರವಾಗಿತ್ತು. ಸಭಾಂಣದ ಸುತ್ತ ನಿರ್ಮಿಸಿದ್ದ ದೆಹಲಿ ಕೆಂಪು ಕೋಟೆ ಆಕರ್ಷಕ ಕೇಂದ್ರವಾಗಿತ್ತು. ಮುಖ್ಯಮಂತ್ರಿಗಳು, ಮಾಜಿಮುಖ್ಯಮಂತ್ರಿಗಳು, ಹಾಲಿ/ ಮಾಜಿ ಸಚಿವರು, ಸಂಸದರು,ಶಾಸಕರು ಅದಕ್ಕಿಂತ ಹೆಚ್ಚಾಗಿ ಎಲ್ಲಾ ಅಖಿಲ ಭಾರತ ನಾಯಕರ

ಪುಟ 12 ಕ್ಕೆ



400ಕ್ಕಿಂತ ಹೆಚ್ಚಿನ ಪತ್ರಕರ್ತರು ಸಮಾಗಮ:

ಇತ್ತೀಚಿನ ಚುನಾವಣೆಗಳಲ್ಲಿ ಸಿಪಿಐ(ಎಂ) ನೇತೃತ್ವದಲ್ಲಿ 35 ವರ್ಷಗಳಿಂದ ಅಧಿಕಾರದಲ್ಲಿದ್ದ ಪ.ಬಂಗ್ಾಳ ಸರ್ಕಾರ ಕೆಳಗಿಳಿದಿದೆ ನಿಜ. ಹಾಗೆಯೇ ಕೇಂದ್ರದಲ್ಲಿ ನಮ್ಮ ಪಕ್ಷದ ಲೋಕಸಭಾ ಬಲದಲ್ಲಿ ಕೂಡ ಗಣನೀಯ ಇಳಿಮುಖವಾಗಿದೆ. ಈ ಬಗ್ಗೆ ಬಂಡವಾಳ ಶಾಹಿ ಹಿಡಿತದಲ್ಲಿರುವ ಮಾಧ್ಯಮಗಳು ಸಿಪಿಐ(ಎಂ) ಅನುಸರಿಸಿದ ನೀತಿಗಳಿಂದಾಗಿ ಅವು ಪ್ರಸ್ತುತ ರಾಷ್ಟ್ರ ರಾಜಕಾರಣದಿಂದ ದೂರವಾಗಿವೆ. ಕೇಂದ್ರ ಸಮಿತಿ, ಪಾಲಿಟ್‌ಬ್ಯೂರೋ ಕೈಗೊಂಡ ಈ ತೀರ್ಮಾನಗಳು ಈ ಮಹಾಧಿವೇಶನಲ್ಲಿ ಖಂಡಿತ ಚರ್ಚೆಗೆ ಬಂದು ಮುಖಂಡರು ಸಾಕಷ್ಟು ಕಿರಿಕಿರಿ ಎದುರಿಸುವ ಸನ್ನಿವೇಶಗಳು ಎದುರಾಗಲಿವೆ ಎಂಬೆಲ್ಲಾ ಊಹಾಪೋಹದ ವರದಿಗಳನ್ನು ಪ್ರಕಟಿಸುತ್ತಾ ಅಧಿವೇಶನ ಪೂರ್ವದಲ್ಲೇ ಸಾಕಷ್ಟು ಅಪಪ್ರಚಾರ ನಡೆಸಿದ್ದರಿಂದ, ಈ ಅಧಿವೇಶನದ ವರದಿಗಾಗಿ ಕೇರಳದ ಸುದ್ದಿ ಮಾಧ್ಯಮಗಳು ಮತ್ತು ದೇಶಿ/ಅಂತರದೇಶಿ ಮಾಧ್ಯಮದ ಸುಮಾರು 400 ಕ್ಕಿಂತ ಹೆಚ್ಚಿನ ಪ್ರತಿನಿಧಿಗಳು ಒಂದು ವಾರಗಳ ಕಾಲ ಮಹಾಧಿವೇಶನದ ಆವರಣದಲ್ಲಿ ಜಮಾವಣೆಗೊಂಡು ಹಲವು ರೀತಿಯ ಅಂದರೆ ಪರ ವಿರೋಧದ ಸುದ್ದಿಗಳನ್ನು ಪುಖಾಂನುಪುಂಕವಾಗಿ ಪ್ರಕಟಿಸಿದವು. ಇವುಗಳ ಮಧ್ಯೆ ನಿಖರವಾದ ಮಾಹಿತಿಯನ್ನು ಕೈರಳಿಪೀಪಲ್ಸ್, ಕೈರಳಿ ಮತ್ತು ದೇಶಾಭಿಮಾನಿಗಳು ವಿಶೇಷವಾರ್ತೆ ಮತ್ತು ಪ್ರತಿನಿತ್ಯ ವಿಶೇಷ ಸಂಚಿಕೆಗಳನ್ನು ಮಲೆಯಾಳಿ ಮತ್ತು ಇಂಗ್ಲೀಷ್‌ನಲ್ಲಿ ಪ್ರಕಟಿಸುತ್ತಿದ್ದವು. ●

20ನೇ ಪಕ್ಷದ ಮಹಾಧಿವೇಶನದ ಅಧ್ಯಕ್ಷೀಯ ಭಾಷಣ

ಎಡಪಂಥವೇ ನೈಜ ಪರ್ಯಾಯ

2012, ಎಪ್ರಿಲ್ 4ರಿಂದ 9 ರವರೆಗೆ ಕೇರಳದ ಕೋಯಿಕ್ಕೋಡ್‌ನಲ್ಲಿ ನಡೆದ ಸಿಪಿಐ(ಎಂ)ನ 20ನೇ ಮಹಾಧಿವೇಶನದ ಉದ್ಘಾಟನಾ ಸಮಾರಂಭದಲ್ಲಿ ಎಸ್. ರಾಮಚಂದ್ರನ್ ಪಿಳ್ಳೆ ರವರು ಮಾಡಿದ ಅಧ್ಯಕ್ಷೀಯ ಭಾಷಣ.


ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ 20ನೇ ಮಹಾಧಿವೇಶನದ ಈ ಶುಭ ಸಂದರ್ಭದಲ್ಲಿ ನಿಮ್ಮೆಲ್ಲರಿಗೂ ಹಾರ್ದಿಕ ನಮನಗಳನ್ನು ಅರ್ಪಿಸಲು ಬಯಸುತ್ತೇನೆ. 20ನೇ ಮಹಾಧಿವೇಶನದ ಮುಂದಿರುವ ಸವಾಲುಗಳ ಬಗ್ಗೆ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ ಈಗಾಗಲೇ ವಿವರ ನೀಡಿದ್ದಾರೆ. ಪಕ್ಷಕ್ಕೆ ಮಹಾಧಿವೇಶನ ಎನ್ನುವುದು ಒಂದು ಅತ್ಯಂತ ಮಹತ್ವದ ಕಾರ್ಯಕ್ರಮ. ಪಕ್ಷದ ಎಲ್ಲ ರಾಜಕೀಯ ಮತ್ತು ಸಂಘಟನಾತ್ಮಕ ವಿಷಯಗಳನ್ನು ನಿರ್ಧರಿಸುವ ಪಕ್ಷದ ಅತ್ಯುನ್ನತ ಸಂಸ್ಥೆ ಎಂದರೆ ಪಕ್ಷದ ಮಹಾಧಿವೇಶನ.

ಪಕ್ಷದ 20ನೇ ಮಹಾಧಿವೇಶನವನ್ನು ಕೇರಳದಲ್ಲಿ ಸಂಘಟಿಸಲಾಗಿದೆ. ದೇಶ ಕಂಡ ಅತ್ಯುನ್ನತ ಕಾರ್ಮಿಕ ವರ್ಗದ ಮುಖಂಡರಾದ ಪಿ. ಕೃಷ್ಣ ಪಿಳ್ಳೆ, ಇಎಂಎಸ್ ನಂಬೂದಿರಿಪಾಡ್, ಎ.ಕೆ. ಗೋಪಾಲನ್ ಅವರನ್ನು ಕೊಡುಗೆಯಾಗಿ ನೀಡಿದ ಪಕ್ಷದ ಶಕ್ತಿಶಾಲಿ ಘಟಕವಾದ ಕೇರಳದಲ್ಲಿ ಅಧಿವೇಶನ ನಡೆಯುತ್ತಿರುವುದು ಗಮನಾರ್ಹ.

ದೇಶದಲ್ಲಿ ಸಿಪಿಐ(ಎಂ) ಮೊದಲಿನಿಂದಲೂ ಮಹತ್ವದ ಪಾತ್ರವನ್ನು ವಹಿಸಿಕೊಂಡು ಬಂದಿದೆ. ಕಮ್ಯುನಿಸ್ಟ್ ಪಕ್ಷ ಸ್ಥಾಪನೆಯಾದದ್ದು 1920ರಲ್ಲಿ. ರಷ್ಯಾ ಕ್ರಾಂತಿಯಿಂದ ಉತ್ತೇಜಿತರಾದ ಸಾಮ್ರಾಜ್ಯಶಾಹಿ ವಿರೋಧಿ ಗುಂಪೊಂದು ಪಕ್ಷವನ್ನು ರಚನೆ ಮಾಡಿತು. ಮೊದಲ ಬಾರಿ ಪೂರ್ಣ ಸ್ವಾತಂತ್ರ್ಯದ ಬೇಡಿಕೆಯನ್ನು 1921ರಲ್ಲಿ ಎತ್ತಿದವರೇ ಭಾರತೀಯ ಕಮ್ಯೂನಿಸ್ಟರು. ನಿರ್ದಿಷ್ಟ ಕಾರ್ಯಕ್ರಮದ ಮೂಲಕ ಸಾಮಾಜಿಕ ಆರ್ಥಿಕ ಬದಲಾವಣೆಯೊಂದಿಗೆ ಸ್ವಾತಂತ್ರ್ಯ ಲಭಿಸಬೇಕು ಎಂಬ ರಚನಾತ್ಮಕ ಚಿಂತನೆ ಉಳ್ಳ ಒತ್ತಾಯವನ್ನೂ ಮಾಡಿದವರು ಕಮ್ಯೂನಿಸ್ಟರೇ. ಭೂಮಾಲಿಕ ಪದ್ಧತಿಯ ನಿರ್ಮೂಲನೆ, ವಸಾಹತುಶಾಹಿಯ ಅಂತ್ಯ ಮತ್ತು ಜಾತಿ ಆಧಾರಿತ ಶೋಷಣೆಯನ್ನು ಕೊನೆಗಾಣಿಸಬೇಕೆಂದು ಬಲವಾಗಿ ಪ್ರತಿಪಾದನೆ ಮಾಡಿದವರು ಇವರೇ.

ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿರುವಾಗಲೇ ಸಾಮೂಹಿಕ ಸಂಘಟನೆಗಳನ್ನು ಕಟ್ಟಿ ಬೆಳೆಸಿದರು. ಕಾರ್ಮಿಕ ಸಂಘಟನೆಗಳನ್ನು ರಚಿಸಿ ಕಾರ್ಮಿಕರನ್ನು ಹಾಗು ರೈತ ಸಂಘದ ಮೂಲಕ ನೇಗಿಲ ಯೋಗಿಗಳನ್ನು ಹಾಗೂ ವಿದ್ಯಾರ್ಥಿ ಸಂಘದ ಮೂಲಕ ಭವಿಷ್ಯದ ಕಣ್ಮಣಿಗಳನ್ನು ಕಮ್ಯೂನಿಸ್ಟರು ಸಂಘಟಿಸುತ್ತಾ ಬಂದರು.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಸಮಾಜವಾದಿ ಕಾಂಗ್ರೆಸ್ ಪಕ್ಷದ ಜೊತೆಯಾಗಿ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸುತ್ತಲೇ ಕಾರ್ಮಿಕ ವರ್ಗದ ನೇತೃತ್ವದಲ್ಲಿ ಸ್ವತಂತ್ರ ಪಕ್ಷವನ್ನು



ಸಂಘಟಿಸಿದರು.

ಜನ್ಮ ತಾಳಿದ ದಿನದಿಂದಲೇ ಕಮ್ಯೂನಿಸ್ಟ್ ಪಕ್ಷ ಭಾರತೀಯ ರಾಜಕೀಯ ರಂಗದಲ್ಲಿ ರಚನಾತ್ಮಕ ಹಾಗೂ ಪ್ರಗತಿಪರ ಪಾತ್ರವನ್ನು ವಹಿಸುತ್ತಾ ಬಂದಿತು. ಅದರೊಂದಿಗೆ ಬಡ ಜನರು, ತುಳಿತಕ್ಕೊಳಗಾದವರು, ರೈತ–ಕಾರ್ಮಿಕರು, ಕೃಷಿ ಕೂಲಿ ಕಾರ್ಮಿಕರು, ಸಣ್ಣ–ಮಧ್ಯಮ ವರ್ಗದ ರೈತರು ಮತ್ತು ಮಧ್ಯಮ ವರ್ಗದ ನೌಕರರ ಹಿತಾಸಕ್ತಿಗಾಗಿ ಸದಾ ಹಗಲಿರುಳು ದುಡಿಯುತ್ತಾ ಬಂತು. ಸಾಮ್ರಾಜ್ಯಶಾಹಿ, ಕೋಮುವಾದಿ ಹಾಗೂ ವಿಭಜಕ ಶಕ್ತಿಗಳ ವಿರುದ್ಧ ನಿರಂತರ ಹೋರಾಟದಲ್ಲಿ ಮುಂಚೂಣಿಯ ಪಾತ್ರವನ್ನು ಪಕ್ಷ ವಹಿಸುತ್ತಲೇ ಬಂದಿತು.

ಬ್ರಿಟಿಷ್ ವಸಾಹತು ಆಡಳಿತ ಹಾಗೂ ನಂತರದಲ್ಲಿ ಕಾಂಗ್ರೆಸ್ ಸರ್ಕಾರಗಳು ಮತ್ತು ಬಂಡವಾಳಶಾಹಿ–ಭೂಮಾಲಿಕರು ನಡೆಸಿದ ನಿರಂತರ ದಬ್ಬಾಳಿಕೆಯನ್ನು ಪಕ್ಷ ಎದುರಿಸುತ್ತಲೇ ಬಂದಿತು. ಈ ಎಲ್ಲ ಹೋರಾಟಗಳಲ್ಲಿ ಕಮ್ಯೂನಿಸ್ಟ್ ಪಕ್ಷದ ಸಾವಿರಾರು ವೀರ ಸೇನಾನಿ ಕಾರ್ಯಕರ್ತರು ತಮ್ಮ ಜೀವಗಳನ್ನೇ ಅರ್ಪಿಸಿದರು.

ಈಗಿನ ಪರಿಸ್ಥಿತಿಯನ್ನು ಜನತಾ ಪ್ರಜಾಪ್ರಭುತ್ವ ಹಾಗೂ ಸಮಾಜವಾದಿ ಸಮಾಜದ ಸ್ಥಾಪನೆಯಲ್ಲಿ ಪರಿವರ್ತನೆ ಮಾಡುವ ಕ್ರಾಂತಿಕಾರಿ ಬದಲಾವಣೆಯನ್ನು ಸಾಧಿಸಲು ಸಿಪಿಐ(ಎಂ) ತಮ್ಮ ಲಕ್ಷ್ಯವನ್ನು ಹರಿಸಿದೆ.

ಸಂಸತ್ತಿನ ಒಳಗೆ ಮತ್ತು ಹೊರಗೆ ತನ್ನ ಹೋರಾಟವನ್ನು ಮುಂದುವರಿಸುತ್ತಾ ಸಾಮಾಜಿಕ ಬದಲಾವಣೆಯ ತನ್ನ ಉದ್ದೇಶದ ಈಡೇರಿಕೆಗಾಗಿ ಪ್ರಬಲ ಕ್ರಾಂತಿಕಾರಿ ಚಳವಳಿಯನ್ನು ಕಟ್ಟಿಬೆಳೆಸುತ್ತಿದೆ. ತನ್ನ ಈ ಕಾರ್ಯದಲ್ಲಿ ಪಕ್ಷ ಹಲವು ಅಡೆತಡೆಗಳನ್ನು ಎದುರಿಸಿದೆ, ಏಳು ಬೀಳುಗಳನ್ನು ಕಂಡಿದೆ.

ಕಳೆದ ಮಹಾಧಿವೇಶನದ ಬಳಿಕ ಹಲವು ಮಹತ್ವದ ಘಟನಾವಳಿಗಳು ನಡೆದಿವೆ. ನವ ಉದಾರೀಕರಣದ ಜನವಿರೋಧಿ ನೀತಿಗಳ ವಿರುದ್ಧ ಪಕ್ಷ ನಿರಂತರ ಚಳವಳಿ ನಡೆಸಿದೆ. ಸಾಮ್ರಾಜ್ಯಶಾಹಿ ವಿರುದ್ಧದ ಹೋರಾಟದಲ್ಲೂ ಮುಂಚೂಣಿಯ ಪಾತ್ರ ವಹಿಸಿದೆ. ಇದೇ ವೇಳೆ, ದೇಶದ ಸಾರ್ವಭೌಮತ್ವದ ರಕ್ಷಣೆಯಲ್ಲಿ ಸಮರಧೀರ ಹೋರಾಟ ನಡೆಸಿದೆ. ಕಳೆದ ಫೆಬ್ರವರಿ 28ರಂದು ಎಲ್ಲ ಕೇಂದ್ರೀಯ ಕಾರ್ಮಿಕ ಸಂಘಟನೆಗಳ ನೇತೃತ್ವದಲ್ಲಿ ನಡೆದ ಯಶಸ್ವೀ ಮುಷ್ಕರ ಐಕ್ಯ ಹೋರಾಟದ ಇತಿಹಾಸದಲ್ಲೇ ಒಂದು ಮೈಲುಗಲ್ಲಾಗಿದೆ. ಇತರ ಜನವಿಭಾಗಗಳು ಅನುಭವಿಸುತ್ತಿರುವ ಸಂಕಷ್ಟಗಳನ್ನು ಎತ್ತಿಕೊಂಡು ಇಂತಹ ಐಕ್ಯ ಹೋರಾಟಗಳನ್ನು ಕಟ್ಟಿ ಬೆಳೆಸಲು ಚಿಂತನೆಗಳು ನಡೆಯುತ್ತಿವೆ.

ಇತ್ತೀಚೆಗೆ ನಡೆದ ಕೆಲವು ಚುನಾವಣೆಗಳಲ್ಲಿ ಸಿಪಿಐ(ಎಂ) ತೀವ್ರ ಹಿನ್ನಡೆ ಅನುಭವಿಸಿದೆ. ಕಳೆದ ಲೋಕಸಭಾ ಚುನಾವಣೆ, ಆ ಬಳಿಕ ಕೇರಳ



ಮತ್ತು ಪಶ್ಚಿಮ ಬಂಗಾಳದಲ್ಲಿ ಹಿನ್ನಡೆ ಉಂಟಾಗಿದೆ. ಇದರ ಕಾರಣಗಳ ಬಗ್ಗೆ ವಿಚಾರ ವಿಮರ್ಶೆ ನಡೆಯಬೇಕಾಗಿದೆ ಮತ್ತು ಆಗಿರುವ ತಪ್ಪನ್ನು ಸರಿಪಡಿಸಲು ಸೂಕ್ತ ರಾಜಕೀಯ ಮತ್ತು ಸಂಘಟನಾತ್ಮಕ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

ಆಳುವ ವರ್ಗದ ಪರ ಇರುವ ಕಾರ್ಪೊರೇಟ್ ಮಾಧ್ಯಮ ಮತ್ತು ರಾಜಕೀಯ ಪಂಡಿತರು ಸಿಪಿಐ(ಎಂ) ಹಾಗೂ ಎಡಶಕ್ತಿಗಳ ವಿರುದ್ಧ ಇನ್ನಿಲದ ದಾಳಿ ನಡೆಸುತ್ತಿದ್ದು, ಪಕ್ಷದ ಭವಿಷ್ಯದ ಬಗ್ಗೆ ಅಪಪ್ರಚಾರ ನಡೆಸಿದ್ದಾರೆ. ಭಾರತೀಯ ರಾಜಕಾರಣದಲ್ಲಿ ಎಡಶಕ್ತಿಗಳು ಪ್ರಾಮುಖ್ಯತೆ ಕಳೆದುಕೊಂಡಿವೆ ಎಂದು ಹೇಳಿಕೊಳ್ಳಲಾರಂಭಿಸಿದ್ದಾರೆ. ಇದೇ ವೇಳೆ, ದೇಶದಲ್ಲಿ ನಡೆಯುತ್ತಿರುವ ಕೆಲವು ವಿದ್ಯಮಾನಗಳು ಸಿಪಿಐ(ಎಂ) ಮತ್ತು ಎಡ ಶಕ್ತಿಗಳ ಪ್ರಾಮುಖ್ಯತೆ ಮತ್ತು ಅಗತ್ಯವನ್ನು ತೋರಿಸತೊಡಗಿವೆ.

ಸಿಪಿಐ(ಎಂ) ಮತ್ತು ಎಡ ಶಕ್ತಿಗಳೇ ನವ ಉದಾರೀಕರಣ ನೀತಿಗಳ ವಿರುದ್ಧ ಸಮರ ಧೀರ ನಿರಂತರ ಹೋರಾಟವನ್ನು ನಡೆಸುವ ಏಕೈಕ ಶಕ್ತಿಯಾಗಿವೆ. ದೇಶದ ಸಾರ್ವಭೌಮತ್ವದ ರಕ್ಷಣೆಗಾಗಿ ಮತ್ತು ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಪ್ರಧಾನ ಶಕ್ತಿಯಾಗಿ ಸಿಪಿಐ(ಎಂ) ಹೊರಹೊಮ್ಮಿದೆ. ಭೂಮಿ, ಆಹಾರ, ಉದ್ಯೋಗ ಮತ್ತು ಸಾಮಾಜಿಕ ನ್ಯಾಯಕ್ಕೆ ಸಂಬಂಧಿಸಿದ ಜನಸಾಮಾನ್ಯರ ಪ್ರಶ್ನೆಗಳನ್ನು ಎತ್ತಿಕೊಂಡು ನಿರಂತರ ಹೋರಾಟ ರೂಪಿಸಿದ್ದರೆ ಅದು ಸಿಪಿಐ(ಎಂ) ಮತ್ತು ಎಡಶಕ್ತಿಗಳು ಮಾತ್ರ. ಕೋಮುವಾದಿ ಶಕ್ತಿಗಳಿಗೆ ಪ್ರತಿಯಾಗಿ, ವಿಭಜನಕಾರಿ, ವಿಚ್ಛಿದ್ರಕಾರಿ ಶಕ್ತಿಗಳನ್ನು ಮಟ್ಟಹಾಕಿ ಜಾತ್ಯತೀತ ತತ್ವಗಳನ್ನು ಪ್ರತಿಪಾದಿಸಲು ಎಡಶಕ್ತಿಗಳು ಎಂದೆಂದೂ ಮುಂಚೂಣಿಯ ಹೋರಾಟ ನಡೆಸಿವೆ. ಈ ಹಿನ್ನೆಲೆಯಲ್ಲೇ ಆಳುವ ವರ್ಗದ ದಿವಾಳಿಕೋರ ನೀತಿಗಳಿಗೆ ಸಿಪಿಐ(ಎಂ) ಮತ್ತು ಎಡಶಕ್ತಿಗಳು ಮಾತ್ರವೇ ನಿಜವಾದ ಪರ್ಯಾಯ ಎಂಬುದನ್ನು ಪದೇ ಪದೇ ತೋರಿಸಿಕೊಟ್ಟಿದೆ.

20ನೇ ಮಹಾಧಿವೇಶನದಲ್ಲಿ ರಾಜಕೀಯ ನಿರ್ಣಯಗಳು, ಸೈದ್ಧಾಂತಿಕ ಗೊತ್ತುವಳಿಗಳ ಜೊತೆಗೆ ಪಕ್ಷದ ಸಂವಿಧಾನಕ್ಕೆ ಕೆಲವೊಂದು ತಿದ್ದುಪಡಿಗಳ ಬಗ್ಗೆ ಗಂಭೀರವಾದ ಚರ್ಚೆಗಳು ನಡೆಯಲಿವೆ. ಇದರ ಜೊತೆಗೆ ಪಕ್ಷವನ್ನು ದೇಶವ್ಯಾಪಿ ವಿಸ್ತರಿಸುವ ನಿಟ್ಟಿನಲ್ಲಿ ವ್ಯಾಪಕ ಚರ್ಚೆಗಳು ನಡೆಯಲಿದ್ದು, ಮುಂದಿನ ಲಕ್ಷ್ಯದತ್ತ ಹೆಜ್ಜೆ ಹಾಕುವ ಕಾರ್ಯಕ್ರಮವನ್ನು ರೂಪಿಸಬೇಕಾಗಿದೆ.

ಈ ಎಲ್ಲ ಸವಾಲುಗಳನ್ನು ಎದುರಿಸುವ ಪ್ರಮುಖ ನಿರ್ಧಾರಗಳನ್ನು 20ನೇ ಮಹಾಧಿವೇಶನ ತೆಗೆದುಕೊಳ್ಳಲಿದೆ ಎಂಬ ಪೂರ್ಣ ವಿಶ್ವಾಸ ನನಗಿದೆ. ಈ ಹಿನ್ನೆಲೆಯಲ್ಲೇ ಸಿಪಿಐ(ಎಂ)ನ ಮಟ್ಟಿಗೆ 20ನೇ ಮಹಾಧಿವೇಶದ ಮಹತ್ವದ ಮೈಲಿಗಲ್ಲಾಗಲಿದೆ.

ಹೆಚ್ಚುತ್ತಿರುವ ರೈತರ ಆತ್ಮ ಹತ್ಯೆಗಳು ಮತ್ತು ಬರದ ಕುರಿತು ಭಾಷಣಗಳು

ರಾಜ್ಯದ ರಾಜಕೀಯದಲ್ಲಿ ಏನೇನೋ ಗೊಂದಲಗಳು, ಅಧಿಕಾರಕ್ಕಾಗಿ ಕಿತ್ತಾಟಗಳು, ಗುಂಪುಗಾರಿಕೆಗಳು ನಡೆಯುತ್ತಿರುವಾಗ ರಾಜ್ಯದ ಜನರ ಬದುಕನ್ನು ಬೆಲೆ ಏರಿಕೆ, ಬರ, ಭ್ರಷ್ಟಾಚಾರದಂತಹ ಸಮಸ್ಯೆಗಳು ನಿಜಕ್ಕೂ ಸುಡುತ್ತಾ ಹೊರಟಿವೆ. ಆದರೆ ಆಳುವ ಜನರಿಗೆ ಇದರ ಬಗೆಗೆ ಆತಂಕವಿಲ್ಲ ಎಂಬುದು ಅಘಾತಕಾರಿಯಾದ ಅಂಶವಾಗಿದೆ.


ಮೂರು ತಿಂಗಳಲ್ಲಿ 40 ಕ್ಕೂ ಹೆಚ್ಚು ರೈತರ ಆತ್ಮಹತ್ಯೆಗಳು :

ಭೀಕರ ಬರ, ಬೆಳೆ ಹಾನಿಗಳಿಂದ ತತ್ತರಿಸಿರುವ ರೈತರ ಬದುಕಿಗೆ ಆಳುವ ಸರ್ಕಾರಗಳಿಂದ ಸೂಕ್ತ ಪರಿಹಾರ ಸಿಗುವ ಯಾವ ಸೂಚನೆಯೂ ಕಾಣಲಿಲ್ಲ. ಪರಿಹಾರ ಎಂಬ ಸಾಂತ್ವಾನ ಕಾಣದ ರೈತರು ಸಾವಿನ ಮನೆಯ ಹಾದಿಯಲ್ಲಿ ಸಾಗುವ ಪ್ರವೃತ್ತಿ ಇತ್ತೀಚೆಗೆ ತೀವ್ರಗೊಂಡಿದೆ. ಕಳೆದ ಮೂರು ತಿಂಗಳಲ್ಲಿ ಸುಮಾರು 40 ಕ್ಕಿಂತ ಹೆಚ್ಚು ಜನ ರೈತರು ಆತ್ಮ ಹತ್ಯೆಗೆ ಶರಣಾಗಿದ್ದಾರೆ ಎನ್ನುತ್ತಿವೆ ವರದಿಗಳು.

ಬಿಜೆಪಿ ಸರ್ಕಾರಕ್ಕೆ ನಿಜಕ್ಕೂ ಜನರ ಬಗೆಗೆ ಕಾಳಜಿ ಎಂಬುದು ಇದ್ದರೆ ಜನ ಚಳುವಳಿಗಳು ಆಗ್ರಹಿಸುತ್ತಿರುವಂತೆ ಈ ಕೆಳಕಂಡ ಅಂಶಗಳನ್ನು ಗಂಭೀರವಾಗಿ ಜಾರಿ ಮಾಡಬೇಕು.

- ಬರ ಪರಿಸ್ಥಿತಿ ನಿರ್ವಹಣೆಗೆ ಸರ್ವ ಪಕ್ಷಗಳ ಸಮಿತಿ ರಚನೆಯಾಗಬೇಕು.
- ಮೇವು – ಉಚಿತವಾಗಿ ಕೊಡಬೇಕು– ಗ್ರಾಮ ಪಂಚಾಯಿತಿ ಮೂಲಕ, ದನ ಕರುಗಳಿಗೆ ಕುಡಿಯುವ ನೀರು ಒದಗಿಸಬೇಕು.
- ರಾಜ್ಯ ಸರ್ಕಾರವೂ ಉದ್ಯೋಗ ಖಾತ್ರಿ ಯೋಜನೆಯನ್ನು – ಬರ ಪರಿಹಾರ ಕಾಮಗಾರಿಯ ಭಾಗವಾಗಿ ಜಾರಿ ಮಾಡಬೇಕು.
- ನ್ಯಾಯ ಬೆಲೆ ಅಂಗಡಿಗಳ ಮೂಲಕ – ಬಿ.ಪಿ.ಎಲ್/ಎ.ಪಿ.ಎಲ್ ವ್ಯತ್ಯಾಸವಿಲ್ಲದೆ ಅಗತ್ಯ ಆಹಾರ ಧಾನ್ಯ, ವಸ್ತುಗಳ ವಿತರಣೆ ಮಾಡಬೇಕು.
- ಕುಡಿಯುವ ನೀರು ಪೂರೈಕೆಗೆ ವ್ಯಾಪಕವಾದ ಕ್ರಮ ಕೈಗೊಳ್ಳ ಬೇಕು.
- ಸಾಲ ಮನ್ನಾ – ವಿಶೇಷವಾಗಿ ಖಾಸಗಿ ಲೇವಾದೇವಿಗಾರರಿಂದ ಪಡೆದುಕೊಳ್ಳಲಾದ ಸಾಲಗಳಿಂದ ರೈತರನ್ನು ಮುಕ್ತ ಮಾಡಬೇಕು.
- ಬರ ಇರುವುದರಿಂದ ಉದ್ಯೋಗ ಖಾತರಿ ಯೋಜನೆಯಲ್ಲಿ 200 ದಿನ ಕೆಲಸ ಒದಗಿಸಬೇಕು.
- ಬೆಳೆ ಹಾನಿಗೆ ಪರಿಹಾರ – ಎಕರೆಗ ಕನಿಷ್ಟ 10,000, ಒಣ ಬೇಸಾಯ – 5000.
- ಉದ್ಯೋಗ ಖಾತರಿ– ಪ್ರತಿದಿನ ಕೆಲಸ– ಮಿತಿ ಇರಬಾರದು.
- ಬರ ಪ್ರದೇಶದಲ್ಲಿ ಶಿಕ್ಷಣ ಶುಲ್ಕ ಮನ್ನಾ

ಇಂತಹ ಬೇಡಿಕೆಗಳನ್ನಿಟ್ಟು ಜನಪರ ಸಂಘಟನೆ



ಗಳು ಚಳುವಳಿ ನಡೆಸುತ್ತಿವೆ ಸರ್ವ ಪಕ್ಷಗಳ ಸಭೆಯಲ್ಲಿ ಸಿಪಿಐ(ಎಂ) ಪಕ್ಷ ಬಹುತೇಕ ಇದೇ ಆದ್ಯತೆಗಳ ಆಧಾರದಲ್ಲಿ ಮಾತನಾಡಿ ತುರ್ತು ಕ್ರಮಕ್ಕೆ ಆಗ್ರಹಿಸಿದೆ.

ಫಲಿತಾಂಶವಿಲ್ಲ :

ಜನರ ಅಗತ್ಯವೇನು ಎಂಬುದು ಬಜೆಪಿ ಸರ್ಕಾರಕ್ಕೆ ಎಂದೂ ಆದ್ಯತೆಯ ವಿಷಯವಲ್ಲ ಎಂಬುದು ಗೊತ್ತಿರುವ ವಿಚಾರವೇ. ಒಂದು ಲಕ್ಷ ಕೋಟಿ ರೂಪಾಯಿಗಳ ಬಜೆಟ್ ಎಂದು ಕೊಚ್ಚಿಕೊಳ್ಳಲಾದ ಬಜೆಟ್‌ನಲ್ಲಿ ಬರ ಪರಿಹಾರಕ್ಕೆ ನಗದಿಪಡಿದಿದ್ದು ಕೇವಲ 301 ಕೋಟಿ ರೂಪಾಯಿಗಳು. ಕೇವಲ ಕೈ ಬೆರಳೆಣಿಕೆಯಷ್ಟು ಸಂಖ್ಯೆಯ ಜಾತಿವಾದಿ ಮಠಗಳಿಗೆ 394 ಕೋಟಿ ರೂಪಾಯಿ ಕೊಟ್ಟ ಸರ್ಕಾರ ರಾಜ್ಯದ 123 ತಾಲ್ಲೂಕುಗಳನ್ನು ಆವರಿಸಿಕೊಂಡಿರುವ ಗಂಭೀರ ಬರ ಪರಿಸ್ಥಿತಿಯನ್ನು ಎದುರಿಸಲು ನೀಡಿರುವುದು ಅಕ್ಷರ ಶಹ ಪುಡಿಗಾಸು.

ವಿದೇಶಿ ಪ್ರವಾಸದ ಖಯಾಲಿ ವಿದೇಶಿ ಮದ್ಯದ ಅಮಲಿನ ನಡುವೆ ಬರದ ನೆನಪಾದರೂ ಎಲ್ಲಿ?

ಬಿಜೆಪಿ ಸರ್ಕಾರದ ಸಚಿವರು, ಶಾಸಕರುಗಳಿಗೆ ಬರದ ವಿಚಾರದಲ್ಲಿ ಗಾಂಭಿರ್ಯವಿಲ್ಲ. ಅವರಿಗೆ ತಮ್ಮ ವಿದೇಶ ಪ್ರವಾಸ, ವಿದೇಶಿ ಮದ್ಯದ ಚಿಂತೆಯೇ ಜಾಸ್ತಿ ಯಾಗಿದೆ.. ಇದು ಆಧಾರವಿಲ್ಲದ ಹಗುರ ಆರೋಪವೇನೂ ಅಲ್ಲ. ಬೇಕಾದರೆ ಈ ಮಾಹಿತಿಗಳನ್ನು ನೋಡಿ.

ರಾಜ್ಯದ ಸಚಿವರು ಶಾಸಕರುಗಳಿಗೆ ವಿದೇಶ ಪ್ರವಾಸದ ಅವಕಾಶವನ್ನು ಈಗಿರುವ ಒಂದು ಬಾರಿಗೆ ಬದಲಾಗಿ ಎರಡು ಬಾರಿಗೆ ಏರಿಸಲು ಮತ್ತು ಈ ಪ್ರಸಕ್ತ ಅವಧಿಯಲ್ಲಿ ಇನ್ನೂ ವಿದೇಶ ಪ್ರವಾಸದ ಅವಕಾಶ ಸಿಗದ ಶಾಸಕರುಗಳು ಅವಧಿ ಮುಗಿಯುವುದರೊಳಗಾಗಿ ಹೇಗಾದರೂ ಫಾರಿನ್‌ಗೆ ಹಾರುವ ಅವಕಾಶ ಗಿಟ್ಟಿಸಲು ಪರದಾಡುತ್ತಿದ್ದಾರೆ. ಇದರಲ್ಲಿ ಬಿಜೆಪಿಯವರು ಮುಂದೆ ಎಂದು ಬೇರೆ ಹೇಳ ಬೇಕಾಗಿಲ್ಲ. ಸು. 18 ಕೋಟಿ ವೆಚ್ಚದ ಈ ಪ್ರವಾಸದ ಕುರಿತು ಸರ್ಕಾರದ ಮುಂದೆ ಪ್ರಸ್ತಾವನೆ ಪರಿಗಣನೆಗೆ ಇದೆ. ಸಾರ್ವಜನಿಕರ ಪ್ರತಿರೋಧಕ್ಕೆ ಹೆದರಿ ಸದಾನಂದಗೌಡರು ಎರಡು ತಿಂಗಳು ವಿದೇಶ ಪ್ರವಾಸ ಇಲ್ಲ ಎಂದು ಹೇಳಿದ್ದಾರೆ.

ಇನ್ನೂ ಮೊನ್ನೆ ನಮ್ಮ ಡಾ. ಬಿ.ಎಸ್. ಯಡಿಯೂರಪ್ಪ ಅವರು ಬಿಜೆಪಿ ಶಾಸಕರುಗಳನ್ನು ಕರೆದುಕೊಂಡು 'ರೆಸಾರ್ಟ್ ಪ್ರವಾಸ' ಮಾಡಿದಾಗ ಏನು ನಡೆಯಿತು ನೆನಪಿಕೊಂಡರೆ ಸಾಕು. ಆಳುವ ಪಕದ್ದ ಸಚಿವರು, ಶಾಸಕರು ಬಜೆಟ್ ಅಧಿವೇಶನಕ್ಕೆ ಬರದೇ ರೇಸಾರ್ಟ್‌ನಲ್ಲಿ ಕೂರುತ್ತಾರೆ. ಬಿಜೆಪಿ ಸರ್ಕಾರದ ಅಬಕಾರಿ ಸಚಿವರಾದ ಸನ್ಮಾನ್ಯ

ಬಿಜೆಪಿ ದರ್ಬಾರ್

ಆರ್. ರಾಮಕೃಷ್ಣ

ರೇಣುಕಾಚಾರ್ಯ ಅವರ, ಕರ್ತವ್ಯ ಪ್ರಜ್ಞೆ ನೋಡಿ. ಶಾಸಕ ಸಂಗಾತಿಗಳಿಗೆ ಯಾವುದಕ್ಕೂ ಕೊರತೆ ಯಾಗಬಾರದು. ವಿದೇಶಿ ಮದ್ಯಕ್ಕೂ ಕೂಡ. ಅದು ಅಕ್ರಮವಾದರೂ ಸರಿಯೇ.

ಲೋಕಾಯುಕ್ತ ದಾಳಿಯಲ್ಲಿ ತಮ್ಮ ಅಬಕಾರಿ ಇಲಾಖೆಯ ಕಛೇರಿಯಲ್ಲಿ ಅಕ್ರಮ ವಿದೇಶಿ ಮದ್ಯ ಸಂಗ್ರಹ ಮಾಡಿಕೊಂಡಿರುವ ಅಪರಾಧದಲ್ಲಿ ಸಿಕ್ಕಿ ಬಿದ್ದ ಹಿರಿಯ ಅಧಿಕಾರಿ ಕೊಟ್ಟ ಮಾಹಿತಿಯಾದರೂ ಏನು ? ಸ್ವಯಂ ಅಬಕಾರಿ ಸಚಿವರ ಸೂಚನೆಯ ಮೇರೆಗೆ ರೆಸಾರ್ಟ್‌ಗಳಲ್ಲಿ ಉಳಿದಿದ್ದ ಬಿಜೆಪಿ ಶಾಸಕರು, ಸಚಿವರುಗಳಿಗೆ ಪೂರೈಸಲಿಕ್ಕಾಗಿಯೇ ಅದನ್ನು ಸಂಗ್ರಹಿಸಲಾಗಿತ್ತಂತೆ. ಆಹಾ ?! ಏನು ಬಿಜೆಪಿ ಶಾಸಕರ, ಸಚಿವರ ಜನಪರ ಕಾಳಜಿ ಜನರು ಬರದ ಬೇಗೆಯಲ್ಲಿ ಬೇಯುತ್ತಿರುವ ಈ ನಾಡಿನಲ್ಲಿ.

ಚಲನ ಚಿತ್ರ ಪ್ರಶಸ್ತಿಗಳು: ಭ್ರಷ್ಟಾಚಾರದ ಗಬ್ಬುವಾಸನೆ

ಚಲನ ಚಿತ್ರಗಳು ಪಡೆಯುವ ಪ್ರಶಸ್ತಿಗಳು ವಿವಾದಕ್ಕೀಡಾಗುವುದು ತೀರಾ ಹೊಸ ಸಮಾಚಾರವೇನಲ್ಲ. ಅದು ಹಲವಾರು ಬಾರಿ ಆಗುತ್ತದೆ. ಆದರೆ ರಾಜ್ಯದಲ್ಲಿ ಈ ಬಾರಿ ಎದ್ದಿರುವ ವಿವಾದವನ್ನು ವಿಶೇಷವಾಗಿ ಗಮನಿಸ ಬೇಕಿದೆ. 'ಬಳ್ಳಾರಿ ಗಣಿ ಮಾಫಿಯಾದ ಕರಾಳ ಮುಖಗಳನ್ನು ತೆರೆದಿಟ್ಟಿರುವ ಪುನಿತ್ ರಾಜ್ ರವರ ಅಭಿನಯದ 'ಪೃಥ್ವಿ' ಸಿನಿಮಾವನ್ನು ಬಿಟ್ಟು–ಬಡವರ ಭೂಮಿ, ಬದುಕನ್ನು ನುಂಗುವ ಅಭಿವೃದ್ಧಿ ಹೆಸರಿನ ನಿರ್ದಯ ಹೆದ್ದಾರಿ ವ್ಯವಹಾರದ ಕುರಿತ 'ಪುಟ್ಟಕ್ಕನ ಹೈ ವೇ ಸಿನಿಮಾ' ಬಿಟ್ಟು ಉಪೇಂದ್ರ ಅಭಿನಯದ ಯಾತಕ್ಕೂ ಬೇಡದ ಪಕ್ಕಾ ವ್ಯಾಪಾರಿ ಚಿತ್ರ 'ಸೂಪರ್' ಸಿನಿಮಾಗೆ ಉತ್ತಮ ಚಿತ್ರ ಎಂಬ ಪ್ರಶಸ್ತಿ ನೀಡಿರುವುದರ ಬಗೆಗೆ ವ್ಯಾಪಕ ಟೀಕೆಗಳು ವ್ಯಕ್ತವಾಗಿವೆ.

ಗಣಿ ಲೂಟಿಕೋರರೊಂದಿಗೆ ಬಿಜೆಪಿ ಸರ್ಕಾರದ ಶಾಮೀಲಾತಿ, ಲೂಟಿಕೋರರ ರಕ್ಷಣೆಯ ಪ್ರಯತ್ನಗಳೆಲ್ಲವೂ ಮತ್ತೆ ಸಾರ್ವಜನಿಕ ಚರ್ಚೆಯ ವಿಷಯವಾಗುತ್ತವೆ ಎಂಬ ಕಾರಣಕ್ಕೆ ಪೃಥ್ವಿ ಸಿನಿಮಾಗೆ, ಹಾಗೆಯೇ ನೈಸ್ ಕಂಪನಿಯ ಮುಖ್ಯಸ್ಥ ಖೇಣಿಯ ಮನಸ್ಸಿಗೆ ಯಾವ ರೀತಿಯ ನೋವು ಆಗಬಾರದು ಎಂಬ ಕಾರಣಕ್ಕೆ 'ಪುಟ್ಟಕ್ಕನ ಹೈವೇ' ಸಿನಿಮಾಗೆ ಪ್ರಶಸ್ತಿ ಸಿಗದಂತೆ ಮಾಡಲಾಗಿದೆ ಎಂಬ ಗಂಭೀರ ಆರೋಪಗಳು ಕೇಳಿ ಬಂದಿವೆ. ಮತ್ತು ಪ್ರತಿರೋಧ ಬರಬಾರದು ಎಂಬ ಕಾರಣಕ್ಕೆ –ಒಟ್ಟಾರೆ ಚಲನಚಿತ್ರಕ್ಕೆ ಪ್ರಶಸ್ತಿ ಸಿಗಬೇಕಾದ ಕಡೆ ನಟ, ನಟಿಯರಿಗೆ ಅಭಿನಯಕ್ಕೆ ಪ್ರಶಸ್ತಿ ನೀಡಿ ತೇಪೆ ಹಾಕಲು ಯತ್ನಿಸಲಾಗಿದೆ ಎಂದೂ ಹಲವು ಟೀಕೆಗಳು ವ್ಯಕ್ತವಾಗಿವೆ.

ಮತ್ತು ಉತ್ತಮ ಚಿತ್ರಗಳ ಲೆಕ್ಕದಲ್ಲಿ ಸಹಾಯ ಧನ ಕೊಡಿಸುವ ಹೆಸರಿನಲ್ಲಿ ಆಯ್ಕೆ ಸಮಿತಿ ಸದಸ್ಯರಿಗೆ ವ್ಯಾಪಕವಾಗಿ 'ಕಾಣಿಕೆ' ಸಲ್ಲಿಸಲಾಗಿದೆ ಎಂಬ ವಿಷಯಗಳೂ ಬಹಿರಂಗವಾಗಿ ವ್ಯಾಪಕ ಚರ್ಚೆಗೆ ಗುರಿಯಾಗಿವೆ.

ಬಿಜೆಪಿ ಸರ್ಕಾರದಲ್ಲಿ ಯಾವ ಇಲಾಖೆ, ಯಾವ ವಲಯ, ಯಾವ ವಿಭಾಗವೂ ಭ್ರಷ್ಟಾಚಾರ, ಹೊಲಸು ಅವ್ಯವಹಾರಗಳಿಂದ ಮುಕ್ತವಾಗಿಲ್ಲ ಎಂಬ ಟೀಕೆಗಳು ಸುಮ್ಮನೆ ರಾಜಕೀಯ ಕಾರಣಕ್ಕಾಗಿ ಮಾಡಿದವುಗಳಲ್ಲ. ಬಿಜೆಪಿ ಪಕ್ಷದ, ಬಿಜೆಪಿ ಸರ್ಕಾರದ ಅನೈತಿಕತೆಗೆ ಸರಿ ಸಾಟಿಯೇ ಇಲ್ಲ ಎಂಬುದು ಈ ಮೂಲಕ ಸಾಬೀತಾಗಿದೆ.

ಉದಾರವಾದಿ ಭಟ್ಟಂಗಿಗಳ ಆಲಾಪನೆಗಳು

ಪುಟ 8 ರಿಂದ

ಕ್ರಾಂತಿಕಾರಿ ಹೋರಾಟಗಳನ್ನು ಮುನ್ನಡೆಸುವ ಸಿಪಿಐ(ಎಂ)ನ ನಿರ್ಧಾರದ ಬಗ್ಗೆ ಹೇಗೆ ಅದಕ್ಕೆ ತನ್ನ ಕೋಪವನ್ನು ಮರೆಮಾಚಲಾಗುತ್ತಿಲ್ಲ ಎಂಬುದನ್ನು ಗಮನಿಸಿ.

ಸಿಪಿಐ(ಎಂ)ನ 20ನೇ ಮಹಾಧಿವೇಶನ ಸೋಶಲ್ ಡೆಮಾಕ್ರಸಿ ಎಂಬುದು ಸಾಮ್ರಾಜ್ಯಶಾಹಿ ಜಾಗತೀಕರಣವನ್ನು ಮತ್ತು ಅದರ ನವ-ಉದಾರವಾದಿ ಸೈದ್ಧಾಂತಿಕ ಬುನಾದಿಗಳನ್ನು ಸಮರ್ಥಿಸಲು ಹೆಣಗುವಂತದ್ದು ಎಂದು ನಿಸ್ಸಂಧಿಗ್ದವಾಗಿ ತಿರಸ್ಕರಿಸಿದೆ. ಸೋಶಲ್ ಡೆಮಾಕ್ರಸಿ ಎಂಬುದು "ಸರಕಾರದಲ್ಲಿರುವಾಗ ಆಳುವ ವರ್ಗಗಳ ಹಿತಾಸಕ್ತಿಗಳನ್ನು ಪ್ರತಿಪಾದಿಸುವ, ಮತ್ತು ಪ್ರತಿಪಕ್ಷವಾಗಿರುವಾಗ ಕಾರ್ಮಿಕ ವರ್ಗದ ಹಿತಾಸಕ್ತಿಗಳನ್ನು ಪ್ರತಿಪಾದಿಸುವ ಒಂದು ಸಿದ್ಧಾಂತ" ಎಂಬ ಮಾತು ಎರಡನೇ ಮಹಾಯುದ್ಧದ ನಂತರ ಪ್ರಖ್ಯಾತವಾಗಿತ್ತು. ಸಿಪಿಐ(ಎಂ) ಭಾರತದ ಕ್ರಾಂತಿಕಾರಿ ಆಂದೋಲನವನ್ನು ಮುಂದೊಯ್ಯಲು ಸದಾ ಎಲ್ಲ ಶೋಷಿತ ವರ್ಗಗಳನ್ನು ಭಾರತೀಯ ಜನತೆಯ ದಮನಕ್ಕೊಳಗಾದ ವಿಭಾಗಗಳ ಹಿತಾಸಕ್ತಿಗಳನ್ನು ಪ್ರತಿಪಾದಿಸುತ್ತದೆ.

ಭಾರತೀಯ ಸನ್ನಿವೇಶದಲ್ಲಿ ಸಿಪಿಐ(ಎಂ) ಈ ಪ್ರಯತ್ನಗಳಲ್ಲಿ ಯಶಸ್ವಿಯಾಗಬಾರದು ಎಂಬ ತಮ್ಮ ನಿರೀಕ್ಷೆ ಮತ್ತು ಆಕಾಂಕ್ಷೆಗಳನ್ನು ನವ-ಉದಾರವಾದದ ಭಂಡ ಪ್ರತಿಪಾದಕರು ಸೈದ್ಧಾಂತಿಕವಾಗಿ ಬಲಪಡಿಸಿಕೊಳ್ಳುತ್ತಿರುವುದು ಈ ಕೆಲವು ಸಂಪಾದಕೀಯ ಟಿಪ್ಪಣಿಗಳಲ್ಲಿ ಬಿಂಬಿತವಾಗಿವೆ. ದಿ ಇಂಡಿಯನ್ ಎಕ್ಸ್‌ಪ್ರೆಸ್ "ಸಿಪಿಐ(ಎಂ) ಮಟ್ಟಿಗೆ ಜಾತಿ, ಕೋಮುವಾದ ಮತ್ತು ಐಡೆಂಟಿಟಿ ರಾಜಕೀಯ ವರ್ಗ ಹೋರಾಟಕ್ಕೆ ಹೊಂದಿಕೊಳ್ಳುವುದಿಲ್ಲ, ಆದ್ದರಿಂದ ಅದನ್ನು ದೂರವಿಡಬೇಕು" ಎನ್ನುತ್ತದೆ. ಅದೇ ರಾಗ ಹಾಡುವ ದಿ ಏಶ್ಯನ್ ಏಜ್, "ಕಮ್ಯುನಿಸ್ಟರು ಎಲ್ಲೆಡೆಗಳಲ್ಲಿ ಹಳಸಲಾದ ಸೋವಿಯೆತ್ ಮಾದರಿ ತಮ್ಮದು ಎಂದು ಹೇಳಿಕೊಳ್ಳುವ ಬದಲು ತಮ್ಮ ಅಂಗ ಸಂಘಟನೆಗಳನ್ನು ಪ್ರಜಾಪ್ರಭುತ್ವದ ನಿಯಮಗಳ ಪ್ರಕಾರ ಆಟವಾಡುವ ಸಂಘಟನೆಗಳಾಗಿ ಪರಿವರ್ತಿಸುತ್ತಿದ್ದಾರೆ" ಎಂದಿದೆ.

ಪಾಠ ಹೇಳುವ ಈ ಮಂದಿ

ಕಳೆದ ವಾರ ಇದೇ ಅಂಕಣದಲ್ಲಿ ಜಾತಿ, ಬುಡಕಟ್ಟು, ಲಿಂಗದಂತಹ ಭಾರತದ ಸಾಮಾಜಿಕ ವಾಸ್ತವತೆಗಳ ಮತ್ತು ಇತರ ಸಾಮಾಜಿಕ ದಮನದ ಅಭಿವ್ಯಕ್ತಿಗಳ ಪ್ರಶ್ನೆಗಳನ್ನು ಹಾಗೂ ಆಧುನಿಕೋತ್ತರವಾದ ಪ್ರಚುರಗೊಳಿಸಿರುವ ಐಡೆಂಟಿಟಿ ರಾಜಕೀಯದ ಸೈದ್ಧಾಂತಿಕ ದಾಳಿಯನ್ನು ಎದುರಿಸುವ ಕುರಿತಂತೆ ಸಿಪಿಐ(ಎಂ)ನ 20ನೇ ಮಹಾಧಿವೇಶನದ ನಿರ್ಣಯಗಳ ಬಗ್ಗೆ ಹೇಳಿದ್ದೆವು. ಅದೇ ರೀತಿ ದೇಶದಲ್ಲಿ ಕ್ರಾಂತಿಕಾರಿ ಆಂದೋಲನವನ್ನು ಮುಂದೊಯ್ಯಲು ಸಂಸದೀಯ ಮತ್ತು ಸಂಸದೀಯೇತರ ಸಾಧನಗಳನ್ನು ಬಲಪಡಿಸುವ ಸಿಪಿಐ(ಎಂ)ನ ದೃಢ ನಿರ್ಧಾರವನ್ನು ಎತ್ತಿ ತೋರಿದ್ದೆವು. ಭಾರತೀಯ ಸನ್ನಿವೇಶದಲ್ಲಿ ನಮಗೆ ಪ್ರಜಾಪ್ರಭುತ್ವವನ್ನು ಕಲಿಸ ಬಯಸುವ ಮಂದಿಗಳು, ಬಂಡವಾಳಶಾಹಿ-ಭೂಮಾಲಕ ವರ್ಗಗಳು ಆಳುತ್ತಿರುವ ಒಂದು ದೇಶದಲ್ಲಿ ರಾಜ್ಯ ವಿಧಾನ ಸಭೆಗಳ ಚುನಾವಣೆಗಳಲ್ಲಿ ಕಮ್ಯುನಿಸ್ಟರು ಭಾಗವಹಿಸಬಲ್ಲರು ಮತ್ತು ಗೆಲ್ಲಬಲ್ಲರು ಎಂದು ಜಗತ್ತಿಗೆ ಮೊತ್ತ ಮೊದಲ ಬಾರಿಗೆ ತೋರಿಸಿಕೊಟ್ಟವರು ಭಾರತೀಯ ಕಮ್ಯುನಿಸ್ಟರೇ ಎಂಬುದನ್ನು ನೆನಪಿಸಿಕೊಳ್ಳುವುದು ಒಳ್ಳೆಯದು. ಪಶ್ಚಿಮ ಬಂಗಾಲದಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗ ಸರಕಾರವನ್ನು ಬಿಟ್ಟರೆ, ಭಾರತದಲ್ಲಿ ಬೇರಾವ ಪಕ್ಷವೂ ಸತತ ಏಳು ಬಾರಿ ರಾಜ್ಯ ವಿಧಾನಸಭಾ ಚುನಾವಣೆಗಳಲ್ಲಿ ಗೆದ್ದ ದಾಖಲೆಯನ್ನು ಹೊಂದಿಲ್ಲ. ಪ್ರಸಕ್ತ ಪೀಳಿಗೆಯ ಈ ಗೌರವಾನ್ವಿತ ಸಂಪಾದಕರುಗಳು ಈಗ ಅನುಭವಿಸುತ್ತಿರುವ ವಾಕ್ ಸ್ವಾತಂತ್ರ್ಯ ಆಂತರಿಕ ತುರ್ತು ಪರಿಸ್ಥಿತಿಯ ವಿರುದ್ಧ ಭಾರತೀಯ ಜನತೆಯ ಹೋರಾಟ ಮತ್ತು 1977ರಲ್ಲಿ ಪ್ರಜಾಪ್ರಭುತ್ವವನ್ನು ಮತ್ತೆ ಸ್ಥಾಪಿಸಿದುದರ ಫಲ ಎಂಬುದನ್ನು ಕೂಡ ನೆನಪಿಸಿಕೊಳ್ಳುವುದು ಒಳ್ಳೆಯದು. ಸಿಪಿಐ(ಎಂ) ಮಹತ್ವದ ಪಾತ್ರ ವಹಿಸಿದ ಒಂದು ಹೋರಾಟ ಇದು.

ವಾಸ್ತವ ಸಂಗತಿಯೆಂದರೆ, ಪ್ರಸಕ್ತ ಭಾರತೀಯ ವಾಸ್ತವತೆಯ ಮೂರ್ತ ಪರಿಸ್ಥಿತಿಗಳಲ್ಲಿ ಭಾರತೀಯ ಜನತೆಯ ಕ್ರಾಂತಿಕಾರಿ ಹೋರಾಟಗಳನ್ನು ಬಲಪಡಿಸುವ ಬಗ್ಗೆ 20 ನೇ ಮಹಾಧಿವೇಶನ ಗಮನ ಕೇಂದ್ರೀಕರಿಸಿತು. ಈ ಪ್ರಶ್ನೆಗಳ ಮೇಲೆ ಕಳೆದ ಸಂಚಿಕೆಯಲ್ಲಿ ಹೇಳಿದುದನ್ನು ಇಲ್ಲಿ ಪುನರಾವರ್ತಿಸ ಬಯಸುವುದಿಲ್ಲ.

ನಮ್ಮ ನಿಂದಕರಿಗೆ ನಾವಿಲ್ಲಿ ಬಹಳ ಹಿಂದೆ, 1964ರಲ್ಲಿ, ಇಎಂಎಸ್ ನಂಬೂದರಿಪಾಡ್ ಸಿಪಿಐ(ಎಂ)ನ ಸ್ಥಾಪನಾ ಮಹಾಧಿವೇಶನದಲ್ಲಿ ಹೇಳಿದ್ದುದನ್ನು ನೆನಪಿಸ ಬಯಸುತ್ತೇವೆ. ಜಗತ್ತಿನ ಹಲವು ಕಮ್ಯುನಿಸ್ಟ್ ಪಕ್ಷಗಳ ಪ್ರತಿನಿಧಿಗಳು ಸಿಪಿಐನ ಮಹಾಧಿವೇಶನದಲ್ಲಿ ಭಾಗವಹಿಸಲು ಬಂದರು, ಆದರೆ ಸಿಪಿಐ(ಎಂ)ನ ಮಹಾಧಿವೇಶನಕ್ಕೆ ಯಾರೂ ಬರಲಿಲ್ಲ. ಒಬ್ಬ ಪತ್ರಕರ್ತ ಈ ಸಂಗತಿಯತ್ತ ಗಮನ ಸೆಳೆಯುತ್ತಾ ಉದ್ಧಟತನದಿಂದ ಇಎಂಎಸ್ ರವರನ್ನು ಕೇಳಿದ: "ಸಿಪಿಐ(ಎಂ) ಜತೆಗೆ ಯಾರಿದ್ದಾರೆ?" ಇಎಂಎಸ್ ಅದಕ್ಕೆ ಕೊಟ್ಟ ಪ್ರಖ್ಯಾತ ಉತ್ತರ- "ಭಾರತೀಯ ಜನತೆ".

ಸಿಪಿಐ(ಎಂ)ನ 20ನೇ ಮಹಾಧಿವೇಶನ ಭಾರತೀಯ ಜನತೆಯೊಂದಿಗೆ ಈ ಕೊಂಡಿಗಳನ್ನು ಬಲಪಡಿಸುವ, ಈ ಮೂಲಕ ಜನತಾ ಪ್ರಜಾಪ್ರಭುತ್ವಕ್ಕಾಗಿ ಮತ್ತು ಅದರ ಆಧಾರದಲ್ಲಿ ಭಾರತೀಯ ಸನ್ನಿವೇಶದಲ್ಲಿ ಸಮಾಜವಾದದ ಸ್ಥಾಪನೆಗಾಗಿ ಕ್ರಾಂತಿಕಾರಿ ಆಂದೋಲನವನ್ನು ಮುಂದೊಯ್ಯುವ ತನ್ನ ನಿರ್ಧಾರವನ್ನು ದ್ವಿಗುಣಗೊಳಿಸಿದೆ.

ಶೋಷಣೆಮುಕ್ತ .....

ಪುಟ 7 ರಿಂದ

ಬಲಪಡಿಸುವ ಹೊಣೆಯನ್ನು ಈ ವರ್ಷದ ಮೇ ದಿನ ನಮಗೆ ನೆನಪಿಸುತ್ತದೆ.

ಹೋರಾಟನಿರತ ಕಾರ್ಮಿಕರನ್ನು ನಿರ್ದಯವಾಗಿ ದಂಡಿಸುವ, ಅವರ ಮೇಲೆ ಆಕ್ರಮಣ ಎಸಗುವುದು ಮಾತ್ರವೇ ಅಲ್ಲದೆ

ಅವರನ್ನು ಕೊಲ್ಲುವ ಪ್ರವೃತ್ತಿ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಪ್ರಬಲವಾದ ಸೌಹಾರ್ದ ಕಾರ್ಯಾಚರಣೆಗಳನ್ನು ರೂಪಿಸುವುದು ಕೂಡ ತುಂಬಾ ಅಗತ್ಯವಾಗಿದೆ. ಕಾರ್ಮಿಕ ವರ್ಗದ ಜೀವನೋಪಾಯದ ಬಗ್ಗೆ ಆಳುವ ವರ್ಗಗಳು ಸಂವೇದನೆ ಕಳೆದುಕೊಳ್ಳುತ್ತಿರುವ ಈ ಕಾಲಘಟ್ಟದಲ್ಲಿ ಇದು ತೀರಾ ಅನಿವಾರ್ಯ.

ವರ್ಗ ಸಂಘರ್ಷಗಳನ್ನು ತೀವ್ರಗೊಳಿಸುವುದು ಶೋಷಣೆಮುಕ್ತ ಸಮಾಜ ರಚನೆಗಾಗಿ ಬಲಿಷ್ಟ ಸೌಹಾರ್ದ ಕಾರ್ಯಾಚರಣೆಗಳನ್ನು ರೂಪಿಸುವುದು ಈ ಬಾರಿಯ ಮೇ ದಿನದ ಸಾರವಾಗಿದೆ.

"ಒಂದೇ ರೀತಿಯ ಆಕ್ರಮಣಗಳನ್ನು ಎದುರಿಸುವ, ಒಂದೇ ರೀತಿಯ ವೈರಿಗಳಿರುವ ಹಾಗೂ ಒಂದೇ ರೀತಿಯ ಹೋರಾಟದ ಪರಿಕಲ್ಪನೆಯಿರುವ ಅಂತಾರಾಷ್ಟ್ರೀಯ ಕಾರ್ಮಿಕ ವರ್ಗ ಸಮನ್ವಯದಿಂದ ಕಾರ್ಯಾಚರಣೆ ನಡೆಸುವುದನ್ನು ಸಂಘಟನೆಗೆ ಖಾತರಿಪಡಿಸುವ ಪರಿಸ್ಥಿತಿಗಳನ್ನು ನಿರ್ಮಿಸಬೇಕು" ಎಂದು ವರ್ಗಧಾರಿತ ಏಕೈಕ ಅಂತಾರಾಷ್ಟ್ರೀಯ ಸಂಘಟನೆಯಾದ ಡಬ್ಲ್ಯು.ಎಫ್.ಟಿ.ಯು. ಕರೆ ನೀಡಿದೆ.

ಈ ಮೇ ದಿನದಂದು ಬೀದಿಗಿಳಿಯುವಾಗ ಈ ಎಲ್ಲ ಮುಖ್ಯ ಕಾರ್ಯಭಾರಗಳನ್ನು ನಮ್ಮ ಮನಸ್ಸಿನಲ್ಲಿಟ್ಟುಕೊಳ್ಳೋಣ ಹಾಗೂ ಅದನ್ನು ಮುಂದಿನ ದಿನಗಳಲ್ಲೂ ಮುಂದುವರಿಸೋಣ. ಇವೆಲ್ಲವೂ ಶೋಷಣೆ ವಿರುದ್ಧದ ಹೋರಾಟಗಳನ್ನು ತೀಕ್ಷ್ಣಗೊಳಿಸಲು ಪ್ರೇರೇಪಣೆ ಆಗಲೆಂದು ಆಶಿಸೋಣ.

ಕನ್ನಡಕ್ಕೆ: ವಿಶ್ವ ಕುಂದಾಪುರ

ಮಹಾಜನೋತ್ಸವ....

ಪುಟ 9 ರಿಂದ

ಸಮಾಗಮವು ಅಲ್ಲದೆ ಕಾಶ್ಮೀರದಿಂದ ಹಿಡಿದು ಅಂಡಮಾನ್ ದೀಪಗಳಿಂದಲೂ ಪ್ರತಿನಿಧಿಗಳ ಆಗಮನವು ಕೇರಳದ ಸಾಧಿರಾರು ಪಕ್ಷದ ಸದಸ್ಯರು, ಹಿತೈಷಿಗಳು ಹಾಗೂ ಸಾರ್ವಜನಿಕರನ್ನು ತುಂಬಾ ಆಕರ್ಷಿಸಿತ್ತು. ಹೀಗಾಗಿಯೇ ಮಕ್ಕಳಾದಿಯಾಗಿ ಇಡೀ ಕುಟುಂಬಗಳೇ ಸಭಾಂಗಣದ ಹೊರಗಡೆ ಗಂಟೆ ಗಟ್ಟಲೇ ಖುಷಿಯಿಂದ ಕಾಯುತ್ತಿದ್ದರು. ಪ್ರತಿನಿಧಿಗಳು ತಮ್ಮ ನೆಚ್ಚಿನ ನಾಯಕರು ಒಳಬರುವಾಗ/ಹೊರಹೋಗುವಾಗ ಅವರ ಸ್ಫೂರ್ತಿ ಮತ್ತಷ್ಟು ಹಿಮ್ಮಟಿಗೊಂಡು ಘೋಷಣೆಗಳಾಗಿ ಪರಿವರ್ತಿತವಾಗುತ್ತಿತ್ತು.

ಆಕರ್ಷಕ ಪಥ ಸಂಚಲನಾ ಬಹಿರಂಗ ರ್‍ಯಾಲಿ: ಏಪ್ರಿಲ್ 9 ರಂದು ಕಲ್ಲಿಕೋಟೆಯ ನಾಲ್ಕು ದಿಕ್ಕುಗಳಿಂದ ಆರಂಭವಾದ 25 ಸಾವಿರ ಕೆಂಪು ವಸ್ತ್ರಧಾರಿ ಸ್ವಯಂ ಸೇವಕರ ಪಥ ಸಂಚಲನವು ಕಲ್ಲಿಕೋಟೆ ನಗರದಲ್ಲಿ ಪ್ರವೇಶ ಮಾಡಿದ ಲಕ್ಷಾಂತರ ಜನರನ್ನು ಹಾಗೂ ಪ್ರತಿನಿಧಿಗಳನ್ನು ಸ್ಫೂರ್ತಿಯ ಸಾಗರದಲ್ಲಿ ತೇಲಾಡಿಸಿತು. ಆ ಪಥ ಸಂಚಲನವನ್ನು ರಸ್ತೆಯ ಇಕ್ಕೆಲ್ಲಗಳಲ್ಲಿ ಜನರು ಗೋಡೆಯಂತೆ ಮಕ್ಕಳಾದಿಯಾಗಿ ನಿಂತು ಸ್ವಾಗತಿಸಿದ ರೀತಿಯಂತೂ ಅವಿಸ್ಮರಣೀಯ. ಇನ್ನೂ ಕಲ್ಲಿಕೋಟೆಯ ಕಡಲ ಕಿನಾರೆಯಲ್ಲಿ ಬಹಿರಂಗ ಅಧಿವೇಶನಕ್ಕಾಗಿ ಬೃಹತ್ ವಿಶಾಲ ವೇದಿಕೆ ತಲೆಎತ್ತಿತ್ತು. ಕಡಲ ತೀರದುದ್ದಕ್ಕೂ ಸುಮಾರು ಐದು ಲಕ್ಷಕ್ಕಿಂತ ಹೆಚ್ಚಿನ ದುಡಿಯುವ ಜನರು ಪಾಲ್ಗೊಂಡು ಸಾಕ್ಷಿಯಾದರು.


ಎಂದೂ ಮರೆಯದ ಆತಿಥ್ಯ: ಕಮ್ಯೂನಿಷ್ಟ್ ಪಕ್ಷದ ಇತಿಹಾಸದಲ್ಲಿ ಮಹಾಧಿವೇಶನವೆಂಬುದು ಅದು ಪಕ್ಷದ ಅತ್ಯುನ್ನತ ಘಟ್ಟ. ಹಾಗಾಗಿ ಅಂತಹ ಮಹಾಧಿವೇಶನದಲ್ಲಿ ಭಾಗವಹಿಸುವ ಪ್ರತಿನಿಧಿಗಳು ಎಂದರೆ ಅಪಾರವಾದ ಚಳುವಳಿ ಬೆಳೆಸಿದ, ಮುನ್ನಡೆಸಿದ ಮತ್ತು ಅದಕ್ಕಾಗಿ ಅಪಾರ ಕಷ್ಟಗಳನ್ನು ಅನುಭವಿಸಿದ ತ್ಯಾಗ ಜೀವಿಗಳ ಸಂಗಮ. ಅದು ನಿಜವೂ ಹೌದು. ಅದರಲ್ಲೂ ಮುಕ್ಕಾಲು ಶತಮಾನ ಆ ವಿಶಿಷ್ಟ ಬಲಿದಾನ ಮತ್ತು ಚಳುವಳಿಗಳ ಎರಕದಲ್ಲೇ ಬೆಳೆದು ಬಂದ ಕೇರಳದ ಸಂಗಾತಿಗಳು ಮತ್ತು ಅಲ್ಲಿನ ಪಕ್ಷ ಮಹಾಧಿವೇಶನಲ್ಲಿ ಭಾಗವಹಿಸಿದ್ದ ಪ್ರತಿಯೊಬ್ಬ ಸಂಗಾತಿಗಳ ಬಗ್ಗೆ ವೈಯಕ್ತಿಕ ಆಸಕ್ತಿ ವಹಿಸಿ ಅವರ ಬೇಕು ಬೇಡಗಳನ್ನು ಎಲ್ಲಾ ರೀತಿಯಿಂದಲೂ ನಿಭಾಹಿಸಿದ ರೀತಿ.. ಅದು ಆಹಾರದ ಪೂರೈಕೆಯ ವಿಚಾರವೇ ಇರಲಿ, ಆರೋಗ್ಯದ ಸಮಸ್ಯೆ ಇರಲಿ ಅಥವಾ ವಸತಿ ಸೌಕರ್ಯವೇ ಇರಲಿ ಯಾವುದೇ ರೀತಿಯಿಂದಲೂ ಒಂದಿಷ್ಟು ಸಮಸ್ಯೆಯಾಗದಂತೆ ಹಗಲು ರಾತ್ರಿಗಳೆನ್ನದೆ ದುಡಿದು ಎಲ್ಲರ ಪ್ರೀತಿಗೆ ಪಾತ್ರರಾದ ಅವರಿಗೆ ಕೆಂಪು ನಮನಗಳು. ಮಹಾಧಿವೇಶನಲ್ಲಿ ಭಾಗವಹಿದ್ದ ಸುಮಾರು 800 ಕ್ಕಿಂತ ಹೆಚ್ಚಿನ ಪ್ರತಿನಿಧಿಗಳನ್ನು ನಗರದ ಸುಮಾರು 21 ಹೊಟೇಲ್‌ಗಳಲ್ಲಿ ಉಳಿಸಲಾಗಿತ್ತು. ಮತ್ತು ಅವರ ಓಡಾಟಕ್ಕೆ ಅಗತ್ಯವಿದ್ದ ಸುಮಾರು 50 ಕ್ಕಿಂತ ಹೆಚ್ಚಿನ ವಾಹನಗಳನ್ನು ಪಕ್ಷದ ಹಿತೈಷಿಗಳೇ ಒದಗಿಸಿದ್ದರು.

ವಿದೇಶಿ ಪ್ರತಿನಿಧಿಗಳಿಲ್ಲದ ಅಧೀವೇಶನ: ಸಾಮಾನ್ಯವಾಗಿ ಈ ಹಿಂದೆ ಒಂದು ಅಧಿವೇಶನವನ್ನು ಹೂರತು ಪಡಿಸಿ ಉಳಿದೆಲ್ಲಾ ಪಕ್ಷದ ಅಧಿವೇಶನಗಳಲ್ಲಿ ವಿದೇಶಿ ಪ್ರತಿನಿಧಿಗಳು ಹಾಜರಿರುತ್ತಿದ್ದರು. ಈ ಬಾರಿ ಅವರಿಂದ ಶುಭಾಶಯಗಳನ್ನು ಸ್ವೀಕರಿಸಿತ್ತು.

ಹೀಗೆ... ಆ ಮಹಾಧಿವೇಶನದ ಬಗ್ಗೆ ಬರೆಯುತ್ತಾ ಕೂತರೆ ಅದೊಂದು ಚರಿತ್ರೆಯೇ ಸರಿ. ಹಾಗಾಗಿ ನಾವೆಲ್ಲಾ ಆ ಮಹಾಧಿವೇಶನ ನೀಡಿದ ಸ್ಫೂರ್ತಿ ಮತ್ತು ಕರೆಗಳನ್ನು ಜಾರಿಗೊಳಿಸಬೇಕಿದೆ. **ಸ್ವತಂತ್ರವಾದ ಹಾಗೂ ಐಕ್ಯ ವಿಮೋಚನಾ ಜನತೆಯ ಚಳುವಳಿಯನ್ನು ಬೆಳೆಸಿ** ಭಾರತ ಜನತೆಯನ್ನು ಅವರ ಸಂಕಷ್ಟಗಳಿಂದ ವಿಮೋಚನಾಗೊಳಿಸುವ ದಾರಿಯತ್ತ ಮುನ್ನಡೆಯೋಣ.

ಶಿಕ್ಷಣದ ಹಕ್ಕು: ಬೆನ್ನು ತಟ್ಟಿಕೊಂಡರೆ ಹೊಣೆ ತಪ್ಪದು

ಭಾರತದ ಸಂಸತ್ತು ಅಂಗೀಕರಿಸಿದ 'ಶಿಕ್ಷಣದ ಹಕ್ಕು ಕಾನೂನು' ಸಂವಿಧಾನಬಾಹಿರ, ಅದು ತಮ್ಮ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸಿದೆ ಎಂದು ಖಾಸಗಿ ಅನುದಾನರಹಿತ ಶಾಲಾ ಆಡಳಿತಗಳು ಸಲ್ಲಿಸಿದ್ದ ದಾವೆಯನ್ನು ಭಾರತದ ಸರ್ವೋಚ್ಚ ನ್ಯಾಯಾಲಯ ತಳ್ಳಿ ಹಾಕಿ ಈ ಕಾನೂನು ಸಂವಿಧಾನಬದ್ಧ ಎಂದು ತೀರ್ಪಿತ್ತಿದೆ, ಆದ್ದರಿಂದ ಈ ಶಾಲಾ ವರ್ಷದಿಂದ ಅನುದಾನರಹಿತ ಖಾಸಗೀ ಶಾಲೆಗಳೂ ಈ ಕಾನೂನಿನ ಪ್ರಕಾರ 25 ಶೇಕಡಾದಷ್ಟು ಸೀಟುಗಳನ್ನು ಬಡವಿಭಾಗಗಳಿಂದ ಬರುವ ವಿದ್ಯಾರ್ಥಿಗಳಿಗೆ ಶುಲ್ಕರಹಿತವಾಗಿ ಮೀಸಲಿಡಬೇಕು ಎಂದು ಹೇಳಿದೆ.



ಕೃಪೆ: ದಿ. ಹಿಂದೂ

ಇದು ಸ್ವಾಗತಾರ್ಹ ತೀರ್ಪು ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಯುಪಿಎ-2 ಸರಕಾರದ ಮಾನವ ಸಂಪನ್ಮೂಲ ಮಂತ್ರಿಗಳು ತಮ್ಮ ಸರಕಾರ ಒಂದು ಮಹಾ 'ಸಾಮಾಜಿಕ ಇಂಜಿನಿಯರಿಂಗ್' ಮೂಲಕ 'ಸಾಮಾಜಿಕ ಕ್ರಾಂತಿ' ತಂದಿದೆ ಎಂದು ಬೆನ್ನು ತಟ್ಟಿಕೊಳ್ಳುವಷ್ಟು ದೊಡ್ಡ ಸಾಧನೆಯೇನೂ ಅಲ್ಲ ಎಂದು ಶಿಕ್ಷಣ ಕ್ಷೇತ್ರದ ಪರಿಣಿತರು ಅಭಿಪ್ರಾಯ ಪಟ್ಟಿದ್ದಾರೆ. ವಾಸ್ತವವಾಗಿ ಈ ತೀರ್ಪಿನ ನಂತರ ನಡೆದಿರುವ ಚರ್ಚೆ ನಮ್ಮ ದೇಶ ಸ್ವಾತಂತ್ರ್ಯಾನಂತರ ಅಂಗೀಕರಿಸಿದ ಗುರಿಗಳಿಗಿಂತ ಎಷ್ಟು ದೂರ ಸರಿದಿದೆ, ನವ-ಉದಾರವಾದಿ ಧೋರಣೆಗಳು ಬಡವರು ಮತ್ತು ಜನಸಾಮಾನ್ಯರ ಪ್ರಶ್ನೆಗಳು ಬಂದಾಗ ನಮ್ಮ ಆಳರಸರನ್ನು, ಮತ್ತು ಇತರರನ್ನು ಕೂಡ ಎಷ್ಟು ಅಲ್ಪತೃಪ್ತರಾಗಿಸಿವೆ ಎಂಬ ಶೋಚನೀಯ ಪರಿಸ್ಥಿತಿಯನ್ನು ಮತ್ತೊಮ್ಮೆ ಎತ್ತಿ ತೋರಿಸಿದೆ ಎನ್ನುತ್ತಾರೆ ಈ ಪರಿಣಿತರು.

ಯುಪಿಎ-2 ಸರಕಾರದ ಈ ಕಾನೂನು ಸಾಮಾಜಿಕ ಅಂತಸ್ತುಗಳ ಬೇಧ-ಭಾವವಿಲ್ಲದ ಒಂದು ನಿಜವಾದ 'ಸಾಮಾನ್ಯ ಶಾಲಾ ವ್ಯವಸ್ಥೆ'ಯನ್ನು ವಿಧಿಸಿದ್ದರೆ, ಖಾಸಗಿ ಶಾಲೆಗಳು ತಮ್ಮ ನೆರೆಹೊರೆಯ ಯಾವುದೇ ಮಗುವಿಗೆ ಮುಕ್ತಟೆ ಶಿಕ್ಷಣವನ್ನು ಸರಕಾರದಿಂದ ಯಾವುದೇ ಮರುಪಾವತಿ ಪಡೆಯದೆ ನೀಡಬೇಕೆಂದು ಹೇಳಿದ್ದರೆ, ಅಂತಹ ಒಂದು ಕಾನೂನನ್ನು ಸುಪ್ರಿಂ ಕೋರ್ಟ್ ಎತ್ತಿ ಹಿಡಿದಿದ್ದರೆ ಅದು ನಿಜವಾಗಿಯೂ ಅಪಾರ ಸಂತೋಷದ ಸಂಗತಿಯಾಗಿರುತ್ತಿತ್ತು ಎಂದು ಒಬ್ಬ ಪರಿಣಿತರು ಅಭಿಪ್ರಾಯ ಪಟ್ಟಿದ್ದಾರೆ. ಏಕೆಂದರೆ ಅದು ದೇಶ ಸ್ವತಂತ್ರಗೊಂಡಾಗ ಹೊಂದಿದ್ದ, ಇದುವರೆಗೆ ಈಡೇರದ ಒಂದು ಪ್ರಮುಖ ಆಶಯ. ಆದರೆ ಆರು ದಶಕಗಳ ನಂತರ ತಂದ ಶಿಕ್ಷಣದ ಹಕ್ಕು ಕಾನೂನಿನಲ್ಲಿ ಇಂತಹ ಅಂಶಗಳನ್ನು ಒಳಗೊಳ್ಳುವ ಬಗ್ಗೆ ಯುಪಿಎ-2 ಸರಕಾರಕ್ಕೆ ಯಾವ ಒಲವೂ ಕಂಡು ಬಂದಿರಲಿಲ್ಲ. ಅಂತಹ ಸೂಚನೆಗಳನ್ನೆಲ್ಲ ತಳ್ಳಿ ಹಾಕಲಾಗಿತ್ತು. ಈಗ ಖಾಸಗೀ ಶಾಲೆಗಳು 25ಶೇ. ಸೀಟುಗಳನ್ನು ಬಡವಿಭಾಗಗಳಿಗೆ ಮೀಸಲಿಡಬೇಕೆಂಬ ಒಂದು ಸಣ್ಣ ಸವಲತ್ತನ್ನು ಒಪ್ಪಿಕೊಳ್ಳಲು ಕೂಡ ನ್ಯಾಯಾಲಯದ ಮೆಟ್ಟಲೇರಿ ಒಂದು ವರ್ಷ ಕಾಯಬೇಕಾಗಿ ಬಂದಿರುವುದು ಬೆನ್ನು ತಟ್ಟಿಕೊಳ್ಳುವ ಪರಿಸ್ಥಿತಿಯಂತೂ ಅಲ್ಲ.

ಇದು ಒಂದು ಸಣ್ಣ ಸವಲತ್ತು ಎಂದು ಹೇಳುವುದಕ್ಕೆ ಕಾರಣವಿದೆ. ಎಲ್ಲ ರಂಗಗಳಲ್ಲೂ ಖಾಸಗೀಕರಣದ ಮೇಲೆ ವಿಪರೀತ ಒತ್ತು ನೀಡಿದ್ದರೂ, ಶಿಕ್ಷಣದಲ್ಲಿ ಖಾಸಗೀಕರಣಕ್ಕೆ ಆಳುವ ಮಂದಿ ಬಹಳಷ್ಟು ಪ್ರೋತ್ಸಾಹ ನೀಡಿದ್ದರೂ ಈಗಲೂ ಖಾಸಗಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವ ಮಕ್ಕಳ ಸಂಖ್ಯೆ ಹೆಚ್ಚೆಂದರೆ 25ಶೇ. ಇವರಲ್ಲಿ 25ಶೇ. ಎಂದರೆ ಸುಮಾರು 5ಶೇ.ದಷ್ಟು ಮಕ್ಕಳಿಗೆ ಮಾತ್ರ ಈ ತೀರ್ಪಿನಿಂದ ಏನಾದರೂ ಪ್ರಯೋಜನವಾಗಬಹುದು. ಜಾತಿ ವ್ಯವಸ್ಥೆ ಉಂಟು ಮಾಡಿರುವ, ನವ-ಉದಾರವಾದ ಗಟ್ಟಿಗೊಳಿಸಿರುವ ಅಸಮಾನತೆಯ ವಾತಾವರಣದಲ್ಲಿ ಈ 5ಶೇ. ಮಕ್ಕಳಿಗೂ ನಿಜವಾಗಿಯೂ ಸಿಗುವ ಪ್ರಯೋಜನವೂ ಪ್ರಶ್ನಾರ್ಹವೇ. ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ಮತ್ತು ವಿವಿಧ ಕಾರಣಗಳಿಂದ ಶಾಲಾ ವ್ಯವಸ್ಥೆಯಿಂದಲೇ ಹೊರಗಿರುವ ದೇಶದ 75ಶೇ. ಮಕ್ಕಳಿಗಂತೂ ಈ ತೀರ್ಪು, ಅಷ್ಟೇ ಏಕೆ, ಈ ಕಾನೂನು ಕೂಡ ಸಂತೋಷ ತರುವಂತಿಲ್ಲ. ಏಕೆಂದರೆ ನವ-ಉದಾರವಾದಕ್ಕೆ ಬದ್ಧವಾಗಿರುವ ಯುಪಿಎ-2 ಸರಕಾರ ಶಿಕ್ಷಣವೂ ಸೇರಿದಂತೆ ಎಲ್ಲವನ್ನೂ ಖಾಸಗಿಯವರಿಗೆ ಬಿಟ್ಟು ಕೊಡುವ ತತ್ವಕ್ಕೆ ಅಂಟಿಕೊಂಡಿರುವ ಸರಕಾರ ತಾನೇ?


ಕಾರಿನಲ್ಲಿ ಶಾಲೆಗೆ ಬರುವ ಮಗು, ಆ ಕಾರಿನ ಡ್ರೈವರನ ಮಗುವಿನ ಜೊತೆಗೆ ಕೂತು ಅದೇ ಗುಣಮಟ್ಟದ ಶಿಕ್ಷಣ ಪಡೆಯುವುದಕ್ಕೆ ತಾನು ಅವಕಾಶ ಕಲ್ಪಿಸಿದ್ದೇನೆ ಎಂದು ಬೆನ್ನು ತಟ್ಟಿಕೊಳ್ಳುವ ಸರಕಾರ ಸಾಮಾನ್ಯಶಾಲೆಗಳಲ್ಲಿ ಮೂಲರಚನೆಗಳನ್ನು, ಬೋಧನಾ ಮಟ್ಟವನ್ನು ಉತ್ತಮ ಪಡಿಸುವ ಜವಾಬ್ದಾರಿಯನ್ನು ಇನ್ನೂ ನಿಭಾಯಿಸಿಲ್ಲ ಎಂಬುದನ್ನು ಮರೆಯುವಂತಿಲ್ಲ. ಹಾಗೆ ಮರೆತರೆ ಈ ಕಾನೂನು ಇತರ ಹಲವಾರು ಕ್ರಮಗಳಂತೆ ಚುನಾವಣೆಗಳ ಸಮಯದಲ್ಲಿ ಪ್ರದರ್ಶನದ ವಸ್ತುವಾಗಿ ಉಳಿಯುತ್ತದಷ್ಟೇ ಎಂಬುದು ಹಲವು ಶಿಕ್ಷಣ ತಜ್ಞರ ಆತಂಕ.

76ಶೇ. ಉಲ್ಲಂಘನೆಗಳು ಇತ್ಯರ್ಥವಾಗಿಲ್ಲ

ಶಿಕ್ಷಣದ ಹಕ್ಕಿನ ಈ ಕಾನೂನು(ಮಕ್ಕಳಿಗೆ ಪುಕ್ಕಟೆ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು ಕಾನೂನು, 2009) ಜಾರಿಗೆ ಬಂದಿರುವ ಎರಡು ವರ್ಷಗಳ ನಂತರ 25ಶೇ. ಮೀಸಲಾತಿಯ ಪ್ರಶ್ನೆ ಈಗ ಬಗೆ ಹರಿದಿದೆ. ಆದರೆ ಈ ಕಾನೂನಿನ ಉಲ್ಲಂಘನೆಗಳಲ್ಲಿ 76ಶೇ. ಇನ್ನೂ ಇತ್ಯರ್ಥಗೊಂಡಿಲ್ಲ ಎಂದು ಮಾಹಿತಿ ಹಕ್ಕಿನ ಅಡಿಯಲ್ಲಿ ಇದಕ್ಕೆ ಮೊದಲು ಪಡೆದಿರುವ ಮಾಹಿತಿ ತಿಳಿಸುತ್ತದೆ. 'ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ' (ಎನ್‌ಸಿಪಿಸಿಆರ್) ಈ ಕಾನೂನಿನ ಜಾರಿಯ ಉಸ್ತುವಾರಿ ನಡೆಸಬೇಕಾದ ಸಂಸ್ಥೆ. ಇದು ಕಳೆದ 2 ವರ್ಷಗಳಲ್ಲಿ ಕಾನೂನಿನ ಉಲ್ಲಂಘನೆಯ 2850 ದೂರುಗಳನ್ನು ಪಡೆದಿದ್ದು, ಅವುಗಳಲ್ಲಿ ಕೇವಲ 692ನ್ನು ಮಾತ್ರ, ಅಂದರೆ 24 ಶೇ. ಮಾತ್ರ ಇತ್ಯರ್ಥಗೊಳಿಸುವುದು ಅದಕ್ಕೆ ಸಾಧ್ಯವಾಗಿದೆ. ಈ ಬಗ್ಗೆ ದೊರೆತಿರುವ ಮಾಹಿತಿ ಆಘಾತಕಾರಿಯಷ್ಟೇ ಅಲ್ಲ, ಈ ಕಾನೂನಿನ ಸರಿಯಾದ ಜಾರಿಯ ಉಸ್ತುವಾರಿ ನಡೆಸುವ ಎನ್‌ಸಿಪಿಸಿಆರ್ ನ ಸಾಮರ್ಥ್ಯದಲ್ಲೂ ಇಳಿಮುಖತೆ ಕಂಡು ಬಂದಿರುವುದು ಮತ್ತಷ್ಟು ಆಘಾತಕಾರಿ ಎಂದು ಈ ಮಾಹಿತಿ ಪಡೆದಿರುವವರು ಹೇಳುತ್ತಾರೆ. ಮಾನವ ಸಂಪನ್ಮೂಲ ಮಂತ್ರಿಗಳು ತಮ್ಮ ಬೆನ್ನು ತಾವೇ ತಟ್ಟಿಕೊಳ್ಳುವ ಮೊದಲು ಈ ಮಾಹಿತಿಯನ್ನು ಗಮನಿಸಿದ್ದಾರೋ ಇಲ್ಲವೋ ಗೊತ್ತಿಲ್ಲ.

ಉನ್ನತ ಶಿಕ್ಷಣಕ್ಕೆ ಸಬ್ಸಿಡಿ ಬೇಕಿಲ್ಲ,
ಸಾಲ ಸೌಲಭ್ಯ ಕೊಟ್ಟರೆ ಸಾಕು!

ಶಿಕ್ಷಣದ ಹಕ್ಕಿನ ಕಾನೂನು ತರುವ ಮೂಲಕ ಸಾಮಾಜಿಕ ಕ್ರಾಂತಿ ತಂದಿದ್ದೇನೆ ಎನ್ನುತ್ತಿರುವ ಮಾನವ ಸಂಪನ್ಮೂಲ ಮಂತ್ರಿಗಳು ಇನ್ನೂ ಹಲವು ತೀವ್ರಗಾಮಿ ಶಿಕ್ಷಣ ಮಸೂದೆಗಳನ್ನು ತಮ್ಮ ಸರಕಾರ ತಯಾರಿಸಿದ್ದು ರಾಜಕೀಯ ಕಾರಣಗಳಿಂದಾಗಿ ವಿರೋಧಪಕ್ಷಗಳು ಅವು



ವೇದರಾಜ ಎನ್.ಕೆ.

ಕಾನೂನಾಗದಂತೆ ಅಡ್ಡಿ ಮಾಡುತ್ತಿವೆ ಎಂದಿದ್ದಾರೆ. ಆದರೆ ಅವರ ಸರಕಾರದ ಈ ವರ್ಷದ ಬಜೆಟ್ ನೋಡಿದವರಿಗೆ ಈ ಸರಕಾರ ನಿಜವಾಗಿಯೂ ಶಿಕ್ಷಣ ಕ್ಷೇತ್ರದ ಬಗ್ಗೆ ಕಾಳಜಿ ಹೊಂದಿದೆಯೇ ಎಂಬ ಸಂದೇಹ ಬಾರದಿರದು. ಈ ಬಜೆಟಿನಲ್ಲಿ ಶಿಕ್ಷಣದ ಬಗೆಗಿರುವ ಏಕೈಕ ಹೊಸ ಪ್ರಸ್ತಾವವೆಂದರೆ, ಶೈಕ್ಷಣಿಕ ಸಾಲಗಳನ್ನು ಒದಗಿಸುವ ಮಾತು ಎನ್ನುತ್ತಾರೆ ಒಬ್ಬ ಶಿಕ್ಷಣ ತಜ್ಞರು.

ಅರ್ಹ ವಿದ್ಯಾರ್ಥಿಗಳಿಗೆ ಸಾಲ ಸಿಗುವಂತಾಗಲು ಒಂದು 'ಸಾಲ ಗ್ಯಾರಂಟಿ ನಿಧಿ'ಯನ್ನು ರಚಿಸುವ ಭರವಸೆಯನ್ನು ಹಣಕಾಸು ಮಂತ್ರಿಗಳು ಕೊಟ್ಟಿದ್ದಾರೆ. ಶೆಡ್ಯೂಲ್ಡ್ ಬ್ಯಾಂಕುಗಳು ನೀಡುವ ಶೈಕ್ಷಣಿಕ ಸಾಲಗಳ ಬಡ್ಡಿಗಳ ಮೇಲೆ ಸಬ್ಸಿಡಿ ನೀಡುವ ಸ್ಕೀಮಿಗೆ ಕಳೆದ ಬಜೆಟಿನಲ್ಲಿ 640 ಕೋಟಿ ರೂ. ಒದಗಿಸಲಾಗಿತ್ತು, ಈ ಬಾರಿ ಅದನ್ನು 800 ಕೋಟಿ ರೂ.ಗೆ ಏರಿಸಲಾಗಿದೆ. ಆದರೆ 2010-11ರಲ್ಲಿ ಈ ಸ್ಕೀಮಿಗೆ ಮಾಡಿರುವ ಖರ್ಚು ರೂ.203.3 ಕೋಟಿ ಮಾತ್ರ. ಹಣಕಾಸು ಮಂತ್ರಿಗಳು ಭರವಸೆ ನೀಡಿರುವ ನಿಧಿಯ ರೂಪುರೇಷೆಯ ಬಗ್ಗೆಯಾಗಲೀ, ಅದಕ್ಕೆ ಹೇಗೆ ಹಣ ಒದಗಿಸಲಾಗುತ್ತದೆ ಎಂಬ ಬಗ್ಗೆಯಾಗಲೀ ಅವರು ಏನೂ ಹೇಳಿಲ್ಲ.

ಇಲ್ಲಿ ಪ್ರಶ್ನೆ ಸಾಲದ ಬಡ್ಡಿಯ ಸಬ್ಸಿಡಿಯದ್ದಲ್ಲ. ಉನ್ನತ ಶಿಕ್ಷಣಕ್ಕೆ ಸರಕಾರ ನೀಡುವ ಬೆಂಬಲದ ವಿಧಾನವನ್ನು ಬದಲಿಸುತ್ತಿರುವುದು ಏಕೆ ಎಂಬುದೇ ಇಲ್ಲಿಯ ಪ್ರಶ್ನೆ. ಉನ್ನತ ಶಿಕ್ಷಣಕ್ಕೆ ಸರಕಾರದ ಬೆಂಬಲವನ್ನು ಕಡಿಮೆ ಮಾಡಬೇಕು, ಅದರ ಸ್ಥಾನದಲ್ಲಿ ವಿದ್ಯಾರ್ಥಿ ಸಾಲಗಳಿಗೆ ಹೆಚ್ಚಿನ ಒತ್ತು ನೀಡಬೇಕು ಎಂಬುದು ಯುಪಿಎ-2 ಸರಕಾರದ ಆಶಯವಿದ್ದಂತೆ ಕಾಣುತ್ತದೆ ಎನ್ನುತ್ತಾರೆ ಶಿಕ್ಷಣ ತಜ್ಞರು.

ವಿಶ್ವಾದ್ಯಂತ ಉನ್ನತ ಶಿಕ್ಷಣಕ್ಕೆ ಸರಕಾರದ ಸಬ್ಸಿಡಿಯ ಬಗ್ಗೆಯೇ ಹೆಚ್ಚಿನ ಒಲವು ಇದೆ, ಶೈಕ್ಷಣಿಕ ಶಾಲ ವ್ಯವಸ್ಥೆಯ ಬಗ್ಗೆ ಆಕ್ಷೇಪಗಳೂ ಬಹಳ ಇವೆ. ಇದು ಯುಪಿಎ-2 ಸರಕಾರಕ್ಕೆ ಗೊತ್ತಿಲ್ಲದ ಸಂಗತಿಯೇನಲ್ಲ. "ಶಿಕ್ಷಣ ಆರ್ಥಿಕ ಬೆಳವಣಿಗೆಯ ಒಂದು ಮಹತ್ವದ ಭಾಗವಾಗಿದೆ, ಆರ್ಥಿಕ ಬೆಳವಣಿಗೆಯ ಚಾಲನಾಶಕ್ತಿಗಳಲ್ಲೂ ಅದು ಒಂದು, ಆದ್ದರಿಂದ ಭಾರತದಲ್ಲಿ ಮತ್ತು ಜಗತ್ತಿನಾದ್ಯಂತ ಸರಕಾರಗಳು ಉನ್ನತ ಶಿಕ್ಷಣಕ್ಕೆ ಸಬ್ಸಿಡಿ ನೀಡುತ್ತಾ ಬಂದಿವೆ" ಎಂಬುದನ್ನು ತನ್ನ ಆರ್ಥಿಕ ಸರ್ವೆಯಲ್ಲಿ ಅದು ಒಪ್ಪಿಕೊಂಡಿದೆ,

ಪುಟ 15 ಕ್ಕೆ

ಜಗದಗಲ

ಶರತ್‌ಚಂದ್ರ

ಮ್ಯಾನ್ಮಾರ್: ಮಹತ್ವದ ಬೆಳವಣಿಗೆಗಳು

ಮ್ಯಾನ್ಮಾರಿನಲ್ಲಿ ಇತ್ತೀಚೆಗೆ ಮಹತ್ವದ ಬೆಳವಣಿಗೆಗಳು ಆಗಿವೆ. ಅಂಗ್ ಸೂ ಕಿ ಮತ್ತು ಅವರ ನೇಶನಲ್ ಲೀಗ್ ಫಾರ್ ಡೆಮೊಕ್ರೆಸಿ (ಎನ್.ಎಲ್.ಡಿ.) ಪಾರ್ಲಿಮೆಂಟಿನ ಮರು ಚುನಾವಣೆಗಳಲ್ಲಿ ಭಾಗವಹಿಸಿ, ದೊಡ್ಡ ವಿಜಯ ಗಳಿಸಿದೆ. 2010ರಲ್ಲಿ ಬಿಡುಗಡೆ ಆಗುವ ಮೊದಲು ನಡೆದ ಚುನಾವಣೆಯಲ್ಲಿ ಸೂ ಕಿ ನಾಯಕತ್ವದಲ್ಲಿ ಎನ್.ಎಲ್.ಡಿ. ಭಾಗವಹಿಸದಿರಲು ನಿರ್ಧರಿಸಿತ್ತು. ಮಿಲಿಟರಿಗೆ ಪಾರ್ಲಿಮೆಂಟಿನಲ್ಲಿ ಶೇ.25 ಪ್ರಾತಿನಿಧ್ಯ ಕೊಡುವ ಮತ್ತು ಅದಕ್ಕೆ ಪಾರ್ಲಿಮೆಂಟಿನ ನಿರ್ಧಾರಗಳ ಮೇಲೆ ವಿಟೋ ಕೊಡುವ 2008 ರ ಸಂವಿಧಾನದಡಿಯಲ್ಲಿ ಚುನಾವಣೆಯಲ್ಲಿ ಭಾಗವಹಿಸುವುದು ಎಂದರೆ ಈ ಪ್ರಜಾಪ್ರಭುತ್ವ-ವಿರೋಧಿ ಸಂವಿಧಾನವನ್ನು ಒಪ್ಪಿಕೊಳ್ಳುವುದು ಎಂಬುದು ಅವರ ನಿಲುವಾಗಿತ್ತು. 2008 ರ ಸಂವಿಧಾನ ಬದಲಾಗಿರಲಿಲ್ಲ. ಆದರೂ ಸೂ ಕಿ ಸ್ವತಃ ಸೇರಿದಂತೆ ಎನ್.ಎಲ್.ಡಿ. ಭಾಗವಹಿಸಲು ನಿರ್ಧರಿಸಿತ್ತು. ಎನ್.ಎಲ್.ಡಿ.ಯಲ್ಲೇ ಈ ಬಗ್ಗೆ ತೀವ್ರ ಭಿನ್ನಮತ ಇತ್ತು. ಹಾಗಾದರೆ ಬದಲಾದದ್ದು ಏನು ?



ಇತ್ತೀಚಿನ ವರೆಗೆ (ಅಂದರೆ 2011 ಕೊನೆವರೆಗೆ) ಅಮೆರಿಕ ಮತ್ತು ನಾಟೋ ಕೂಟ ಮ್ಯಾನ್ಮಾರಿನ ಮೇಲೆ ಆರ್ಥಿಕ ದಿಗ್ಬಂಧನ ವಿಧಿಸಿತ್ತು. ಭಾರತ, ಚೀನಾ ಮತ್ತು ದಕ್ಷಿಣ-ಪೂರ್ವ ಏಶ್ಯಾದ ನೆರೆಯ ದೇಶಗಳು ಈ ದಿಗ್ಬಂಧನದಲ್ಲಿ ಪೂರ್ತಿಯಾಗಿ ಭಾಗವಹಿಸುವಂತೆ ಒತ್ತಡ ಹೇರಿತ್ತು. 'ಸರ್ಕಾರ ಬದಲಾವಣೆ'ಗೆ ಗುರುತಿಸಲಾದ ದೇಶಗಳಲ್ಲಿ ಇದೂ ಒಂದಾಗಿತ್ತು. ಅಮೆರಿಕದ ವಿದೇಶ ಮಂತ್ರಿ ಹಿಲೆರಿ ಕ್ಲಿಂಟನ್ ನವೆಂಬರ್ 2011 ಭೇಟಿಯ ಆಸುಪಾಸಿನಲ್ಲಿ ಅಮೆರಿಕದ ನಿಲುವಿನಲ್ಲೂ ಬದಲಾವಣೆಗಳು ಆಗಿವೆ.

ಐವತ್ತು ವರ್ಷಗಳ ನಂತರ ಯಾವುದೇ ಅಮೆರಿಕದ ಉನ್ನತ ನಾಯಕರು ಭೇಟಿ ಮಾಡಿರದ ಹಿನ್ನೆಲೆಯಲ್ಲಿ, ಹಿಲೆರಿ ಭೇಟಿ ನಿರ್ಧಾರವೇ ಒಂದು ವಿಶೇಷ ಆಗಿತ್ತು. ಆಗ ಇನ್ನೂ ಎನ್.ಎಲ್.ಡಿ. ಚುನಾವಣೆಯಲ್ಲಿ ಭಾಗವಹಿಸಲು ನಿರ್ಧರಿಸಿರಲಿಲ್ಲ. ಹಿಲೆರಿ ಭೇಟಿ ಬೆನ್ನಲ್ಲೇ ಫ್ರೆಂಚ್ ಮತ್ತು ಬ್ರಿಟಿಶ್ ವಿದೇಶ ಮಂತ್ರಿಗಳು, ಜಪಾನಿ ವಾಣಿಜ್ಯ ಮಂತ್ರಿಗಳೂ ಸಾಲಾಗಿ ಭೇಟಿ ನೀಡಿದರು. ಯುರೋಪಿಯನ್ ಕೂಟ ಮ್ಯಾನ್ಮಾರಿನ ಅಧಿಕಾರಿಗಳ ಭೇಟಿ ಮೇಲೆ ನಿಷೇಧ ಹಿಂತೆಗೆದುಕೊಂಡಿತು. ಅಮೆರಿಕದಿಂದ ಆರಂಭಿಸಿ ಎಲ್ಲಾ ಪಾಶ್ಚಿಮಾತ್ಯ ದೇಶಗಳು ಮ್ಯಾನ್ಮಾರಿನ ಮೇಲೆ ಆರ್ಥಿಕ ದಿಗ್ಬಂಧನ ಸಡಿಲಿಸಲು ಆರಂಭಿಸಿವೆ. ಹಿಲೆರಿ ತಮ್ಮ ಭೇಟಿಯಲ್ಲಿ 'ಪ್ರಜಾಪ್ರಭುತ್ವ ಸ್ಥಾಪಿಸಲು ಮಿಲಿಟರಿ ಆಡಳಿತ ಕೈಗೊಂಡಿರುವ ಕ್ರಮಗಳ ಬಗ್ಗೆ' ತಮ್ಮ ಮೆಚ್ಚಿಗೆ ವ್ಯಕ್ತಪಡಿಸಿದರು. ಈ ಹಠಾತ್ ಬದಲಾವಣೆಗಳಿಗೆ ಕಾರಣ ಏನು ?

ಮ್ಯಾನ್ಮಾರಿನ ಮಿಲಿಟರಿ ಆಡಳಿತದ ನಿಲುವಿನಲ್ಲೂ ಮಹತ್ವದ ಬದಲಾವಣೆಗಳಾಗಿವೆ. ಅಮೆರಿಕ ನಾಯಕತ್ವದಲ್ಲಿ ತೀವ್ರ ಆರ್ಥಿಕ ದಿಗ್ಬಂಧನದ ಅವಧಿಯಲ್ಲಿ ಅದು ಚೀನಾದ ಜತೆ ಬೆಳೆಸಿದ್ದ ಘನಿಷ್ಟ ಆರ್ಥಿಕ ಸಂಬಂಧಗಳನ್ನು ಸಡಿಲಿಸತೊಡಗಿತು. ಚೀನಾದ ಆರ್ಥಿಕ ನೆರವಿನೊಂದಿಗೆ ಆರಂಭಿಸಲಾಗಿದ್ದ 360 ಕೋಟಿ ಡಾಲರುಗಳ ಜಲ-ವಿದ್ಯುತ್ ಯೋಜನೆಯನ್ನು ರದ್ದು ಪಡಿಸಿತು. ಇದು ಮ್ಯಾನ್ಮಾರಿನಲ್ಲಿ ಚೀನಾದ ಅತಿ ದೊಡ್ಡ ಹೂಡಿಕೆಯಾಗಿತ್ತು. ಇನ್ನೂ ಇಂತಹ ಏಳು ಜಲ-ವಿದ್ಯುತ್ ಯೋಜನೆಗಳ ಬಗ್ಗೆ ಮಾತುಕತೆ ಆಗಿತ್ತು. ಇದಕ್ಕೆ 'ಪರಿಸರ ಸಮಸ್ಯೆಗಳ ಹಿನ್ನೆಲೆಯಲ್ಲಿ ಜನರ ವಿರೋಧ'ದ ಕಾರಣ ಕೊಡಲಾಯಿತು. ಆದರೆ ರದ್ದತಿಯ ಘೋಷಣೆಯನ್ನು ಮ್ಯಾನ್ಮಾರಿನ ವಿದೇಶ ಮಂತ್ರಿಯ ಅಮೆರಿಕ ಭೇಟಿಯ ಸಂದರ್ಭದಲ್ಲಿ ಮಾಡಲಾಯಿತು. ಅದರ ನಂತರವೇ ಹಿಲೆರಿಯವರ ಮ್ಯಾನ್ಮಾರ್ ಭೇಟಿಯ ಘೋಷಣೆ ಹೊರ ಬಿತ್ತು ಎಂಬುದು ಗಮನಾರ್ಹ.

ಮ್ಯಾನ್ಮಾರಿನಿಂದ ದಕ್ಷಿಣ ಚೀನಾದ ವರೆಗೆ ಗ್ಯಾಸ್ ಪೈಪ್ ಲೈನಿನ ಪ್ರಾಜೆಕ್ಟನ್ನೂ ಅದೇ ರೀತಿಯಲ್ಲಿ ಹಿರಿಯ ಅಧಿಕಾರಿಯ ಅಮೆರಿಕ ಭೇಟಿಯ ಸಂದರ್ಭದಲ್ಲಿ ಹಠಾತ್ತಾಗಿ ರದ್ದುಮಾಡಲಾಯಿತು. ಈ ಪ್ರಾಜೆಕ್ಟನ್ನು ಭಾರತಕ್ಕೆ ಮ್ಯಾನ್ಮಾರ್ ಸರ್ಕಾರ ನೀಡಿದ್ದು, ಭಾರತ ಈ ಬಗ್ಗೆ ಮೀನಮೇಷ (ಬಹುಶಃ ಅಮೆರಿಕದ ಪೂರ್ಣ ದಿಗ್ಬಂಧನದ ಒತ್ತಡದಿಂದಾಗಿ) ಎಣಿಸುತ್ತಾ ಹೋಗಿದ್ದರಿಂದ ಚೀನಾಕ್ಕೆ ಕೊಡಲಾಗಿತ್ತು ಎಂಬುದೂ ಗಮನಾರ್ಹ. 2010-11 ರ ಸಾಲಿನಲ್ಲಿ ಚೀನಾ ಮ್ಯಾನ್ಮಾರಿನಲ್ಲಿ 1100 ಕೋಟಿ ಡಾಲರಿನ ಹೂಡಿಕೆ ಮಾಡಿತ್ತು. ಚೀನಾದ ಪ್ರಾಜೆಕ್ಟುಗಳ ಈ ಹಠಾತ್ ರದ್ದತಿಗೆ ಕಾರಣ ಏನು ?

ಮ್ಯಾನ್ಮಾರ್ ಮತ್ತು ಅದರ ಬಗ್ಗೆ ಇತರ ದೇಶಗಳ ಹಠಾತ್ ಬದಲಾವಣೆಗೆ ಹಲವು ಕಾರಣಗಳಿವೆ. ಇದರಲ್ಲಿ ಪ್ರಮುಖವಾದದ್ದು ಬಾಲಿ ಆಸಿಯನ್ ಶೃಂಗಸಭೆಯಲ್ಲಿ ಅಧ್ಯಕ್ಷ ಒಬಾಮಾ ಚೀನಾ ತನಗೆ ಸವಾಲು ಹಾಕಬಲ್ಲ ಏಕಮಾತ್ರ ಸೂಪರ್ ಪವರ್. ಏಶ್ಯಾ-ಪೆಸಿಫಿಕ್ ಪ್ರದೇಶದಲ್ಲಿ ಅದರ ಪ್ರಭಾವ ಕಡಿತ ಮಾಡುವುದು ತನ್ನ ಪ್ರಮುಖ ವಿದೇಶ-ಮಿಲಿಟರಿ ನೀತಿಗಳ ಗುರಿ ಎಂದು ಘೋಷಿಸಿದ್ದರು. ಈ ಹಿನ್ನೆಲೆಯಲ್ಲಿ ಚೀನಾದ ಜತೆ ಗಡಿ ವಿವಾದಗಳಿರುವ ದೇಶಗಳಿಗೆ ಚೀನಾದ ವಿರುದ್ಧ ಅಮೆರಿಕ ಬೆಂಬಲ ನೀಡುವುದು. ಮ್ಯಾನ್ಮಾರಿನಲ್ಲಿ ಸಕಾರಾತ್ಮಕ ಬದಲಾವಣೆಗಳನ್ನು ತರಲು ಎರಡು ದೇಶಗಳ ನಡುವೆ ಹೊಸ ಅಧ್ಯಾಯ ಆರಂಭಿಸುವುದಾಗಿಯೂ ಘೋಷಿಸಿದ್ದರು.

ಇದರ ಮೊದಲೇ ಮ್ಯಾನ್ಮಾರಿನ ಚೀನಾದ ಜತೆಗಿನ ಘನಿಷ್ಟ ಸಂಬಂಧ ಮುರಿದು ಅದನ್ನು ಚೀನಾದ ವಿರುದ್ಧ ದಾಳವಾಗಿ ಬಳಸಲು ಅಮೆರಿಕನ್ ಸರ್ಕಾರ ಮ್ಯಾನ್ಮಾರ್ ಮಿಲಿಟರಿ ಸರ್ಕಾರದ ಜತೆ ಗುಪ್ತ ಮಾತುಕತೆ ನಡೆಸಿತ್ತು. 'ಅರಬ್ ವಸಂತ'ದ ನಂತರ ಎನ್.ಎಲ್.ಡಿ. 'ತಹ್ರಿರ್ ಚೌಕ'ದಂತಹ ಚಳುವಳಿಯ ಬೆದರಿಕೆ ಹಾಕಿದ್ದು ಅಂತಹ ಸಂದರ್ಭದಲ್ಲಿ ಮಿಲಿಟರಿ ಮಧ್ಯಪ್ರವೇಶ ಮಾಡಿ ತನ್ನನ್ನು ರಕ್ಷಿಸಬಲ್ಲ ದೇಶ ಅಮೆರಿಕ ಎಂಬ ನಿರ್ಧಾರಕ್ಕೆ ಬಂದಿತ್ತು. 'ರೋಗಿ ಬಯಸಿದ್ದೂ ಹಾಲು. ವೈದ್ಯ ಕೊಟ್ಟಿದ್ದೂ ಹಾಲು' ಎಂಬಂತೆ ಈ ಬದಲಾವಣೆಗಳ ಸರಣಿ ಆರಂಭವಾಯಿತು.

ಸ್ಪೈನಿನಲ್ಲಿ ಸಾರ್ವತ್ರಿಕ ಮುಷ್ಕರ

ಸ್ಪೈನಿನಲ್ಲಿ ಮಾರ್ಚ್ 20 ರಂದು ಇತ್ತೀಚಿನ ಅವಧಿಯಲ್ಲೇ ಅತಿ ದೊಡ್ಡ ಸಾರ್ವತ್ರಿಕ ಮುಷ್ಕರ ನಡೆಯಿತು. ಸಂಘಟಿತ ವಲಯದ ಶೇ.80ಕ್ಕೂ ಹೆಚ್ಚು ಕಾರ್ಮಿಕರು ಭಾಗವಹಿಸಿದರು. ಅಂದು ಇಡೀ ಸ್ಪೈನ್ ಸ್ತಬ್ಧವಾಯಿತು. ಎಲ್ಲಾ ಪ್ರಮುಖ ನಗರ ಮತ್ತು ಪಟ್ಟಣಗಳಲ್ಲಿ ಭಾರೀ ರ‍್ಯಾಲಿಗಳನ್ನು ಆಯೋಜಿಸಲಾಗಿತ್ತು. ಅದರಲ್ಲೂ ದೊಡ್ಡ ಪ್ರಮಾಣದಲ್ಲಿ ಕಾರ್ಮಿಕರು ಜನತೆ ಭಾಗವಹಿಸಿದರು. ಬಾರ್ಸೆಲೊನಾ ನಗರದಲ್ಲಿ 9 ಲಕ್ಷ ಮತ್ತು ಮ್ಯಾಡ್ರಿಡಿನಲ್ಲಿ 8 ಲಕ್ಷ ಜನ ರ‍್ಯಾಲಿಯಲ್ಲಿ ಭಾಗವಹಿಸಿದರು ಎನ್ನಲಾಗಿದೆ. ಈ ಮುಷ್ಕರವನ್ನು ಸೋಶಲಿಸ್ಟ್ ಪಕ್ಷಕ್ಕೆ ಹತ್ತಿರವಿರುವ ಯು.ಜಿ.ಟಿ. ಮತ್ತು ಕಮ್ಯುನಿಸ್ಟ್ ಪಕ್ಷಕ್ಕೆ ಹತ್ತಿರವಿರುವ ಸಿ.ಸಿ.ಓ.ಓ. ಸಂಘಟಿಸಿತ್ತು.

ಅಂದು ಸ್ಪೈನಿನ ನೂರು ದಿನಗಳನ್ನೂ ದಾಟದ ಸರ್ಕಾರ ಇನ್ನಷ್ಟು ಭಾರೀ 'ಮಿತವ್ಯಯ ಸಾಧಿಸಲು ಕಡಿತ'ಗಳಿಗೆ ಮುಂದಾಗಿತ್ತು. ಈಗಾಗಲೇ ಸಾರ್ವಜನಿಕ ವೆಚ್ಚ ಮತ್ತು ಕಲ್ಯಾಣ ಯೋಜನೆಗಳಲ್ಲಿ 1500 ಕೋಟಿ ಡಾಲರುಗಳಷ್ಟು ಕಡಿತ ಮಾಡಲಾಗಿದ್ದು, ಇನ್ನೂ 4000 ಕೋಟಿ ಡಾಲರುಗಳ ಕಡಿತಕ್ಕೆ ಮುಂದಾಗಿತ್ತು. ಅದೂ ಈಗಾಗಲೇ ಯುರೋಪಿನಲ್ಲೇ ಅತಿ ಹೆಚ್ಚು ಶೇ. 24 ನಿರುದ್ಯೋಗ ಪ್ರಮಾಣ ಇದೆ. ಯುವಕರ ನಿರುದ್ಯೋಗ ಪ್ರಮಾಣ ಅಭೂತಪೂರ್ವ ಶೇ. 50 ರಷ್ಟು ಮುಟ್ಟಿದೆ. ಹಲವು ಕಡೆ ಪೋಲೀಸರ ದುಂಡಾವರ್ತಿ ವರ್ತನೆಯಿಂದ ಘರ್ಷಣೆಗಳು ಕಂಡು ಬಂದವು. ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ಎಲ್ಲೆಡೆ ಕಂಡು ಬಂತು

ಬ್ಯಾಂಕರುಗಳು, ಜೂಜಾಟಗಾರರು ಸೃಷ್ಟಿಸಿದ ಬಿಕ್ಕಟ್ಟಿಗೆ ನಾವು ಜವಾಬ್ದಾರರೂ ಅಲ್ಲ. ಅದರ ಬಲಿಪಶುಗಳಾಗಲೂ ತಯಾರಿಲ್ಲ. ಯೂರೋಪಿಯನ್ ಕೂಟ ಬಿಕ್ಕಟ್ಟು ಬಗೆಹರಿಸುವ ಹೆಸರಲ್ಲಿ ಬಿಕ್ಕಟ್ಟು ಸೃಷ್ಟಿಸಿದವರನ್ನು ಕೊಬ್ಬಿಸುತ್ತಿದ್ದಾರೆ. ಉದ್ಯೋಗಗಳು, ಸಾರ್ವಜನಿಕ ವೆಚ್ಚ ಮತ್ತು ಕಲ್ಯಾಣ ಯೋಜನೆಗಳ ಕಡಿತ ಆರ್ಥಿಕತೆ ಸುಧಾರಿಸುತ್ತದೆ ಎಂಬ ಯುರೋ ಕೂಟದ ಮಂತ್ರವನ್ನೇ ಜನ ಪ್ರಶ್ನಿಸುತ್ತಿದ್ದಾರೆ. ಇದೇ ಯುರೋ ಕೂಟದ ಮಂತ್ರವೇ ಆದರೆ, ಅದರಿಂದ ಸ್ಪೈನು ಹೊರ ಬರಬೇಕು ಎಂಬ ಕೂಗೂ ಕೇಳುತ್ತಿದೆ. ಸ್ಪೈನಿನ ಮೇಲೆ ಕಡಿತಗಳ ದಾಳಿಯಿಂದ ಯುರೋ ಕೂಟ ಇಂತಹ ಸನ್ನಿವೇಶಕ್ಕೆ ಆಹ್ವಾನ ಕೊಡುತ್ತಿದೆ. ಇದು ಯುರೋ ಕೂಟದ ಆರ್ಥಿಕ ಆತ್ಮಹತ್ಯೆ ಅಲ್ಲದೆ ಏನಲ್ಲ. ಕಡಿತ ಮಿತವ್ಯಯಗಳಿಂದ ಆರ್ಥಿಕತೆ ಸುಧಾರಿಸುತ್ತದೆ ಎಂಬುದು ತಪ್ಪು ಸಿದ್ಧಾಂತ ಎಂದು ನೊಬೆಲ್ ಪ್ರಶಸ್ತಿ ವಿಜೇತ ಆರ್ಥಿಕ ತಜ್ಞ ಪಾಲ್ ಕ್ರುಗ್ಮನ್ ಹೇಳಿದ್ದಾರೆ. ಇದೇ ಸ್ಥಿತಿ ಮುಂದುವರೆದರೆ ಯುರೋ ಝೋನ್ ಕುಸಿದು ಬಿದ್ದರೆ ಆಶ್ಚರ್ಯ ಪಡಬೇಕಾಗಿಲ್ಲ. ಅದರೊಂದಿಗೆ ಇಡೀ ಜಗತ್ತಿನ ಆರ್ಥಿಕ ಸಹ ಕುಸಿದು ಬೀಳುತ್ತದೆ ಎಂದಿದ್ದಾರೆ.

....ಬಗರ್ ಹುಕುಂ ಸಾಗುವಳಿ

ಪುಟ 4 ರಿಂದ

ಬಡ ರೈತರ ಬದುಕನ್ನು ಕೇಂದ್ರವಾಗಿಟ್ಟುಕೊಂಡು ಇತ್ಯರ್ಥಗೊಳ್ಳುವಂತೆ ಮಾಡಬೇಕಾದ ಜವಾಬ್ದಾರಿ ಜನ ಚಳುವಳಿಗಳ ಮೇಲಿದೆ.

ಈ ಹಿಂದೆ ಈ ವಿಷಯದಲ್ಲಿ ಬೃಹತ್ ಆಂದೋಲನ ನಡೆದು ಸರ್ಕಾರದ ಮೇಲೆ ಒತ್ತಡ ಹೇರಿದಾಗ ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು ತಾವು ಬಗರ್ ಹುಕುಂ ಹೋರಾಟದಿಂದಲೇ ರಾಜಕೀಯ ಪ್ರವೇಶ ಮಾಡಿದವರಾಗಿದ್ದು ಈ ಸಂಬಂಧ ಬೆಂಗಳೂರಿಗೆ ಪಾದಯಾತ್ರೆ ಮಾಡಿ, ಜೈಲುವಾಸವನ್ನು ಅನುಭವಿಸಿರುವುದಾಗಿ ಹೇಳಿ, ಸಮಸ್ಯೆಗೆ ಸ್ಪಂದಿಸುವುದಾಗಿ ಭರವಸೆ ನೀಡಿದ್ದರು. ಫೆ. 4, 2010 ರಂದು ಮನವಿ ಸ್ವೀಕರಿಸಿದ ಅವರು ಹತ್ತು ದಿನದಲ್ಲಿ ಸಭೆ ಕರೆದು ಚರ್ಚೆ ಮಾಡುವುದಾಗಿಯೂ ತಿಳಿಸಿದ್ದರು. ಆದರೆ ಅವರು ಮುಖ್ಯಮಂತ್ರಿಯಾಗಿರುವವರೆಗೂ ಅವರಿಗೆ ಈ ವಿಷಯಕ್ಕೆ ಪುರುಸೊತ್ತೇ ಸಿಗಲಿಲ್ಲ. ಸದಾನಂದ ಗೌಡರ ಸರ್ಕಾರವೇನೂ ಈ ವಿಷಯದಲ್ಲಿ ಭಿನ್ನವೇನಲ್ಲ. ಅದು ಯಡಿಯೂರಪ್ಪ ಸರ್ಕಾರದ ಜೆರಾಕ್ಸ್ ಪ್ರತಿಯಂತೆ 'ಸದಾನಂದಗೌಡ'ರ ದೀನ ಅವಸ್ಥೆ

ಇತ್ತೀಚಿನ ದಿನಗಳಲ್ಲಿ ಭೂಮಿ ಚಳುವಳಿಯ ನಾಯಕರು ಈಗಿನ ಮುಖ್ಯಮಂತ್ರಿ ಸದಾನಂದಗೌಡರನ್ನು ಭೇಟಿ ಮಾಡಿ ಸರ್ಕಾರದ ಈ ಹಿಂದಿನ ಭರವಸೆಯನ್ನು ನೆನಪಿಸಿ ಭರವಸೆ ಈಡೇರಿಸಲು ಒತ್ತಾಯಿಸಿದ್ದಾರೆ. ಈ ಸಂದರ್ಭದಲ್ಲಿ ಮಾತನಾಡುತ್ತಾ ಬಗರ್ ಹುಕುಂ ಸಾಗುವಳಿ ಸಕ್ರಮ, ಅರಣ್ಯ ಭೂಮಿ ಸಾಗುವಳಿ ಸಕ್ರಮ, ಮನೆ ನಿವೇಶನ ನೀಡಿಕೆ ಮುಂತಾದ ಪ್ರಶ್ನೆಗಳಲ್ಲಿ ಜನರ ಬೇಡಿಕೆ ಈಡೇರಿಸಲು ಸರ್ಕಾರಕ್ಕೆ ವಿಶೇಷವಾಗಿ ವೆಚ್ಚ ಎಂಬುದೇನು ಬರುವುದಿಲ್ಲ. ಸರ್ಕಾರ ಈ ಸಮಸ್ಯೆಗಳನ್ನು ಇತ್ಯರ್ಥ ಪಡಿಸಲು ಬಾರಿ ದೊಡ್ಡ ಪ್ರಮಾಣದ ಬಜೆಟ್ ಒದಗಿಸುವುದು ಮುಂತಾದ ಅಗತ್ಯವೇನೂ ಇಲ್ಲ. ಸರ್ಕಾರ ಮನಸ್ಸು ಮಾಡಿದರೆ ಸುಲಭವಾಗಿ ಈಡೇರಿಸಬಹುದು ಆದ್ದರಿಂದ ಈ ಕೆಲಸ ಬೇಗ ಮಾಡಿ. ಈ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ ಎಂದು ಕಿವಿ ಮಾತು ಹೇಳಿದ್ದಾರೆ.

ಈ ವಿಷಯಕ್ಕೆ ಒಪ್ಪಿಗೆ ಸೂಚಿಸುವಂತೆ ಮಾತನಾಡಿದ ಸದಾನಂದಗೌಡರು ಚಳುವಳಿಕಾರರ ನಿಯೋಗದೊಂದಿಗೆ ಚರ್ಚಿಸಲು ಮಾತುಕತೆಗೆ ಸಿದ್ಧವೆಂದರು. ಮುಖಂಡರು ಮಾತುಕತೆಗೆಂದು ಹೋದಾಗ ಮುಖ್ಯಮಂತ್ರಿಗಳ ಕಛೇರಿಯಲ್ಲಿನ ಅಧಿಕಾರಿಗಳು ಮಾತುಕತೆ ನಡೆಸಲು, ಬೇಡಿಕೆ ಈಡೇರಿಸಲು ಮುಖ್ಯಮಂತ್ರಿಗಳಿಗೆ ಇನ್ನಷ್ಟು ಸಮಯ ಕೊಡಿ ಎಂದು ಮನವಿ ಮಾಡಿಕೊಂಡಿದ್ದಾರೆ. ಕಾರಣ ಏನು ಗೊತ್ತೆ? ಮಾಜಿ ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಯಡಿಯೂರಪ್ಪನವರು ತಮ್ಮದೇ ಸರ್ಕಾರದ ವಿರುದ್ಧ ಬಂಡಾಯವೆದ್ದು ತಮ್ಮದೇ ಪಕ್ಷದ ಶಾಸಕರನ್ನು ರೆಸಾರ್ಟ್‌ಗೆ ಒಯ್ದು ಇರಿಸಿಕೊಂಡು ಸದಾನಂದಗೌಡರ ಕುರ್ಚಿ ಅಲುಗಾಡಿಸುತ್ತಿದ್ದರು. ಮುಖ್ಯಮಂತ್ರಿ ಕಛೇರಿಯ ಅಧಿಕಾರಿಗಳ "ಮುಖ್ಯಮಂತ್ರಿಗಳ ಮೇಲೆ ಕರುಣೆ ತೋರಿ, ಸ್ವಲ್ಪ ಸಮಯ ಕೊಡಿ' ಅನ್ನುವ ಮಾತುಗಳನ್ನು ಕೇಳಿಕೊಂಡು ನಿಯೋಗದ ಸದಸ್ಯರು ವಾಪಸ್ಸಾಗಬೇಕಾಯಿತು. ಇದು ಬಿಜೆಪಿ ಆಳ್ವಿಕೆಯಲ್ಲಿ ಜನರ ಬೇಡಿಕೆಗಳಿಗೆ ಬಂದಿರುವ ಪರಿಸ್ಥಿತಿ.

ತೀವ್ರ ಚಳುವಳಿ ಒಂದೇ ದಾರಿ.

ಈ ಹಿನ್ನೆಲೆಯಲ್ಲಿ ಮುಂದಿನ ಹಂತದ ಹೋರಾಟ ಇನ್ನಷ್ಟು ತೀವ್ರವಾಗಬೇಕಾದ ಅನಿವಾರ್ಯತೆ, ಅಗತ್ಯತೆ ಇದೆ. ಈ ಹೋರಾಟ ಸ್ಥಳೀಯ ಆಡಳಿತ, ಕ್ಷೇತ್ರದ ಶಾಸಕರು, ಅಧಿಕಾರಿಗಳು, ಸಂಬಂಧಿಸಿದ ಇಲಾಖಾ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರು ಎಲ್ಲರ ಮೇಲೆ ಒತ್ತಡ ಹೇರುವಂತಿರಬೇಕು.

ಬಗರ್ ಹುಕುಂ ಸಾಗುವಳಿದಾರರ ಬೇಡಿಕೆಗಳ ಜೊತೆಗೆ ಬಡವರಿಗೆ ಮನೆ-ನಿವೇಶನಗಳನ್ನು ನೀಡುವ ಕೇಂದ್ರ ಸರ್ಕಾರದ ಯೋಜನೆಗಳೇನಿವೆಯೋ ಅದನ್ನು ಸರಿಯಾಗಿ ಜಾರಿ ಮಾಡುವಂತೆ, ರಾಜ್ಯ ಸರ್ಕಾರವೂ ಜನರ ಅಗತ್ಯಕ್ಕೆ ತಕ್ಕಂತೆ ಮನೆ ನಿವೇಶನ ನೀಡುವ ಯೋಜನೆ ಜಾರಿ ಮಾಡುವುದಕ್ಕೆ ಬದ್ಧವಾಗುವಂತೆ ಒತ್ತಡ ಹೇರುವ ಬಲಿಷ್ಠ ಆಂದೋಲನ ಇಂದಿನ ಸಂದರ್ಭದ ಅಗತ್ಯವಾಗಿದೆ. ಏಪ್ರಿಲ್-ಮೇ ತಿಂಗಳ ಹೋರಾಟ, ಮೇ 21 ರಿಂದ ಬೆಂಗಳೂರು ಮಹಾನಗರದಲ್ಲಿ ಆರಂಭವಾಗುವ ಅನಿರ್ದಿಷ್ಟಾವಧಿ ಹೋರಾಟ ಈ ನಿಟ್ಟಿನಲ್ಲಿ ಮಹತ್ವದ್ದನ್ನು ಸಾಧಿಸುವ ಭರವಸೆಯೊಂದಿಗೆ ಸಿದ್ಧತೆಯಲ್ಲಿದ್ದು ನೊಂದ ಜನ ತಮ್ಮ ಸರ್ವ ಶಕ್ತಿಯನ್ನೂ ತೊಡಗಿಸಿ ಈ ಮಹತ್ವದ ಆಂದೋಲನವನ್ನು ಯಶಸ್ವಿ ಮಾಡುವುದು ಪ್ರಸ್ತುತ ಸಂದರ್ಭದ ಅನಿವಾರ್ಯ ಅಗತ್ಯವಾಗಿದೆ. ಜನ ಚಳುವಳಿಗಳ ಮೇಲಿರುವ ಗಂಭೀರ ಹೊಣೆಗಾರಿಕೆಯಾಗಿದೆ.

ಹೊಸ ಅರ್ಜಿಗಳು

ಈಗಾಗಲೇ ಸಲ್ಲಿಸಲಾಗಿರುವ ಅರ್ಜಿಗಳಲ್ಲದೇ ಈ ಹೋರಾಟದ ಭಾಗವಾಗಿ ಸುಮಾರು ಒಂದು ಲಕ್ಷ ಹೊಸ ಅರ್ಜಿಗಳನ್ನು ಸಲ್ಲಿಸಬೇಕೆಂದು ಚಳುವಳಿ ಕರೆ ನೀಡಿದೆ. ಬಗರ್ ಹುಕುಂ ಸಾಗುವಳಿ ಮಾಡಿದ ಎಷ್ಟೋ ರೈತರಿಗೆ ನಾನಾ ಕಾರಣಗಳಿಂದ ಅರ್ಜಿ ಕರೆದ ಎರಡು ಸಂದರ್ಭದಲ್ಲಿ ಹಿಂದೆ ಅರ್ಜಿ ಹಾಕಿಕೊಳ್ಳಲು ಸಾಧ್ಯವಾಗಿಲ್ಲ. ಮತ್ತು ಅರ್ಜಿ ಕರೆದ ನಂತರದ ದಿನಗಳಲ್ಲಿ ಬಗರ್ ಹುಕುಂ ಸಾಗುವಳಿಗೊಳಗಾದ ಭೂಮಿಯ ಪ್ರಶ್ನೆಯೂ ಇದರಲ್ಲಿದೆ. ಈ ರೀತಿ ಆದಲ್ಲಿ ಭೂಮಿಗಾಗಿ ಚಳುವಳಿಗಿಳಿಯುವ ಬಡವರ ಶಕ್ತಿಯೂ ಹೆಚ್ಚುತ್ತದೆ.

ಸರ್ಕಾರ ಮಾತುಕತೆ ನಡೆಸಲಿ

ಕರ್ನಾಟಕ ರಾಜ್ಯದ ಲಕ್ಷಾಂತರ ಬಡವರ ಬದುಕಿನ ಪ್ರಶ್ನೆಯಾದ ಈ ಭೂಮಿಯ ಪ್ರಶ್ನೆಯನ್ನು ನಿರ್ಲಕ್ಷ್ಯ ಮಾಡುತ್ತಾ ಕಾಲದೂಡುವುದು ಮತ ನೀಡಿದ ಜನರ ನಂಬಿಕೆಗೆ ದ್ರೋಹ ಬಗೆಯುವ ಕೆಲಸವಾಗಿದೆ. ಸರ್ಕಾರ ಇನ್ನಾದರೂ ಈ ಧೋರಣೆ ಕೈಬಿಟ್ಟು ಚಳುವಳಿಗಾರರನ್ನು ಮಾತುಕತೆಗೆ ಆಹ್ವಾನಿಸ ಬೇಕು. ಸಮಸ್ಯೆಯ ಪರಿಹಾರಕ್ಕೆ ವಿಶ್ವಾಸಾರ್ಹ ಕ್ರಮ ವನ್ನು ಕೂಡಲೇ ಆರಂಭಿಸಬೇಕು.

●

ಯುಪಿಎ ದರ್ಬಾರ್

ಪುಟ 13 ರಿಂದ

ಆದರೆ ಸಾಲ ಸೌಲಭ್ಯದ ಮೇಲೆ ಹೆಚ್ಚಿನ ಒತ್ತು ನೀಡುವುದೆಂದರೆ, ಉನ್ನತ ಶಿಕ್ಷಣದ ಬಗ್ಗೆ ಸರಕಾರದ ಜವಾಬ್ದಾರಿಯನ್ನು ವಿದ್ಯಾರ್ಥಿಗಳ ಪಾಲಕರ ಮೇಲೆ, ನಂತರ ಸ್ವತಃ ವಿದ್ಯಾರ್ಥಿಗಳ ಮೇಲೆಯೇ ದಾಟಿಸುವ ಪ್ರಯತ್ನ. ಇಂತಹ ಪಲ್ಲಟ ಉನ್ನತ ಶಿಕ್ಷಣದ ಬೆಳವಣಿಗೆಗಷ್ಟೇ ಅಲ್ಲ, ಸಾಮಾಜಿಕ ಹಂದರ ಮತ್ತು ರಾಷ್ಟ್ರೀಯ ಬೆಳವಣಿಗೆಗೂ ಅಪಾಯಕಾರಿ ಎಂದು ಶಿಕ್ಷಣ ತಜ್ಞರು ಹೇಳುತ್ತಾರೆ.

ವಿಶ್ವಾದ್ಯಂತ ಬಂಡವಾಳಶಾಹಿ ಸರಕಾರಗಳು ಕೂಡ ಉನ್ನತ ಶಿಕ್ಷಣಕ್ಕೆ ಭಾರೀ ಪ್ರಮಾಣದಲ್ಲಿ ಸಾರ್ವಜನಿಕ ಹಣವನ್ನು ವೆಚ್ಚ ಮಾಡುತ್ತವೆ, ಶೈಕ್ಷಣಿಕ ಸಾಲ ವ್ಯವಸ್ಥೆಯ ಮೇಲೆ ಅವುಗಳ ಅವಲಂಬನೆ ಬಹಳ ಸೀಮಿತ; ಆದರೆ ಯುಪಿಎ-2 ಸರಕಾರ ಸಾರ್ವಜನಿಕ ವೆಚ್ಚವನ್ನು ಸಂಪೂರ್ಣವಾಗಿ ನಿಲ್ಲಿಸಿ ಸಾಲಸೌಲಭ್ಯದ ವಿಧಾನವನ್ನೇ ಅವಲಂಬಿಸುವಂತೆ ಕಾಣುತ್ತಿದೆ.

★

ಆರ್ಥಿಕ ಪರಿಸ್ಥಿತಿ: ರಿಝರ್ವ್ ಬ್ಯಾಂಕ್ ಗವರ್ನರರಿಗೂ ಆತಂಕ

ಯುಪಿಎ-2 ಆಳ್ವಿಕೆಯ ಅಡಿಯಲ್ಲಿ ಭಾರತದ ಆರ್ಥಿಕ ಸನ್ನಿವೇಶ ಮತ್ತೆ 1991ರ ಗಂಭೀರ ಪರಿಸ್ಥಿತಿಯನ್ನು ಕಾಣುತ್ತಿದೆಯೇ ಎಂಬ ಆತಂಕ ವ್ಯಕ್ತವಾಗುತ್ತಿದೆ ಎಂದು ನಾವು ಕಳೆದ ವಾರ ಈ ಅಂಕಣದಲ್ಲಿ ನೋಡಿದ್ದೆವು. ಭಾರತದ ರಿಝರ್ವ್ ಬ್ಯಾಂಕಿನ ಗವರ್ನರರಿಗೂ ಇಂತಹ ಆತಂಕ ಕಾಡುತ್ತಿರುವಂತಿದೆ. ಆದರೆ 1991ರ ಪಾವತಿ ಬಾಕಿ ಬಿಕ್ಕಟ್ಟಿನ ಪುನರಾವರ್ತನೆಯ ಸಾಧ್ಯತೆ ಬಹಳ ಕಡಿಮೆ ಎಂದು ಅವರು ಭರವಸೆ ನೀಡಿದ್ದಾರೆ!

ಭಾರತದ ಚಾಲ್ತಿ ಹಣಕಾಸು ಕೊರತೆ 1991ರಲ್ಲಿ ಇದ್ದುದಕ್ಕಿಂತ ಹೆಚ್ಚಿದೆ, ಅಲ್ಪಾವಧಿ ಸಾಲದ ಪ್ರಮಾಣ 1991ರಲ್ಲಿದ್ದಂತೆ ಒಟ್ಟು ಸಾಲದ ದುಪ್ಪಟ್ಟು ಇದೆ, ಇದು ಆತಂಕಕಾರಿ ದೃಶ್ಯವೇ ಆದರೂ, 1991ರಲ್ಲಿ ಒಂದು 'ಅಂತಸ್ಫೋಟ' ಸನ್ನಿಹಿತವಾಗಿತ್ತು, ಆದರೆ 2012ರಲ್ಲಿ ಅಂತಸ್ಫೋಟ ಸನ್ನಿಹಿತವಾಗಿಲ್ಲ ಎಂದು ಅವರು ಹೇಳಿದ್ದಾರೆ. ನವದೆಹಲಿಯಲ್ಲಿ ಗುಂಪು ಚರ್ಚೆಯೊಂದರಲ್ಲಿ ಭಾಗವಹಿಸುತ್ತ ಅವರು 'ಪ್ರಸಕ್ತ ಇಳಿಕೆ ಒಂದು ಅಲ್ಪಾವಧಿ ವಿದ್ಯಮಾನವಷ್ಟೇ, ಬೇಗನೇ ದೀರ್ಘಾವಧಿ ಬೆಳವಣಿಗೆಯ ಚಾಲನಾಶಕ್ತಿಗಳು ಚುರುಕುಗೊಳ್ಳುತ್ತವೆ ಎಂದು ಜಗತ್ತಿಗೆ ತೋರಿಸಬೇಕಾಗಿದೆ' ಎಂದರಂತೆ.

'ಆರ್ಥಿಕ ಸುಧಾರಣೆಯ ಸವಾಲುಗಳು' ಎಂಬ ಹೆಸರಿನ ಈ ಕಾರ್ಯಕ್ರಮದಲ್ಲಿ ಪ್ರಧಾನ ಮಂತ್ರಿಗಳು ಕೂಡ ಭಾಗವಹಿಸಿದ್ದರಂತೆ. ಇದರಲ್ಲಿ ಭಾಗವಹಿಸಿದ್ದ ಚಿಕಾಗೋ ವಿಶ್ವವಿದ್ಯಾಲಯದ ಪ್ರೊ. ರಘುರಾಮ ಜಿ ರಾಜನ್ 'ಎರಡನೇ ತಲೆಮಾರಿನ ಸುಧಾರಣೆಗಳನ್ನು' ಜಾರಿ ಮಾಡಬೇಕು ಎಂದು ಆಗ್ರಹಿಸಿದರಂತೆ. ಇವುಗಳಲ್ಲಿ ಇಂಧನ ಬೆಲೆಗಳನ್ನು ಏರಿಸುವುದು, ವಿದೇಶಿ ಹೂಡಿಕೆಗಳನ್ನು 'ಮೃದುವಾಗಿ' ಕಾಣುವುದು ಕೂಡ ಸೇರಿದೆ! ಪ್ರಧಾನಿಗಳು ಇದರಲ್ಲಿ ಭಾಗವಹಿಸುವ ಆಹ್ವಾನವನ್ನು ಸ್ವೀಕರಿಸಿದ್ದು ತಾನು ಮಾತಾಡುವುದಿಲ್ಲ ಎಂಬ ಶರತ್ತಿನ ಮೇಲಂತೆ. ಆದ್ದರಿಂದ ರಘುರಾಮ ರಾಜನ್ ತನ್ನ ಸರಕಾರ ಹೇಳುವುದನ್ನೇ ಹೇಳಿದ್ದರೂ ಆ ಬಗ್ಗೆ ಮಾತಾಡಲಿಲ್ಲ, ಕಷ್ಟಗಳಿವೆ ಎಂದು ಒಪ್ಪಿಕೊಂಡರಂತೆ. ಆದರೆ ಕಷ್ಟಗಳಿಲ್ಲದಿದ್ದರೆ ಬದುಕಿಗೇನು ಅರ್ಥ ಎಂದೂ ಪ್ರಶ್ನಿಸಿದರಂತೆ? ಅಂದರೆ ಆಮ್ ಆದ್ಮಿಯ ಬದುಕಿಗೊಂದು ಅರ್ಥವಿರಬೇಕಾದರೆ ಅವರಿಗೆ ಸಂಕಟಗಳು ಇರಲೇಬೇಕು, ಇರದಿದ್ದರೆ ಸರಕಾರ ಇರುವುದಾದರೂ ಏತಕ್ಕೇ?

ಅಂದ ಹಾಗೆ ಪೆಟ್ರೋಲ್ ಉತ್ಪನ್ನಗಳ ಬೆಲೆಗಳನ್ನು ಏರಿಸುವ ಬಗ್ಗೆ ಅದನ್ನು ತೆರಬೇಕಾಗಿಲ್ಲದ ಚಿಕಾಗೋ ವಿಶ್ವವಿದ್ಯಾಲಯದ ಪ್ರೊಫೆಸರ್‌ರಿಂದ ಮಾತ್ರವಲ್ಲ, ಬೇರೆಡೆಗಳಿಂದಲೂ ಒತ್ತಡಗಳನ್ನು ನಿರ್ಮಿಸಲಾಗುತ್ತಿದೆ. ತೈಲ ಮಾರಾಟ ಕಂಪನಿಗಳು ಬೆಲೆಗಳನ್ನೇರಿಸಿ, ಇಲ್ಲವಾದರೆ ಸುಂಕಗಳನ್ನಾದರೂ ಇಳಿಸಿ ಎನ್ನಲಾರಂಭಿಸಿವೆಯಂತೆ. ರಿಝರ್ವ್ ಬ್ಯಾಂಕ್ ಕೂಡ ಬೆಲೆಯೇರಿಸಬೇಕು ಎಂದು ಸಲಹೆ ಮಾಡಿದೆಯಂತೆ.

●

JANASHAKTHI KANNADA VARA PATRIKE APRIL 29, 2012 Price : Rs. 5/-
Postal Reg. No. RNP/KA/BGS/2078/2010-12. Posted at MBC Bangalore GPO

ಎಲ್ಲೆಲ್ಲೂ ಅರಳಿನಿಂತ ಜನ

ಸಿಪಿಐ(ಎಂ)20 ನೇ ಮಹಾಧಿವೇಶನದಲ್ಲಿ ಪ್ರತಿನಿಧಿ/ವೀಕ್ಷಕರಾಗಿ ಹಾಗೂ ಏಪ್ರಿಲ್ 9 ರಂದು ನಡೆದ ಐದು ಲಕ್ಷ ಜನರ ರ್‍ಯಾಲಿಯನ್ನು ಕಣ್ತುಂಬಿಸಿಕೊಳ್ಳಲು ಆಗಮಿಸಿದ್ದ ಸಾವಿರಾರು ಸಂಗಾತಿಗಳನ್ನು ಇತ್ತ ಉತ್ತರ ಜಿಲ್ಲೆಯ ಕಣ್ಣೂರು ಹಾಗೂ ವಯನಾಡು ಮತ್ತು ಅತ್ತ ಮಲ್ಲಪುರಂ ಜಿಲ್ಲೆಗಳಿಂದಲೇ ಆಕರ್ಷಕ ಫ್ಲೇಕ್ಸ್‌ಗಳು, ಕೆಂಪು ಕೆಂಪಾದ ಬಾವುಟ ಪರಪರಿಗಳನ್ನು ಆಕರ್ಷಕವಾದ ಮತ್ತು ಚಿತ್ತಾಕರ್ಷಕವಾದ ಚಿತ್ತಾರಗಳ ಕಮಾನುಗಳು ಮತ್ತು ಇತ್ತಿಚೆಗೆ ನಿಧನರಾದ ಸಂಗಾತಿಗಳ ಭಾವಚಿತ್ರಗಳು ಹಾಗೂ ಮಹಾಧಿವೇಶನ ಸಂದೇಶವನ್ನು ಒಳಗೊಂಡ ಪ್ರಚಾರಗಳನ್ನು ಆಯಾ ಪಕ್ಷದ ಸ್ಥಳೀಯ ಮತ್ತು ಪಾದೇಶಿಕ ಸಮಿತಿಗಳೇ ಅಚ್ಚುಕಟ್ಟಾಗಿ ವ್ಯವಸ್ಥೆಗೊಳಿಸಿ ಪ್ರಯಾಣಕ್ಕೊಂದು ಸ್ಫೂರ್ತಿ ಒದಗಿಸಿದ್ದವು. ಇನ್ನೂ ಕಲ್ಲಿಕೋಟೆ ನಗರದ ಪ್ರಚಾರದ ವರ್ಣನೆಯಂತೂ ಹೇಳಲಸಾಧ್ಯ. ನೂರಾರು ಕಲಾವಿದರು, ತಮ್ಮ ಕಲೆಯ ಬಲೆಯನ್ನೇ ಬೀಸಿ ಈ ಮಹಾನಗರಿಯನ್ನೇ ವಶಪಡಿಸಿಕೊಂಡತಿತ್ತು. ಅದರಲ್ಲಿ ವಿಶೇಷವಾಗಿ ಕೇರಳದಲ್ಲಿ ಕಮ್ಯೂನಿಸ್ಟ್ ಚಳುವಳಿಯನ್ನು ಹುಟ್ಟುಹಾಕಲು ಕಾರಣಕರ್ತರಾದ ಕಾಂ. ಕೃಷ್ಣಪಿಳ್ಳೆ, ಕಾಂ.ಇ.ಎಂ.ಎಸ್. ಕಾಂ.ಎ.ಕೆ.ಜಿ. ಯವರ ಭಾವಚಿತ್ರಗಳು ಅವರು ನಡೆಸಿದ ರೈತ ಕಾರ್ಮಿಕ ಆಂದೋಲನದ ಚಿತ್ರಣಗಳು ಚಳುವಳಿಯ ಭಾಗವಾಗಿಯೇ ಬೆಳೆದ ದೇಶಾಭಿಮಾನಿ ಪತ್ರಿಕೆ ಕುರಿತು, ಮಾರ್ಕ್ಸ್ , ಏಂಗೆಲ್ಸ್ ,ಲೆನಿನ್, ಫೀಡಲ್ ಕಾಸ್ಟ್ರೋ, ಚೆಗೆವಾರರ ಭಾವಚಿತ್ರಗಳು ಕಲ್ಲಿಕೋಟೆಯ ನಗರದ್ಯಾಂತ ಕಲಾವಿದರ ಕೈಯಲ್ಲಿ ಅರಳಿ ನಿಂತಿದ್ದವು. ಇದಲ್ಲದೆ 90 ದಶಕದ ನಂತರದಲ್ಲಿ ದೇಶದಲ್ಲಿ ಜಾರಿಯಾದ ಉದಾರೀಕರಣದ ನೀತಿಗಳ ಭಾಗವಾಗಿ ಜನರ ಮೇಲೆ ನೇರ ಪರಿಣಾಮ ಬೀರಿದ ಬೆಲೆಏರಿಕೆ, ಶಿಕ್ಷಣದ ಖಾಸಗೀಕರಣ, ನಿರುದ್ಯೋಗ, ಶೇರುಪೇಟೆ ಕೇಂದ್ರಿತ ಮಾರುಕಟ್ಟೆ ವ್ಯವಸ್ಥೆಗಳನ್ನು ಅಣಕಿಸುವ ಆಕರ್ಷಕ ಕಲಾಕೃತಿಗಳು



ಬೀದಿ ಬೀದಿಗಳಲ್ಲಿ ಅನಾವರಣಗೊಳಿಸಲಾಗಿತ್ತು. ಇನ್ನೂ ಕೆಂಬಾವುಟಗಳಂತೂ ಇಡೀ ನಗರವನ್ನೇ ಸೇನೆಯ ರೀತಿಯಲ್ಲಿ ಆವರಿಸಿಕೊಂಡಿದ್ದವು.


ಇತಿಹಾಸ ಪ್ರದರ್ಶನಕ್ಕೆ ಲಕ್ಷೋಪಲಕ್ಷ ಜನರ ಆಗಮನ:

ಕಲ್ಲಿಕೋಟೆಯ ಟೌನ್‌ಹಾಲ್‌ನಲ್ಲಿ ಸಮ್ಮೇಳನದ ಅಂಗವಾಗಿ ಮಾರ್ಚ 5 ರಿಂದಲೇ ಏರ್ಪಡಿಸಲಾಗಿದ್ದ ಇತಿಹಾಸ ಕುರಿತ ಪ್ರದರ್ಶನವಂತೂ ಜನಾಕರ್ಷಣೆಯ ಕೇಂದ್ರವಾಗಿತ್ತು. ಶತಮಾನಗಳ ಹಿಂದಿನ ಕೇರಳ ಸಮಾಜ, ಅಲ್ಲಿದ್ದ ಜಾತಿ ಆಧಾರಿತ ತಾರತಮ್ಯಗಳು,ಭೂ ಮಾಲಿಕ ವ್ಯವಸ್ಥೆ ಅದರ ದಬ್ಬಾಳಿಕೆಗಳು, ಅದರ ವಿರುದ್ಧ ಜನರು ನಡೆಸಿದ ಹೋರಾಟಗಳು, ಕೇರಳದಲ್ಲಿ ಸ್ವಾತಂತ್ರ್ಯ ಚಳುವಳಿಯ ಆರಂಭ, ಕಾಂಗ್ರೆಸ್ ಮತ್ತು ಸೋಷಿಯಲಿಷ್ಟ ಪಕ್ಷ ,ನಂತರ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ಜಮೀನ್ದಾರಿ ಪದ್ಧತಿ,ವಸಹಾತುಶಾಹಿ ವಿರುದ್ಧ ಮತ್ತು ಕಾರ್ಮಿಕ ಹಕ್ಕುಗಳಿಗಾಗಿ ನಡೆಸಲಾದ ಸಮರಧೀರ ಚಳುವಳಿಗಳು ಅದರ ಭಾಗವಾಗಿಯೇ ನಡೆದ ಚುನಾವಣೆಗಳು ಅದರಲ್ಲಿ ಕಮ್ಯೂನಿಸ್ಟರ ವಿಜಯ ಹಾಗೂ ಜಗತ್ತಿನಲ್ಲಿ ಪ್ರಥಮ ಕಮ್ಯೂನಿಸ್ಟ್ ಸರ್ಕಾರ ರಚನೆ, ಭೂ ಸುಧಾರಣೆ ಕಾನೂನು ಸೇರಿದಂತೆ ಹಲವು ಜನಪರ ಕಾನೂನುಗಳ ಜಾರಿ ಹೀಗೆ..ಇಲ್ಲಿಯುವರೆಗೆ ಕೇರಳ ಸಮಾಜದ ಬೆಳವಣಿಗೆ ಅದರೊಂದಿಗಿನ ಕಮ್ಯೂನಿಸ್ಟ್ ಚಳುವಳಿಯ ಬೆಳವಣಿಗೆ ಕುರಿತು ಲಭ್ಯವಿರುವ ದಾಖಲೆಗಳು, ಛಾಯಚಿತ್ರಗಳು, ಹಾಗೂ ಕಲಾವಿದರು ಕೈ ಚಳಕದಲ್ಲಿ ಬಿಡಿಸಲಾದ ಚಿತ್ರಗಳನ್ನು ವಿವರಣೆ ಸಹಿತ ಮತ್ತು ಗೈಡ್‌ಗಳ ಸಹಿತ ಪ್ರದರ್ಶಿಸಲಾಗಿತ್ತು. ಒಂದು ತಿಂಗಳವರೆಗೆ ನಿಗದಿಯಾಗಿದ್ದ ಈ ಪ್ರದರ್ಶನಕ್ಕೆ ಸಿಕ್ಕ ಅಭೂತಪೂರ್ವ ಜನರ ಸ್ಪಂದನೆ ಅಚ್ಚರಿಗೊಳಿಸುವಂತಿತ್ತು. ಐದು ಲಕ್ಷಕ್ಕಿಂತ ಹೆಚ್ಚಿನ ಜನರು ಈ ಇತಿಹಾಸ ಪ್ರದರ್ಶನಕ್ಕೆ ಭೇಟಿ ನೀಡಿದರು ಎಂದರೆ ಚಳುವಳಿಯೊಂದಿಗೆ ಕೇರಳಿಗರು ಎಷ್ಟೊಂದು ಹಾಸುಹೊಕ್ಕಾಗಿದ್ದಾರೆ ಎನ್ನುವುದನ್ನು ತೋರಿಸುತ್ತದೆ. ಇಷ್ಟುಮಾತ್ರವಲ್ಲ, ಅಲ್ಲಿ ಪ್ರಕಟಿಸಲಾದ ಇತಿಹಾಸ ಪ್ರದರ್ಶನ ಕುರಿತ ರೂ 100 ಬೆಲೆಯ 20 ಸಾವಿರ ಪ್ರತಿಗಳು ಕೂಡ ಮಾರಾಟವಾಗಿ ಇನ್ನೂ ಸಾವಿರಾರು ಪ್ರತಿಗಳಿಗಾಗಿ ಬೇಡಿಕೆ ಬಂದಿತ್ತು. ಬೆಳಗ್ಗಿಯಿಂದಲೇ ಮಕ್ಕಳು,ಹಿರಿಯರು, ಯುವಜನರೆನ್ನದೆ ಸಾಲುಗಟ್ಟಿ ಜನರು ಈ ಪ್ರದರ್ಶನ ವೀಕ್ಷಣೆಗೆ ನಿಲ್ಲುತ್ತಾ ನಾವು ಇತಿಹಾಸವನ್ನು ಅರ್ಥ ಮಾಡಿಕೊಳ್ಳುತ್ತೇವೆ ಮಾತ್ರವಲ್ಲ ಇತಿಹಾಸವನ್ನೂ ನಿರ್ಮಿಸಬಲ್ಲವು ಎಂಬ ಸಂದೇಶ ಸಾರುವಂತಿತ್ತು. ಮಹಾಧಿವೇಶನದ ಪ್ರತಿನಿಧಿಗಳು ಮತ್ತು ಜನರ ವೀಕ್ಷಣೆಯ ಹಸಿವು ನೀಗಿಸಲು ಪ್ರದರ್ಶನವನ್ನು ಏಪ್ರಿಲ್ 9 ರವರೆಗೆ ವಿಸ್ತರಿಲಾಗಿತ್ತು. ಇದಲ್ಲದೆ ಆಂಧ್ರದ ಪ್ರಜಾಶಕ್ತಿ, ತಮಿಳುನಾಡಿನ ಭಾರತಿ ಪ್ರಕಾಶನ ಹಾಗೂ ಮಲೆಯ್ಹಾಳಂನ ಚಿಂತಾ ಪ್ರಕಾಶನಗಳು ತಮ್ಮ ಮಳಿಗೆಗಳ ಮೂಲಕ ಪ್ರತಿನಿಧಿಗಳ ರಿಯಾಯ್ತಿ ದರದಲ್ಲಿ ಪುಸ್ತಕಗಳನ್ನು ಮಾರಾಟ ಮಾಡಿ ಓದುಗರ ಹಸಿವನ್ನು ನೀಗಿಸುವ ಪ್ರಯತ್ನ ಮಾಡಿದವು.

ಮನಸೂರೆಗೊಂಡ ಕ್ರೀಡಾ/ ಸಾಂಸ್ಕೃತಿಕ ಕಾರ್ಯಕ್ರಮಗಳು: ಮಹಾಧಿವೇಶನ ನಡೆದ ಸ್ಥಳವಾದ ರವೀಂದ್ರನಾಥ್ ಠಾಗೋರ ಹಾಲ್ ಆವರಣದಲ್ಲಿ ಪ್ರತಿನಿತ್ಯ ವಿವಿಧ ರೀತಿಯ ಸಾಂಸ್ಕೃತಿಕ ತಂಡಗಳ ಪ್ರದರ್ಶನದ ವೇದಿಕೆಯಾಗಿತ್ತು ವಿಶೇಷವಾಗಿ ಯುವಕಲಾವಿದರ ತಂಡಗಳಿಂದ


ಸಾಂಸ್ಕೃತಿಕ ಕಲರವ

ಕಲಾರಿಪಟ್ಟು, ಕಥಕ್ಕಳಿ, ಕಿರುನಾಟಕ, ಏಕವ್ಯಕ್ತಿ ಪ್ರದರ್ಶನ ಹಾಗೂ ಹಾಡು , ಮಿಮಿಕ್ರಿ ಹೀಗೆ ನಿರಂತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಇದಲ್ಲದೆ ಮಹಾಧಿವೇಶನದ ಅಂಗವಾಗಿ ರಾಷ್ಟ್ರವ್ಯಾಪಿ ಫುಟ್‌ಬಾಲ್ ಸೇರಿದಂತೆ ಇತರೆ ಕ್ರೀಡಾಕೂಟಗಳನ್ನು, ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಿಲಾಗಿತ್ತು ಅಲ್ಲದೆ ವಿಶೇಷವಾಗಿ ಕುಟುಂಬ ಕೂಟಗಳನ್ನು ಏರಿಯಾ ಮಟ್ಟಗಳಲ್ಲಿ ಏರ್ಪಡಿಸಿ ಜನರನ್ನು, ಪಕ್ಷದ ಸದಸ್ಯರು ಹಾಗೂ ಹಿತೈಷಿಗಳನ್ನು ಸಾವಿರಾರು ಸಂಖ್ಯೆಯಲ್ಲಿ ಒಳಗೊಳ್ಳಿಸಲಾಗಿದೆ. ಮಾತ್ರವಲ್ಲ ವಿವಿಧ ಜನಭಾಧಿತ ವಿಚಾರಗಳು ಕುರಿತು ಜಿಲ್ಲೆಯಾದ್ಯಂತ ಸುಮಾರು 60 ಕ್ಕಿಂತ ಹೆಚ್ಚಿನ ವಿಚಾರ ಸಂಕಿರಣಗಳನ್ನು ಸಂಘಟಿಸಿ ನೂರಕ್ಕೂ ಹೆಚ್ಚಿನ ಬರಹಗಾರರು, ಸಾಹಿತಿಗಳು, ಕಲಾವಿದರು ಹಾಗೂ ಹೋರಾಟಗಾರರನ್ನು ಪಾಲ್ಗೊಳಿಸಲಾಗಿತ್ತು.


ಇತಿಹಾಸ ಪ್ರದರ್ಶನದಲ್ಲಿ ಜನರು

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH